ಸಂಪುಟ: 38 ಸಂಚಿಕೆ: 01 | ಮಾರ್ಚ್ 2025
ಬೆಲೆ: ರೂ. 7/-

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ | SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

**ಒಳ ಪುಟಗಳಲ್ಲಿ............**

ಎಸ್‌ಯುಸಿಐ(ಸಿ)ಸಂಘಟಿತ ಮಹಾ ಮೆರವಣಿಗೆ: ಕೊಲ್ಕತ್ತಾ ---------------------------3
ಕೃಷಿ ಮಾರುಕಟ್ಟೆಯ ಹೊಸ ರಾಷ್ಟ್ರೀಯ ನೀತಿಯ ರೂಪುರೇಷೆ ---------------------------4
ಮೆಟ್ರೋ ದರ ಏರಿಕೆ ವಿರುದ್ಧ ಪ್ರಯಾಣಿಕರ ಸಮಾವೇಶ ---------------------------5
ಗ್ಯಾಸ್ ಚೇಂಬರ್‌ನಂತಾದ ದೆಹಲಿ-----------7
ಮಹಾ ಕುಂಭಮೇಳದ ದುರಂತ-ವಿಶ್ಲೇಷಣೆ----9

## ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಪಡಿಸಿ-ಜನಾರೋಗ್ಯ ಖಚಿತ ಪಡಿಸಿ

**- ಎಸ್‌ಯುಸಿಐ(ಸಿ) ಆಗ್ರಹ!**

"ಸಾಲುಸಾಲು ಬಾಣಂತಿ ಸಾವು", "ಐಸಿಯುನಲ್ಲಿ ಬೆಡ್ ಸಿಗದೆ ಪರದಾಟ", "ಆಸ್ಪತ್ರೆಗಳಲ್ಲಿ ಈ ಪರೀಕ್ಷೆಗಳನ್ನು ಮಾಡಲಾಗುವುದಿಲ್ಲ" "ಆಸ್ಪತ್ರೆಗಳಲ್ಲಿ ಔಷಧಗಳನ್ನು ಖಾಸಗಿಯಿಂದ ಕೊಳ್ಳಲು ಹೇಳಲಾಗುತ್ತಿದೆ", "ಆಸ್ಪತ್ರೆಗಳು ಬಂದ್", ಪತ್ರಿಕೆಗಳಲ್ಲಿ ಇಂತಹ ವರದಿಗಳು ದಿನನಿತ್ಯದ ಸಂಗತಿಗಳಾಗಿ ಬಿಟ್ಟಿವೆ. ಇವು ರಾಜ್ಯದ ಸಾರ್ವಜನಿಕ ಆಸ್ಪತ್ರೆಗಳ ಹಾಗೂ ಒಟ್ಟಾರೆಯಾಗಿ ಆರೋಗ್ಯ ವ್ಯವಸ್ಥೆಯ ಶೋಚನೀಯ ಪರಿಸ್ಥಿತಿಗೆ ಹಿಡಿದ ಕನ್ನಡಿ. ರಾಜ್ಯದಲ್ಲಿ 24 ಸರ್ಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಗಳು, 216 ಸಾರ್ವಜನಿಕ ಆಸ್ಪತ್ರೆಗಳ ಅಸ್ತಿತ್ವದ ಬಗ್ಗೆ ಸರ್ಕಾರದ ಅಂಕಿಅಂಶಗಳಿದ್ದರೂ, ಜನರು ಆರೋಗ್ಯಕ್ಕಾಗಿ ಪರದಾಡುವ ದುಃಸ್ಥಿತಿ ಏಕಿದೆ ಎಂಬ ಪ್ರಶ್ನೆ ಏಳುತ್ತದೆ ಮತ್ತು ಅದನ್ನು ಅವಲೋಕಿಸುವ ತುರ್ತು ಉಂಟಾಗಿದೆ. ಇತ್ತೀಚಿನ ದಿನಗಳಲ್ಲಿ ತಾಯಂದಿರ ಅಕಾಲಿಕ ಮತ್ತು ಅಸಹಜ ಸಾವುಗಳು ಇಡೀ ರಾಜ್ಯದ ಜನತೆಯ ಹೃದಯವನ್ನು ಕಲಕಿವೆ.

### ಸಾರ್ವಜನಿಕ ಆರೋಗ್ಯ ಕ್ಷೇತ್ರವೇ ಐಸಿಯುನಲ್ಲಿ!

ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಸರ್ಕಾರ ನಿಗದಿ ಪಡಿಸುವ ಮೊತ್ತ ವರ್ಷ ವರ್ಷ ಕಡಿತಗೊಳ್ಳುತ್ತಿದ್ದು, ಸರ್ಕಾರಿ ಆಸ್ಪತ್ರೆಗಳು ಅನೇಕ ಕೊರತೆಗಳಿಂದ ಬಳಲುತ್ತಿವೆ. ಇದೀಗ ಕರ್ನಾಟಕ ರಾಜ್ಯ ಸರ್ಕಾರ 2023-24ರ ಬಜೆಟ್ಟಿನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಕೊಡುತ್ತಿರುವ ಹಣ ಬಜೆಟ್ಟಿನ 4% ಮಾತ್ರ. ಹಾಗಾಗಿ, ಸಾರ್ವಜನಿಕ ಆಸ್ಪತ್ರೆಗಳಲ್ಲಿ, ಮೂಲ ಸೌಕರ್ಯಗಳು, ಅವಶ್ಯಕ ವೈದ್ಯಕೀಯ ಮತ್ತು ವೈದ್ಯೇತರ ಸಿಬ್ಬಂದಿಗಳ ಕೊರತೆಯೊಂದಿಗೆ, ಔಷಧಗಳು, ಪ್ರಯೋಗಾಲಯಗಳಿಗೆ ಅವಶ್ಯಕವಾದ ರಾಸಾಯನಿಕ ರಿಯೇಜೆಂಟ್‌ಗಳು, ಉಪಕರಣಗಳು ಲಭ್ಯವಿಲ್ಲದೆ ರೋಗಿಗಳು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ, ಉಚಿತವಾಗಿ ಲಭಿಸಬೇಕಾಗಿದ್ದಂತಹ ಪರೀಕ್ಷೆಗಳು, ಬಹುತೇಕವಾಗಿ ಲಭ್ಯವಿರದೆ, ಅವನ್ನು ದುಬಾರಿ ಬೆಲೆ ಕೊಟ್ಟು ಹೊರಗೆ ಮಾಡಿಸಬೇಕಾಗುತ್ತದೆ. ಅಲ್ಲದೆ ಜನಸಂಖ್ಯೆಗೆ ಅನುಗುಣವಾದಷ್ಟು ಪ್ರಯೋಗಾಲಯಗಳು, ತಂತ್ರಜ್ಞರು, ವೈದ್ಯರೂ ಸಹ ಇಲ್ಲದ ಕಾರಣ, ಇದಕ್ಕಾಗಿ ರೋಗಿಗಳು ಮೈಲುಗಟ್ಟಲೆ ಸರದಿ ಸಾಲಿನಲ್ಲಿ ನಿಲ್ಲಬೇಕಾಗುತ್ತದೆ. ಮೊದಲು ಹೊರರೋಗಿ ಚೀಟಿ ಪಡೆಯಲು, ನಂತರ ವೈದ್ಯರನ್ನು ನೋಡಲು, ಬಳಿಕ ಪರೀಕ್ಷೆಗಾಗಿ, ಅವುಗಳ ಫಲಿತಾಂಶಕ್ಕಾಗಿ, ತದನಂತರ ಅದನ್ನು ಮತ್ತೆ ವೈದ್ಯರಿಗೆ ತೋರಿಸಿ ಚಿಕಿತ್ಸೆ ಪಡೆಯಲು, ಹೀಗೆ ಸರದಿ ಸಾಲಿನಲ್ಲಿ ನಿಲ್ಲಬೇಕಾಗುವ, ಕಾಯಿಲೆಯಿಂದ ನರಳುತ್ತಿರುವ ರೋಗಿಗಳ ದುರವಸ್ಥೆಯನ್ನೊಮ್ಮೆ ಊಹಿಸಿಕೊಳ್ಳಿ!

ಸರ್ಕಾರಿ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಅತ್ಯಾವಶ್ಯವಾದ ಕಾಯಂ ಸಿಬ್ಬಂದಿಗಳ ನೇಮಕಾತಿ ನಡೆಯದೆ ಬಹುತೇಕವಾಗಿ ಗುತ್ತಿಗೆ ಸಿಬ್ಬಂದಿಗಳೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರೂ ಸಹ ಅವಶ್ಯಕ ಸಂಖ್ಯೆಯಲ್ಲಿ ಇಲ್ಲ; ಅಲ್ಲದೆ, ತಜ್ಞ ವೈದ್ಯರ ಕೊರತೆಯಿಂದ, ಅವರ ಸ್ಥಾನಕ್ಕೆ ಆ ವಿಶೇಷತೆಯಲ್ಲಿ ಪರಿಣತಿ ಇಲ್ಲದವರನ್ನು ನೇಮಕ ಮಾಡಿರುವುದರಿಂದ ರೋಗಿಗಳಿಗೆ ಸೂಕ್ತ ಚಿಕಿತ್ಸೆ ದೊರಕುತ್ತಿಲ್ಲ.

ಸ್ವಾತಂತ್ರ್ಯ ನಂತರದ ಕೆಲವು ದಶಕಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ದೊರಕುತ್ತಿದ್ದ ಉಚಿತ ಚಿಕಿತ್ಸೆಗೆ, ನಂತರದ ವರ್ಷಗಳಲ್ಲಿ ಸೇವಾ ದರ ನಿಗದಿ ಪಡಿಸಲಾಗಿದೆ. ಅಂತ್ಯೋದಯ, ಬಿಪಿಎಲ್ ಕಾರ್ಡ್‌ಗಳಿದ್ದವರೂ ಹಣ ಪಾವತಿಸಬೇಕಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಈ ದರಗಳು ಕೆಲವು ಖಾಸಗಿ ನರ್ಸಿಂಗ್ ಹೋಂಗಳ ದರದೊಂದಿಗೆ ಸ್ಪರ್ಧಿಸುತ್ತಿವೆ.

2ನೇ ಪುಟಕ್ಕೆ




ರ್ಯಾಲಿಯ ನೇತೃತ್ವದಲ್ಲಿ ಕಾ.ರಾಮಾಂಜನಪ್ಪ, ಎಸ್‌ಯುಸಿಐ(ಸಿ) ರಾಜ್ಯ ಸಮಿತಿ ಸದಸ್ಯರು

## ಜನರ ನಿರೀಕ್ಷೆ ಹುಸಿಗೊಳಿಸಿದ ರಾಜ್ಯ ಬಜೆಟ್

**- ಎಸ್‌ಯುಸಿಐ(ಸಿ)**

**07/03/2025: ಎಸ್‌ಯುಸಿಐ(ಸಿ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾ. ಕೆ. ಉಮಾ ಅವರ ತಕ್ಷಣದ ಪ್ರತಿಕ್ರಿಯೆ:**

ವಿಧಾನಸಭೆಯಲ್ಲಿ ಇಂದು ಮಾನ್ಯ ಸಿದ್ದರಾಮಯ್ಯನವರು 16ನೇ ಬಾರಿ ಮಂಡಿಸಿದ 2025-26ನೇ ಸಾಲಿನ ಬಜೆಟ್ ರಾಜ್ಯದ ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದೆ ಎಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಡುತ್ತದೆ.

ರೈತರ, ಕಾರ್ಮಿಕರ ಸಂಕಷ್ಟಗಳನ್ನು ಪರಿಗಣಿಸಿಲ್ಲ. ಉದ್ಯಮಸ್ನೇಹಿ ಪಟ್ಟ ಪಡೆಯಲು, ಉದ್ಯೋಗದಾತರು ತಮ್ಮ ನಿಬಂಧನೆಗಳನ್ನು ಪಾಲಿಸದೇ ಇದ್ದಾಗ, ಅವರ ಮೇಲಿನ ಕ್ರಿಮಿನಲ್ ಪ್ರಕರಣಗಳನ್ನು ಕೈಬಿಡುವ ತಿದ್ದುಪಡಿ ಮಸೂದೆಗೆ ಸರ್ಕಾರ ಮುಂದಾಗಿದೆ. ಉತ್ತರ ಕರ್ನಾಟಕದ ರೈತರು ಗುಳೆ ಹೋಗುವುದನ್ನು ತಪ್ಪಿಸಲು ಯಾವುದೇ ನಿರ್ದಿಷ್ಟ ಕ್ರಮಗಳಿಲ್ಲ.

ಹೊಸದಾಗಿ ಕರ್ನಾಟಕ ಪಬ್ಲಿಕ್ ಶಾಲೆಗಳ ಆರಂಭಕ್ಕೆ ಎಡಿಬಿ ವತಿಯಿಂದ ರೂ. 2,500 ಕೋಟಿ ಸಾಲ, ಉನ್ನತ ಶಿಕ್ಷಣದ ಸುಧಾರಣೆಗೆ ವಿಶ್ವಬ್ಯಾಂಕ್ ಸಾಲ ಇತ್ಯಾದಿಗಳು ಆತಂಕಕಾರಿ ನಿಲುವುಗಳಾಗಿವೆ. ರಾಜ್ಯ ಬಜೆಟಿನ ಸುಮಾರು ರೂ. 4,00,000 ಕೋಟಿಯಲ್ಲಿ ರೂ. 1 ಲಕ್ಷ ಕೋಟಿಯಷ್ಟು ಸಾಲವೇ ಇದೆ. ಆಗರ್ಭ ಶ್ರೀಮಂತರಿಗೆ ಹೆಚ್ಚುವರಿ ತೆರಿಗೆ ವಿಧಿಸಿ ಸಮಾಜ ಕಲ್ಯಾಣ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಸಲಹೆಯನ್ನು ಪರಿಗಣಿಸಿಲ್ಲ.

ಒಂದೆಡೆ ರೂ.51,000 ಕೋಟಿಗಳನ್ನು ಗ್ಯಾರಂಟಿ ಯೋಜನೆಗಳಿಗೆ ನೀಡಿದ ಸರ್ಕಾರ, ಇನ್ನೊಂದೆಡೆ ರೂ. 40,000 ಕೋಟಿಯಷ್ಟು ಮಾರಾಟ ಗುರಿಯನ್ನು ಅಬಕಾರಿ ಇಲಾಖೆಗೆ ನೀಡಿದೆ. ಉದ್ಯೋಗ ಸೃಷ್ಟಿಗೆ ಸಮರ್ಪಕ ಕ್ರಮಗಳಿಲ್ಲ. ಕೇವಲ ಯುವನಿಧಿ ಯೋಜನೆಯೇ ಪರಿಹಾರವಾಗದು.

ಇನ್ನು, ಬಹು ಬೇಡಿಕೆಯ ಪುತ್ತೂರಿನ ಸರ್ಕಾರಿ ವೈದ್ಯಕೀಯ ಕಾಲೇಜು, ಮೈಸೂರು ಮತ್ತು ಕಲಬುರ್ಗಿಯಲ್ಲಿ ನಿಮ್ಹಾನ್ಸ್ ಮಾದರಿಯ ಸೌಲಭ್ಯ ಸ್ಥಾಪನೆ, ಹೊಸ ತಾಲೂಕುಗಳಲ್ಲಿ ಆಸ್ಪತ್ರೆಗಳ ಉನ್ನತೀಕರಣ ಮೊದಲಾದವು ಕೆಲವು ಸ್ವಾಗತಾರ್ಹ ಯೋಜನೆಗಳು.

ಅಂಗನವಾಡಿ, ಬಿಸಿಯೂಟ, ಅತಿಥಿ ಶಿಕ್ಷಕರ ಗೌರವಧನ ಏರಿಕೆ ಘೋಷಣೆಯಾದರೂ ಸಂಪೂರ್ಣ ತೃಪ್ತಿಕರವಾಗಿಲ್ಲ. ಆಶಾ ಕಾರ್ಯಕರ್ತೆಯರಿಗೆ ರೂ. 1000 ಏರಿಕೆ ಯಾವ ರೀತಿ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

ಆದ್ದರಿಂದ ಈ ರಾಜ್ಯ ಬಜೆಟ್ ಒಟ್ಟಾರೆಯಾಗಿ ವಿಶೇಷತೆಗಳಿಲ್ಲದ ಪ್ರತಿ ವರ್ಷದ ಒಂದು ಸಾಂಪ್ರದಾಯಿಕ ದಾಖಲೆಯಷ್ಟೇ ಆಗಿದೆ ಎಂದು ಎಸ್‌ಯುಸಿಐ(ಸಿ) ಅಭಿಪ್ರಾಯ ಪಡುತ್ತದೆ.

## ದೆಹಲಿ ರೈಲ್ವೆ ನಿಲ್ದಾಣದಲ್ಲಿನ ಕಾಲ್ತುಳಿತದ ಸಾವಿಗೆ ಬಿಜೆಪಿ ಉತ್ತರ ಕೊಡಲಿ!

**ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ 16.02.2025ರಂದು ನೀಡಿರುವ ಪತ್ರಿಕಾ ಹೇಳಿಕೆಯ ಸಾರಾಂಶ:**

ಪ್ರಯಾಗ್‌ರಾಜ್‌ನಲ್ಲಿ ಮಹಾ ಕುಂಭಮೇಳದಲ್ಲಿ ಕಾಲ್ತುಳಿತದಿಂದಾದ ಸಾವು-ನೋವುಗಳ ಬೆನ್ನಲ್ಲೇ, 15.02.2025ರಂದು ನವದೆಹಲಿಯ ರೈಲು ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ ಬದಲಾವಣೆಯನ್ನು ತಪ್ಪಾಗಿ ಘೋಷಿಸಿದ ಕಾರಣದಿಂದ ಇನ್ನೊಂದು ಭೀಕರ ಕಾಲ್ತುಳಿತದ ಘಟನೆ ನಡೆದಿದೆ. ಸಾವಿರಾರು ಭಕ್ತರು ತುಂಬಿತುಳುಕುತ್ತಿದ್ದ ಸ್ಥಳದಲ್ಲಿ ಗುಂಪನ್ನು ನಿಯಂತ್ರಿಸಲು ಸೂಕ್ತ ಭದ್ರತಾ ಕ್ರಮ ಕೈಗೊಳ್ಳದ್ದು ಮತ್ತು ಇದ್ದಕ್ಕಿದ್ದಂತೆ ಪ್ಲಾಟ್‌ಫಾರ್ಮ್ ಬದಲಾಯಿಸಿದ್ದೇ ಇದಕ್ಕೆ ಕಾರಣ ಎಂದು ವರದಿಯಾಗಿದೆ. ಹಿಂದೂ ಧರ್ಮದ ಸ್ವಯಂ ಘೋಷಿತ ವಕ್ತಾರರಾದ ಆರ್‌ಎಸ್‌ಎಸ್-ಬಿಜೆಪಿಗಳು ಹಿಂದೂ ಕೋಮುವಾದದ ದಳ್ಳುರಿಗೆ ತುಪ್ಪ ಹಾಕಿ, ಕೋಟಿಗಟ್ಟಲೆ ಹಣ ಸಂಪಾದಿಸುತ್ತಾ, ಅತಿಯಾಗಿ ವೈಭವೀಕರಿಸಿದ್ದ ಮಹಾಕುಂಭ ಇನ್ನೆಷ್ಟು ಆಹುತಿ ಬೇಡಲಿದೆಯೋ! ಬಹುತೇಕ ಬಡವರನ್ನೇ ಒಳಗೊಂಡಿರುವ ಜನರ ಜೀವಹಾನಿಗೆ ಬಿಜೆಪಿ ನೇತೃತ್ವದ ಕೇಂದ್ರ ಮತ್ತು ಉತ್ತರ ಪ್ರದೇಶ ಸರ್ಕಾರಗಳು ಉತ್ತರದಾಯಿತ್ವ ಹೊರಬೇಕಾಗುತ್ತದೆ. ಯಾವುದೇ ಪರಿಹಾರವು ಆಗಿರುವ ನಷ್ಟವನ್ನು ತುಂಬಿ ಕೊಡಲಾರದು. ಹಿಂದೂ ಮತಬ್ಯಾಂಕನ್ನು ಸದೃಢೀಕರಿಸುವ ದೃಷ್ಟಿಯಿಂದ, ಹಿಂದೂಗಳನ್ನು ಇಷ್ಟೊಂದು ಸಂಖ್ಯೆಯಲ್ಲಿ ಅಲ್ಲಿ ಸೇರಲು ಪ್ರಚೋದಿಸಿ, ಅವರಿಗೆ ಸರಿಯಾದ ಸೌಕರ್ಯಗಳನ್ನು ವ್ಯವಸ್ಥೆ ಮಾಡಿಕೊಡದ ಸರ್ಕಾರಗಳ ದಿವ್ಯ ನಿರ್ಲಕ್ಷ್ಯವನ್ನು, ಆಡಳಿತಾಂಗದ ವೈಫಲ್ಯವನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ.

# ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಪಡಿಸಿ

1ನೇ ಪುಟದಿಂದ ಹೀಗೆ, ಒಂದು ಸಾಮಾಜಿಕ ಹೊಣೆಗಾರಿಕೆಯಾಗಿರಬೇಕಿದ್ದ ಸೇವೆ ಇಂದು ಖಾಸಗೀಕರಣದ ದಾಳಿಗೆ ಒಳಗಾಗಿ ನೆಲ ಕಚ್ಚಿರುವ ದುರಂತ ನಮ್ಮ ಮುಂದಿದೆ.

### ಜಾಗತೀಕರಣ ನೀತಿಗಳ ದುಷ್ಪ್ರಭಾವ

1946ರಲ್ಲಿ ರಚನೆಯಾದ ಭೋರ್ ಸಮಿತಿಯ ಶಿಫಾರಸ್ಸುಗಳಲ್ಲಿದ್ದ ಒಂದು ಪ್ರಮುಖ ಅಂಶವೆಂದರೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜನರ ಆರೋಗ್ಯ ರಕ್ಷಣೆಯ ಸಂಪೂರ್ಣ ಜವಾಬ್ದಾರಿ ಸರ್ಕಾರದ್ದೇ ಆಗಿದ್ದು, ಅದು ಜನರ ಕೊಳ್ಳುವ ಶಕ್ತಿಯನ್ನು ಅವಲಂಬಿಸದೆ, ಅದರ ಹಣಕಾಸನ್ನು ಜನರ ತೆರಿಗೆಯಿಂದಲೇ ಭರಿಸಬೇಕು ಎಂದು. ಇದು ಸಂಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರದಿದ್ದರೂ, ಬಹುತೇಕವಾಗಿ ಸರ್ಕಾರಿ ಸಂಸ್ಥೆಗಳೇ ಜನರಿಗೆ ತಕ್ಕಮಟ್ಟದ ಒಳ್ಳೆಯ ಚಿಕಿತ್ಸೆ ಒದಗಿಸುತ್ತಿದ್ದು, ಬೆರಳೆಣಿಕೆಯಷ್ಟು ಮಾತ್ರ ಖಾಸಗಿ ನರ್ಸಿಂಗ್ ಹೋಂಗಳು ಅಸ್ತಿತ್ವದಲ್ಲಿದ್ದವು. ಸರ್ಕಾರಿ ಆಸ್ಪತ್ರೆಗಳಲ್ಲಿ ಪರಿಣಿತ ತಜ್ಞರು ಲಭ್ಯವಿದ್ದು, ರಾಜಕಾರಣಿಗಳನ್ನು ಒಳಗೊಂಡಂತೆ ಉಳ್ಳವರೂ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಆದರೆ, 90ರ ದಶಕದಲ್ಲಿ ವಿಶ್ವದಾದ್ಯಂತ ಬಂಡವಾಳಶಾಹಿ ವ್ಯವಸ್ಥೆ ತೀವ್ರ ಬಿಕ್ಕಟ್ಟಿಗೆ ಒಳಗಾದಾಗ ಸಾಮ್ರಾಜ್ಯಶಾಹಿಗಳು ತಮ್ಮ ಕುಸಿಯುತ್ತಿರುವ ಮಾರುಕಟ್ಟೆಯನ್ನು ಉಳಿಸಿಕೊಳ್ಳಲು ತಂದಿದ್ದೇ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳು. ಆಗ ಅವರಿಗೆ ಕಂಡಿದ್ದು ಸಾಮಾಜಿಕ ಭದ್ರತೆಯಾಗಿ ಜನರಿಗೆ ಲಭ್ಯವಾಗುತ್ತಿದ್ದ ಸಾರ್ವಜನಿಕ ಆರೋಗ್ಯ ಕ್ಷೇತ್ರ. ಅಲ್ಲಿ ವಿಪುಲ ಅವಕಾಶಗಳನ್ನು ಕಂಡುಕೊಂಡ ಸಾಮ್ರಾಜ್ಯಶಾಹಿಗಳು ಅಲ್ಲಿ ಲಗ್ಗೆ ಇಟ್ಟು ಅತ್ಯಧಿಕ ಲಾಭ ದೋಚುವ ದಾರಿ ಕಂಡುಕೊಂಡರು. ವಿಶ್ವ ಸಾಮ್ರಾಜ್ಯಶಾಹಿಯ ಭಾಗವಾಗಿರುವ ಭಾರತ ಸಹ ಆಗ ಈ ನೀತಿಗಳನ್ನು ಅಳವಡಿಸಿಕೊಂಡಿತು. ಮೊದಲಿಗೆ, ಕೇಂದ್ರದ ಕಾಂಗ್ರೆಸ್ ಸರ್ಕಾರ ಇವನ್ನು ಜಾರಿಗೆ ತಂದು, ಮುಂದೆ ಅವನ್ನು ಬಿಜೆಪಿ ನೇತೃತ್ವದ ಸರ್ಕಾರ ಇನ್ನಷ್ಟು ಬಲಪಡಿಸಿದ ನಂತರ, ಆರೋಗ್ಯ ಸೇವೆ ಕ್ರಮೇಣವಾಗಿ ಖಾಸಗಿ ಉದ್ದಿಮೆಯಾಗಿ ಬದಲಾಗಿದೆ. ಇತ್ತೀಚಿನ ದಶಕಗಳಲ್ಲಿ ಸರ್ಕಾರಗಳ ಕೃಪೆಯಿಂದ ಈ ಕ್ಷೇತ್ರ ಕಾರ್ಪೊರೇಟೀಕರಣಕ್ಕೆ ಒಳಗಾದ ಬಳಿಕವಂತೂ ಸಾರ್ವಜನಿಕ ಆರೋಗ್ಯ ಸೇವೆ ಅಸೀಮ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಅಷ್ಟಲ್ಲದೆ, ಸಾರ್ವಜನಿಕ–ಖಾಸಗಿ ಸಹಯೋಗದಲ್ಲಿ ಕೆಲವೊಂದು ಆಸ್ಪತ್ರೆಗಳನ್ನು ನಡೆಸಲು ಸರ್ಕಾರ ಯೋಜಿಸಿರುವುದು, ಅಲ್ಲಿ ಬಡ ರೋಗಿಗಳಿಗೆ ಚಿಕಿತ್ಸೆಯನ್ನು ನಿರಾಕರಿಸಿದಂತೆಯೇ! ಜೊತೆಗೆ, ಒಂದೆಡೆ ಸರ್ಕಾರಗಳು ಸಾರ್ವಜನಿಕ ಆಸ್ಪತ್ರೆಗಳನ್ನು ಕಡೆಗಣಿಸುತ್ತಾ, ಇನ್ನೊಂದೆಡೆ ವೈದ್ಯಕೀಯ ವಿಮೆಯ ಹೆಸರಿನಲ್ಲಿ ಖಾಸಗಿಯವರೊಡನೆ ಕೈಜೋಡಿಸಿ, ಸರ್ಕಾರಿ ಸಂಸ್ಥೆಗಳಲ್ಲಿ ನಿರ್ದಿಷ್ಟ ಚಿಕಿತ್ಸೆಯ ಅಲಭ್ಯತೆಯ ಕಾರಣ ನೀಡಿ, ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಾ ಅವರ ಖಜಾನೆಗಳನ್ನು ರಾಜಾರೋಷವಾಗಿ ತುಂಬುತ್ತಿವೆ.

### ಭ್ರಷ್ಟಾಚಾರದ ತಾಂಡವ ನೃತ್ಯ!

ಕಾರ್ಪೊರೇಟ್ ಆಸ್ಪತ್ರೆಗಳಿಗೆ ಕಾಲಿಡಲೂ ಸಾಧ್ಯವಿಲ್ಲದ ಬಡ ಜನತೆ ಈಗಲೂ ಆಶ್ರಯಿಸಿರುವುದು ಸರ್ಕಾರಿ ಆಸ್ಪತ್ರೆಗಳನ್ನೇ. ಆದರೆ, ಅಲ್ಲಿ ಸರ್ಕಾರ ನಿಗದಿ ಪಡಿಸಿರುವ ದರದೊಂದಿಗೆ ಲಂಚವನ್ನೂ ನೀಡಬೇಕಾದ ಅನಿವಾರ್ಯತೆ ಇದೆ. ಜೊತೆಗೆ, ಆಸ್ಪತ್ರೆಗಳಿಗೆ ಅವಶ್ಯವಾದ ಪ್ರತಿಯೊಂದು ಖರೀದಿಯಲ್ಲೂ ಲಂಚದ ವಾಸನೆ ದಟ್ಟವಾಗಿದೆ. ಅವಶ್ಯ ಉಪಕರಣಗಳು, ರಾಸಾಯನಿಕಗಳು, ಔಷಧಿಗಳು, ಕೈಗವಸು, ಮಾಸ್ಕ್‌ಗಳು ಮುಂತಾದ ಏಕ ಬಳಕೆಯ ವಿಭಿನ್ನ ವಸ್ತುಗಳು, ಇವೆಲ್ಲಾ ಖರೀದಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕೋವಿಡ್ ಸಮಯದಲ್ಲಿ ನಡೆದ ಖರೀದಿಯಲ್ಲಿ ಲೋಕಾಯುಕ್ತದ ತನಿಖೆಯಲ್ಲಿ ಬಹಳಷ್ಟು ಸತ್ಯ ಹೊರಬಂದಿರುವುದು ಎಲ್ಲರಿಗೂ ಗೊತ್ತಿರುವುದೇ. ಅಲ್ಲದೇ, ಕೇವಲ ಹಣ ಮಾಡಿಕೊಳ್ಳುವ ಉದ್ದೇಶದಿಂದ ರೋಗಿಗಳ ಪ್ರಾಣಕ್ಕೆ ಅಪಾಯ ತಂದೊಡ್ಡುವ ಕಳಪೆ ಸಾಮಗ್ರಿಗಳ ಖರೀದಿಯಂತೂ ದಿಗ್ಭ್ರಮೆ ಪಡಿಸುವಂತಹದು. ಜೀವ ಉಳಿಸುವ ಔಷಧಿ ಅಥವಾ ಯಾವುದೇ ಸಾಮಗ್ರಿ ಜೀವಕ್ಕೇ ಕುತ್ತು ತರುವುದೆಂದರೆ, ನಾವು ಎಂತಹ ವ್ಯವಸ್ಥೆಯಲ್ಲಿದ್ದೇವೆ ಎಂಬ ಪ್ರಶ್ನೆಯನ್ನು ಇದು ಎಬ್ಬಿಸುತ್ತದೆ.

ಇಂತಹ ಸಂಕಷ್ಟದ ಸಂದರ್ಭದಲ್ಲಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಉಳಿಸಿ ಬೆಳೆಸಲು ಹಾಗೂ ಎಲ್ಲಾ ವರ್ಗದ ಜನತೆಗೂ ಉತ್ತಮ ದರ್ಜೆಯ ವೈದ್ಯಕೀಯ ಸೇವೆ ಸಿಗುವಂತಾಗಲು, ನಮ್ಮ ಪಕ್ಷ ಎಸ್‌ಯುಸಿಐ(ಸಿ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹೋರಾಟವನ್ನು ಕೈಗೆತ್ತಿಕೊಂಡಿದೆ. ಜನರಿಗೆ ಆರೋಗ್ಯವನ್ನು ಖಚಿತ ಪಡಿಸಲು, ಸಾರ್ವಜನಿಕ ಆರೋಗ್ಯ ಸೇವೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಪಕ್ಷ ಕಟ್ಟುತ್ತಿರುವ ಈ ಹೋರಾಟದಲ್ಲಿ ಎಲ್ಲಾ ರೀತಿಯಿಂದ ತೊಡಗಲು ಜನತೆಗೆ ಕರೆ ನೀಡುತ್ತದೆ. ವಿವಿಧ ಜಿಲ್ಲೆಗಳಲ್ಲಿ ಜನರಿಂದ ಅಭೂತಪೂರ್ವ ಪ್ರತಿಸ್ಪಂದನೆ ಸಿಗುತ್ತಿದ್ದು, ಜಾಣ ಕಿವುಡು ಸರ್ಕಾರಕ್ಕೆ ಜನಾಗ್ರಹದ ಒಕ್ಕೊರಲ ಕೂಗು ತಲುಪಬೇಕಾಗಿದೆ.



ಸಮಾವೇಶದಲ್ಲಿನ ಪ್ರತಿನಿಧಿಗಳು



ರ್‍ಯಾಲಿಯ ನೇತೃತ್ವದಲ್ಲಿ ಕಾ.ರಾಮಾಂಜನಪ್ಪ, ಎಸ್‌ಯುಸಿಐ(ಸಿ) ರಾಜ್ಯ ಸಮಿತಿ ಸದಸ್ಯರು

**ಜನಾಗ್ರಹಗಳು:**

1. ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳಲ್ಲಿ ಮೂಲ ಸೌಕರ್ಯ ವೃದ್ಧಿ ಪಡಿಸಿ, ಅವಶ್ಯ ವೈದ್ಯಕೀಯ ಮತ್ತು ವೈದ್ಯೇತರ ಸಿಬ್ಬಂದಿಯನ್ನು ಕಾಯಂ ಆಗಿ ನೇಮಿಸಿ.
2. ಜನಸಂಖ್ಯೆಗೆ ಅನುಗುಣವಾಗಿ, ಎಲ್ಲಾ ಜಿಲ್ಲೆಗಳ ನಗರ–ಹಳ್ಳಿಗಳಲ್ಲಿ ಸುಸಜ್ಜಿತ ಸರ್ಕಾರಿ ಚಿಕಿತ್ಸಾಲಯಗಳು, ಪ್ರಯೋಗಾಲಯಗಳು, ಫಿಸಿಯೋಥೆರಪಿ ಕೇಂದ್ರಗಳು ಮತ್ತು ಹೆರಿಗೆ ಆಸ್ಪತ್ರೆಗಳನ್ನು ಒಳಗೊಂಡಂತೆ ಸುಸಜ್ಜಿತ ಸಾರ್ವಜನಿಕ ಆಸ್ಪತ್ರೆಗಳನ್ನು ಒದಗಿಸಿ.
3. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಐಸಿಯು ಮತ್ತು ಅದಕ್ಕೆ ಅವಶ್ಯಕ ಸಿಬ್ಬಂದಿ ಖಚಿತ ಪಡಿಸಿ.
4. ಸರ್ಕಾರಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳಲ್ಲಿ ಅವಶ್ಯಕ ಸಾಮಗ್ರಿ ಮತ್ತು ಔಷಧಗಳ ಲಭ್ಯತೆ ಖಚಿತ ಪಡಿಸಿ.
5. ಸರ್ಕಾರಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳಲ್ಲಿ ಉಚಿತ ಚಿಕಿತ್ಸೆ ಖಚಿತ ಪಡಿಸಿ.
6. ಭ್ರಷ್ಟಾಚಾರಕ್ಕೆ ಕೊನೆ ಹಾಕಿ.

**ವಿವಿಧ ಜಿಲ್ಲೆಗಳಲ್ಲಿನ ಪ್ರತಿಭಟನೆಗಳು:** ಬಳ್ಳಾರಿ, ಮೈಸೂರು, ಬೆಳಗಾವಿ ಮತ್ತು ಧಾರವಾಡಗಳಲ್ಲಿ ಪಕ್ಷದ ನೇತೃತ್ವದಲ್ಲಿ ಜನಾಂದೋಳನಗಳು ನಡೆದವು.

ರಾಜಧಾನಿ ಬೆಂಗಳೂರಿನಲ್ಲಿ ನಾಗರಿಕ ಸಮಾವೇಶವನ್ನು ಸಂಘಟಿಸಲಾಗಿತ್ತು. ಮೆಡಿಕಲ್ ಸರ್ವಿಸ್ ಸೆಂಟರ್‌ನ ರಾಜ್ಯಾಧ್ಯಕ್ಷರಾದ ಡಾ. ಸುಧಾ ಕಾಮತ್, ಬೆಂಗಳೂರಿನಲ್ಲಿ ಲಭ್ಯವಿರುವ ಹೈಟೆಕ್ ಚಿಕಿತ್ಸೆ ದುಡ್ಡಿದ್ದವರಿಗೇ ಹೊರತು, ದುಡಿಯುವ ಮತ್ತು ಮಧ್ಯಮ ವರ್ಗದವರ ಕೈಗೆಟಕದ ಪರಿಸ್ಥಿತಿಯ ಬಗ್ಗೆ ವಿಷಾದಿಸಿದರು. ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕಾ. ಎಂ.ಎನ್. ಶ್ರೀರಾಮ್, ಜನರ ಆರೋಗ್ಯ ರಕ್ಷಣೆಯು ಮೂಲಭೂತ ಹಕ್ಕಾಗಿರಬೇಕು, ವಿನ: ಅದು ಉಳ್ಳವರ ಸವಲತ್ತಾಗಿರಬಾರದು ಎಂದು ಪ್ರತಿಪಾದಿಸಿದರು. ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಕಾ. ವಿ. ಜ್ಞಾನಮೂರ್ತಿಯವರು ನಗರದಲ್ಲಿನ ಸಾರ್ವಜನಿಕ ಆಸ್ಪತ್ರೆಗಳಲ್ಲಿನ ದುಸ್ಥಿತಿ ಕುರಿತು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ, ದಕ್ಷಿಣ ಜಿಲ್ಲಾ ಸಮಿತಿ ಸದಸ್ಯರಾದ ಕಾ.ಎನ್. ರವಿಯವರು ಖಾಸಗಿ ಔಷಧ ಸಂಸ್ಥೆಗಳು ಕೇವಲ ಲಾಭೋದ್ದೇಶ ಮಾತ್ರ ಹೊಂದಿದ್ದು, ಕಳಪೆ ಉತ್ಪನ್ನಗಳ ಕಾರಣದಿಂದ ಜನರ ಪ್ರಾಣಕ್ಕೆ ಕುತ್ತು ತರುತ್ತಿರುವ ಬಗ್ಗೆ ಕಳವಳ ವ್ಯಕ್ತ ಪಡಿಸಿದರು. ಅಂತಿಮವಾಗಿ, ನಗರದೆಲ್ಲೆಡೆ ಜನ ಸಮಿತಿಗಳನ್ನು ರಚಿಸಿ, ಈ ಮೂಲಕ ಜನಾರೋಗ್ಯವನ್ನು ಖಾತ್ರಿ ಪಡಿಸಲು ಕರೆ ನೀಡುತ್ತಾ ಸಮಾವೇಶ ಮುಕ್ತಾಯವಾಯಿತು.



ನಾಗರಿಕ ಸಮಾವೇಶ: ವೇದಿಕೆಯ ಮೇಲೆ: ಮಾತನಾಡುತ್ತಿರುವವರು, ಡಾ.ಸುಧಾ ಕಾಮತ್. ಎಡಗಡೆಯಿಂದ ಕಾ.ವಿ.ಜ್ಞಾನಮೂರ್ತಿ, ಕಾ.ಎಂ.ಎನ್.ಶ್ರೀರಾಮ್, ಕಾ.ಎನ್.ರವಿ



ಧರಣಿ ಉದ್ದೇಶಿಸಿ ಮಾತನಾಡುತ್ತಿರುವವರು ಕಾ. ರಾಧಾಕೃಷ್ಣ ಉಪಾಧ್ಯ, ಜಿಲ್ಲಾ ಕಾರ್ಯದರ್ಶಿ, ಬಳ್ಳಾರಿ ಎಸ್‌ಯುಸಿಐ(ಸಿ)



ಪ್ರತಿಭಟನೆಯ ನೇತೃತ್ವದಲ್ಲಿ ಜಿಲ್ಲಾ ಕಾರ್ಯದರ್ಶಿ ಕಾ. ಬಿ.ರವಿ



## ಕ್ಲಾರಾ ಝೆಟ್ಕಿನ್

### ಅಂತರರಾಷ್ಟ್ರೀಯ ಮಹಿಳಾ ದಿನ – ಮಾರ್ಚ್ 8ರ ರೂವಾರಿ

“ಬಂಡವಾಳಿಗರು ಮತ್ತು ಮಧ್ಯವರ್ತಿಗಳು, ಮಾನಸಿಕ ಶ್ರಮ ಬಳಸಿ ಕೆಲಸ ಮಾಡುವ ಲಕ್ಷಾಂತರ ಹೆಣ್ಣುಮಕ್ಕಳನ್ನೂ, ದೈಹಿಕ ಶ್ರಮ ಬಳಸಿ ಕೆಲಸ ಮಾಡುವ ಲಕ್ಷಾಂತರ ಹೆಣ್ಣುಮಕ್ಕಳಷ್ಟೇ ಶೋಷಣೆ ಮಾಡುತ್ತಾರೆ; ಏಕೆಂದರೆ, ಇಡೀ ಬಂಡವಾಳಶಾಹಿ ವರ್ಗ ಒಗ್ಗಟ್ಟಾಗಿ ನಿಂತು ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತದೆ.”

ಟ್ರಂಪ್ ಖುಲಾಸೆ:

# ಅಮೆರಿಕದ ಪ್ರಜಾಪ್ರಭುತ್ವದ ದುಸ್ಥಿತಿಯ ಪ್ರತೀಕ

ಅಮೆರಿಕವು ಮೊದಲ ಆಧುನಿಕ ಬಂಡವಾಳಶಾಹಿ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಒಂದಾಗಿದ್ದು, ಅದರ ಮೊದಲ ಅಧ್ಯಕ್ಷ ಜಾರ್ಜ್ ವಾಷಿಂಗ್ಟನ್ ಅವರನ್ನು ಪ್ರಜಾಪ್ರಭುತ್ವದ ಪಿತಾಮಹ ಎಂದು ಕರೆಯಲಾಗುತ್ತದೆ. ಅಮೆರಿಕದ ಆಡಳಿತಗಾರರು ಇನ್ನೂ ಅದರ ಬಗ್ಗೆ ಹೆಮ್ಮೆಪಡುತ್ತಾರೆ. ಆದರೆ ಅಮೆರಿಕದ ಸಾಮಾನ್ಯ ನಾಗರಿಕರಿಗೆ ಮಾತ್ರವಲ್ಲದೆ ಪ್ರಪಂಚದಾದ್ಯಂತದ ಜನರಿಗೆ ಅಮೆರಿಕಾದ ಈಗಿನ ಪೊಳ್ಳು ಪ್ರಜಾಪ್ರಭುತ್ವ ಬಯಲಾಗುತ್ತಿದೆ. ಅದರ ಇತ್ತೀಚಿನ ಉದಾಹರಣೆಯನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಖುಲಾಸೆಯಲ್ಲಿ ನಾವು ಕಾಣುತ್ತೇವೆ. ಟ್ರಂಪ್ ವಿರುದ್ಧ, ಲೈಂಗಿಕ ಹಗರಣವನ್ನು ಮುಚ್ಚಿಹಾಕಲು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದು ಸೇರಿದಂತೆ 34 ಪ್ರಕರಣಗಳಿವೆ. ಕಳೆದ ವರ್ಷ ಮೇ 30 ರಂದು, ಮ್ಯಾನ್‌ಹ್ಯಾಟನ್ ತೀರ್ಪುಗಾರರು ಅವರನ್ನು ಎಲ್ಲಾ ಗಂಭೀರ 34 ಆರೋಪಗಳಲ್ಲಿ ತಪ್ಪಿತಸ್ಥರೆಂದು ಘೋಷಿಸಿದ್ದರು. ಆದರೆ ಟ್ರಂಪ್ ಇದು ವಿರೋಧ ಪಕ್ಷ ಮಾಡಿರುವ ಪಿತೂರಿ ಎಂದು ವಾದಿಸಿ ಕೋರ್ಟ್ ವಿರುದ್ಧವೇ ಮಾತನಾಡುತ್ತಾ ಪ್ರಕರಣದಿಂದ ಹೊರ ಬರಲು ಯತ್ನ ಮಾಡುತ್ತಲೇ ಬಂದರು. ಇಂತಹ ಆಪಾದನೆಗಳನ್ನು ಮಾಡದಂತೆ ಕೋರ್ಟಿನ ಆದೇಶವನ್ನು ಉಲ್ಲಂಘಿಸಿದ್ದಕ್ಕಾಗಿ ಮ್ಯಾನ್‌ಹ್ಯಾಟನ್ ನ್ಯಾಯಾಧೀಶ ಜುವಾನ್ ಎಂ. ಮರ್ಕನ್ ಟ್ರಂಪ್ ಮೇಲೆ 10,000 ಡಾಲರ್‌ಗಳ ದಂಡವನ್ನೂ ವಿಧಿಸಿದ್ದರು.

ನಂತರ, ಎರಡನೇ ಬಾರಿಗೆ ಅಧ್ಯಕ್ಷರಾಗುವ ಕೆಲವು ದಿನಗಳ ಮೊದಲು ಕೂಡ, ಸರ್ವೋಚ್ಚ ನ್ಯಾಯಾಲಯವು ಈ ಪ್ರಕರಣಗಳಲ್ಲಿ ಅವರಿಗೆ ಶಿಕ್ಷೆಯಿಂದ ರಕ್ಷಣೆ ನೀಡಲು ನಿರಾಕರಿಸಿತು. ಆದರೆ, ಅದೇ ನ್ಯಾಯಾಧೀಶ ಮರ್ಕನ್, ಈಗ, ಟ್ರಂಪ್ ಅಪರಾಧಿಯೆಂದು ಸಾಬೀತಾದ ಎಲ್ಲಾ 34 ಗಂಭೀರ ಪ್ರಕರಣಗಳಲ್ಲಿ ಬೇಷರತ್ತಾಗಿ, ಯಾವುದೇ ಜೈಲು ಅಥವಾ ದಂಡ ಇಲ್ಲದೆ ಬಿಡುಗಡೆ ಮಾಡಿದ್ದಾರೆ. ಈ 34 ಪ್ರಕರಣಗಳಲ್ಲಿ ನೀಲಿಚಿತ್ರ ತಾರೆ 6ನೇ ಪುಟಕ್ಕೆ

## ಕೊಲ್ಕತ್ತಾ: ಶೋಷಣೆ, ಅನ್ಯಾಯ, ಅಸತ್ಯಗಳ ವಿರುದ್ಧ ಎಸ್‌ಯುಸಿಐ(ಸಿ) ಸಂಘಟಿತ ಮಹಾ ಮೆರವಣಿಗೆ!

# ಜನಾಂದೋಲನ ಮಾತ್ರವೇ ಜನಜೀವನದ ಸಮಸ್ಯೆಗಳಿಗೆ ನೈಜ ಪರಿಹಾರ ತರಬಲ್ಲದು!!

ಜನವರಿ 21, 2025, ಜಗತ್ತನ್ನೇ ತಲ್ಲಣಗೊಳಿಸಿದ ನವೆಂಬರ್ ಮಹಾಕ್ರಾಂತಿಯ ರೂವಾರಿ, ಮಹಾನ್ ನಾಯಕ ಕಾಮ್ರೇಡ್ ಲೆನಿನ್‌ರವರ 101ನೇ ಸ್ಮರಣ ದಿನ. ಅದೇ ದಿನದಂದು ಕೊಲ್ಕತ್ತಾದಲ್ಲಿ ಲೆನಿನ್‌ರವರಿಗೆ ಹೋರಾಟದ ನಮನಗಳನ್ನು ಸಲ್ಲಿಸಿ 50 ಸಾವಿರಕ್ಕೂ ಹೆಚ್ಚು ಜನರು, ನಮ್ಮ ಪಕ್ಷ ಎಸ್‌ಯುಸಿಐ(ಸಿ) ನೇತೃತ್ವದಲ್ಲಿ ಹೆದುವಾ ಪಾರ್ಕ್‌ನಿಂದ 5 ಕಿಲೋ ಮೀಟರ್ ದೂರವಿದ್ದ ರಾಣಿ ರಾಸಮಣಿ ರಸ್ತೆಗೆ ಮಹಾನ್ ಮೆರವಣಿಗೆಯಲ್ಲಿ, ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲು ನಡೆದರು. ರಸ್ತೆಯ ಇಕ್ಕೆಲಗಳಲ್ಲಿಯೂ ಜನರು ಕಿಕ್ಕಿರಿದು ನಿಂತಿದ್ದರು. ಸಹಸ್ರಾರು ಜನರ ಮೆರವಣಿಗೆ ಇದಾಗಿದ್ದರಿಂದ, ಸಹಜವಾಗಿಯೇ ಜನಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಆದರೆ, ಜನರಲ್ಲಿ ತಮಗುಂಟಾದ ತೊಂದರೆಯ ಬಗ್ಗೆ ಬೇಸರ ಕಾಣಲಿಲ್ಲ, ಬದಲಿಗೆ ಅವರು ಹೋರಾಟಗಾರರೊಂದಿಗೆ ಸಹಮತ ವ್ಯಕ್ತಪಡಿಸುತ್ತಿದ್ದರು.

ಆರ್ ಜಿ ಕರ್ ಪ್ರಕರಣದಲ್ಲಿ ನ್ಯಾಯ ಒದಗಿಸಬೇಕು ಎಂಬ ಹಕ್ಕೊತ್ತಾಯದ ಜೊತೆಗೆ ನಮ್ಮ ಪಕ್ಷ ಕೈಗೆತ್ತಿಕೊಂಡಿದ್ದ ಇತರ ಬೇಡಿಕೆಗಳಾದ, ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು, ವಿದ್ಯುಚ್ಛಕ್ತಿ ದರದ ತೀವ್ರವಾದ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಸ್ಮಾರ್ಟ್ ಮೀಟರ್‌ಗಳ ಅಳವಡಿಸುವಿಕೆಯನ್ನು ಕೈ ಬಿಡಬೇಕು, ಕರಾಳ ಕೃಷಿ ಕಾಯ್ದೆಗಳನ್ನು ಹಿಂಬಾಗಿಲಿನಿಂದ ತರಲೆತ್ನಿಸುತ್ತಿರುವುದನ್ನು ಕೈಬಿಡಬೇಕು, ಹೊಸ ಶಿಕ್ಷಣ ನೀತಿ 2020 ಹಾಗೂ ಅದರದೇ ತದ್ರೂಪವಾದ 'ಪಶ್ಚಿಮ ಬಂಗಾಲ ರಾಜ್ಯ ಶಿಕ್ಷಣ ನೀತಿ 2023' ಅನ್ನು ಹಿಂತೆಗೆದುಕೊಳ್ಳಬೇಕು, ನಿರುದ್ಯೋಗಿಗಳಿಗೆ ಉದ್ಯೋಗ ಅಥವಾ ಸೂಕ್ತವಾದ ನಿರುದ್ಯೋಗ ಭತ್ಯೆ ನೀಡಬೇಕು, ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು, ಮಹಿಳೆಯರ ಮೇಲಿನ ಅಪರಾಧಗಳನ್ನು ತಡೆಗಟ್ಟಬೇಕು – ಇತ್ಯಾದಿಗಳನ್ನು ಆಗ್ರಹಿಸಿ ಮುನ್ನಡೆದ ಈ ಭಾರಿ ಮೆರವಣಿಗೆಗೆ ಅಭೂತಪೂರ್ವವಾದ ಬೆಂಬಲ ವ್ಯಕ್ತವಾಯಿತು.

ಇಡೀ ಕೊಲ್ಕತ್ತಾದ ಜನತೆಯಲ್ಲಿ ಸಿಟ್ಟು, ಆಕ್ರೋಶ, ಆತಂಕ ಮೂಡಿಸಿದ್ದ ಆರ್ ಜಿ ಕರ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿಯ ಘೋರ ಅತ್ಯಾಚಾರ, ಕೊಲೆಯ ವಿರುದ್ಧ ದೇಶದಾದ್ಯಂತ ಜನತೆ ಪ್ರತಿಭಟಿಸಿದ್ದರು. ಇದೀಗ ಆರ್ ಜಿ ಕರ್ ಕಾಲೇಜಿನ ಮಾಜಿ ಪ್ರಾಂಶುಪಾಲರು ಹಾಗೂ ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಜಾಮೀನು ನೀಡಲಾಗಿದೆ! ಅಪರಾಧಿಗಳಿಗೆ ಶಿಕ್ಷೆ ಖಚಿತಪಡಿಸುವ ಪ್ರಕ್ರಿಯೆಯಲ್ಲಿ ಸಿಬಿಐ ಹೀನಾಯವಾಗಿ ಸೋತಿದ್ದು, ಜನರಲ್ಲಿ ಆಕ್ರೋಶ ಮುಗಿಲು ಮುಟ್ಟಿದೆ. 'ಅಭಯಾಗೆ ನ್ಯಾಯ ಬೇಕು ನ್ಯಾಯ ಕೊಡಿ' ಎಂಬ ಬ್ಯಾನರ್ ಹಿಡಿದು ಜನರು ಮೆರವಣಿಗೆಯಲ್ಲಿ ಸಾಗುತ್ತಿದ್ದರು. ಇಂತಹ ಭೀಕರ ಘಟನೆಯಲ್ಲೂ ನ್ಯಾಯ ದೊರಕಿಸಿ ಕೊಡುವಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಾಳಿದ ನಿಲುವಿನ ಬಗ್ಗೆ ಜನರು ರೋಸಿ ಹೋಗಿದ್ದಾರೆ. ಅವರ ಸಿಟ್ಟು ಇಮ್ಮಡಿಯಾಗಿದೆ. ಬಡವರ, ದುಡಿಯುವ ವರ್ಗದೆಡೆಗಿರುವ ಆಳುವ ಸರ್ಕಾರಗಳ ನಿಷ್ಕಾಳಜಿ, ಉಳ್ಳವರ ಕಡೆಗಿರುವ ಅವರ ಒಲವು, ಇವುಗಳ ವಿರುದ್ಧ ನಿರಂತರವಾಗಿ, ರಾಜಿರಹಿತವಾಗಿ ಹೋರಾಟಗಳನ್ನು ಕಟ್ಟುತ್ತಿರುವ, ಈ ದೇಶದ ನೈಜ ಕಮ್ಯುನಿಸ್ಟ್ ಪಕ್ಷ ಎಸ್‌ಯುಸಿಐ(ಸಿ) ಅನ್ನು ಜನರು ಗಮನಿಸುತ್ತಿದ್ದಾರೆ.


ಹಾಗಾಗಿ, ಪಶ್ಚಿಮ ಬಂಗಾಳದ ಜನತೆ ತಮ್ಮ ಅನುಭವದಿಂದ ಅರಿತಿದ್ದಾರೆ–ಇಂದು ಕೇಂದ್ರ ಅಥವಾ ವಿವಿಧ ರಾಜ್ಯಗಳಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಯಾವುದೇ ಪಕ್ಷವಾಗಲೀ– ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ಸಿಪಿಐ(ಎಂ), ತೃಣಮೂಲ ಕಾಂಗ್ರೆಸ್ ಪಕ್ಷಗಳು ಜನಸಾಮಾನ್ಯರ ಹಿತಾಸಕ್ತಿಗಳನ್ನು ಬಲಿಕೊಟ್ಟು, ಬಂಡವಾಳಶಾಹಿಗಳ, ಕಾರ್ಪೊರೇಟ್ ಮನೆತನಗಳ ಹಿತಾಸಕ್ತಿಯನ್ನು ಎತ್ತಿ ಹಿಡಿಯುತ್ತಿವೆ ಎಂದು. ಇದಕ್ಕೆ ವ್ಯತಿರಿಕ್ತವಾಗಿ ಎಸ್‌ಯುಸಿಐ(ಸಿ) ಉನ್ನತ ನೀತಿ–ನೈತಿಕತೆಗಳ ಆಧಾರದಲ್ಲಿ ದೇಶದಾದ್ಯಂತ ಜನರ ಜ್ವಲಂತ ಸಮಸ್ಯೆಗಳ ವಿರುದ್ಧ ಪ್ರಜಾತಾಂತ್ರಿಕ ಹೋರಾಟಗಳನ್ನು ಕಟ್ಟುತ್ತಿದೆ. ಜನರಿಂದ ದೊರಕುತ್ತಿರುವ ಅಪಾರವಾದ ಬೆಂಬಲ ಹಾಗೂ ಮೆಚ್ಚುಗೆಯಿಂದ ಪಕ್ಷವು ದೊಡ್ಡ ಸಂಘಟನಾ ಶಕ್ತಿಯನ್ನು ಪಡೆದುಕೊಂಡಿದೆ. ನಮ್ಮ ಪಕ್ಷದ ಸಂಸ್ಥಾಪಕರೂ, ಓರ್ವ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರೂ ಆದ ಕಾಮ್ರೇಡ್ ಶಿವದಾಸ್ ಘೋಷ್‌ರವರು, ಎಲ್ಲಾ ವಿಧವಾದ ಸಂಕಷ್ಟಗಳನ್ನು ಎದುರಿಸಿ, ಲೆನಿನ್ ಮಾದರಿಯಲ್ಲಿ ಒಂದು ನೈಜ ಕಮ್ಯುನಿಸ್ಟ್ ಪಕ್ಷವಾಗಿ ಎಸ್‌ಯುಸಿಐ(ಸಿ) ಅನ್ನು ಕೆಲವೇ ಕೆಲವು ಸಂಗಾತಿಗಳೊಡಗೂಡಿ ಸ್ಥಾಪಿಸಿದರು. ಅವರು ಅಂದು ಬಿತ್ತಿದ ಬೀಜವು, ಮೊಳಕೆಯೊಡೆದು, ಇಂದು ಇದು ದೊಡ್ಡ ಆಲದ ಮರವಾಗಿ ದೇಶದಾದ್ಯಂತ ವ್ಯಾಪಿಸಿಕೊಂಡಿದೆ, ಹಲವಾರು ಯಶಸ್ವಿ ಹೋರಾಟಗಳನ್ನು ಸಂಘಟಿಸಿದೆ. ಆದ್ದರಿಂದಲೇ ಜನರು ಈ ಮಹಾ ಮೆರವಣಿಗೆಯನ್ನು ಬಾಯಿ ತುಂಬಾ ಹೊಗಳಿದರು. "ಈ ಎಸ್‌ಯುಸಿಐ(ಸಿ) ಕಾರ್ಯಕರ್ತರು ಬಹಳ ಗಂಭೀರ ಹಾಗೂ ಶಿಸ್ತುಬದ್ಧ", " ಎಷ್ಟು ದೀರ್ಘವಾಗಿದೆ ಈ ಮೆರವಣಿಗೆ", " ಇತ್ತೀಚಿನ ದಿನಗಳಲ್ಲಿ ಇಂತಹ ಮೆರವಣಿಗೆಯನ್ನು ಕಂಡಿಲ್ಲ" ಮುಂತಾದ ಉದ್ಗಾರಗಳು ಕೇಳಿ ಬಂದವು.

5 ಕಿಲೋಮೀಟರ್ ಕ್ರಮಿಸಿದ ಈ ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮಕ್ಕಳೂ, ವೃದ್ಧರೂ ಇದ್ದರು. ಕೆಲವು ವಿಶೇಷ ಸಾಮರ್ಥ್ಯದವರೂ ಸಹ ಮೆರವಣಿಗೆಯಲ್ಲಿ ನಡೆದರು! ಮೆರವಣಿಗೆಯಲ್ಲಿ ಸುಸ್ತಾದ ಕೆಲವರು ಸ್ವಲ್ಪ ವಿಶ್ರಾಂತಿ ಪಡೆದು, ಮತ್ತೆ ನಡೆದರು: "ನಾನು ನಡೆಯುತ್ತೇನೆ, ನ್ಯಾಯಕ್ಕಾಗಿ ನಡೆಯುತ್ತೇನೆ" ಎಂದರು. ಮೆರವಣಿಗೆಯು ಲೆನಿನ್ ಸರಣಿ ರಸ್ತೆಯಲ್ಲಿ ನಮ್ಮ ಪಕ್ಷದ ಕಚೇರಿಯ ಮುಂದೆ ಸಾಗುವಾಗ, ನಮ್ಮ ನೆಚ್ಚಿನ ಪ್ರಧಾನ ಕಾರ್ಯದರ್ಶಿಗಳಾದ ಕಾಮೇಡ್ ಪ್ರವಾಷ್ ಘೋಷ್‌ರವರು ತಮ್ಮ 88ನೇ ವಯಸ್ಸನ್ನೂ, ಹಲವಾರು ಆರೋಗ್ಯದ ಸಮಸ್ಯೆಗಳನ್ನೂ ಲೆಕ್ಕಿಸದೆ, ಮೆರವಣಿಗೆಯಲ್ಲಿ ಕೊನೆಯವರೆಗೂ ನಡೆದರು. ಇದು ಇಡೀ ಮೆರವಣಿಗೆಗೆ ಹೊಸ ಸ್ಫೂರ್ತಿಯನ್ನು ತುಂಬಿತು. ಇಡೀ ಮೆರವಣಿಗೆಯಲ್ಲಿ ಅಚಲವಾದ ಕ್ರಾಂತಿಕಾರಿ ಧ್ಯೇಯ, ಕೆಚ್ಚು, ಧೈರ್ಯ ಪ್ರತಿಬಿಂಬಿತವಾಗಿತ್ತು. ಕಾಮ್ರೇಡ್ ಶಿವದಾಸ್ ಘೋಷ್‌ರವರು ನಮಗೆ ತಿಳಿಸಿಕೊಟ್ಟಿರುವಂತೆ ಸಂಸದೀಯ ರಾಜಕೀಯವು ವಾಸ್ತವವಾಗಿ ನಮ್ಮ ಜೀವನದಲ್ಲಿ ಯಾವುದೇ ಸಕಾರಾತ್ಮಕ ಬದಲಾವಣೆಯನ್ನು ತರುವುದಿಲ್ಲ, ಕೇವಲ ಕ್ರಾಂತಿಕಾರಿ ರಾಜಕೀಯ ಹಾಗೂ ಜನ ಚಳುವಳಿಗಳ ಮಹಾಪೂರ ಮಾತ್ರವೇ ನಮ್ಮ ಜೀವನವನ್ನು ಬದಲಿಸುತ್ತದೆ. ಇದಕ್ಕಾಗಿ ನಾವೆಲ್ಲರೂ ಕೈ ಜೋಡಿಸೋಣ!




ಕೊಲ್ಕತ್ತಾದ ಮಹಾ ಮೆರವಣಿಗೆಯ ನೇತೃತ್ವದಲ್ಲಿ ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿ ಕಾ. ಪ್ರವಾಶ್ ಘೋಷ್, ಮತ್ತಿತರ ರಾಜ್ಯ ನಾಯಕರು

## ಕಾರ್ಲ್ ಮಾರ್ಕ್ಸ್ ಚಿರಾಯುವಾಗಲಿ!



05/05/1818–14/03/1883

ಸಮಾಜದ ವಸ್ತು (ಭೌತಿಕ) ಉತ್ಪಾದಕ ಶಕ್ತಿಗಳು, ತಮ್ಮ ಬೆಳವಣಿಗೆಯ ಒಂದು ಹಂತದಲ್ಲಿ ಪ್ರಸಕ್ತ ಉತ್ಪಾದನಾ ಸಂಬಂಧದೊಂದಿಗೆ, ಅಥವಾ, ಇದರ ಕಾನೂನಾತ್ಮಕ ಅಭಿವ್ಯಕ್ತಿಯಾದ, ತಾವು ಅಲ್ಲಿಯವರೆಗೂ ಕಾರ್ಯೋನ್ಮುಖವಾಗಿರುವ ಆಸ್ತಿ ಸಂಬಂಧದೊಂದಿಗೆ–ಸಂಘರ್ಷಕ್ಕೆ ಒಳಪಡುತ್ತವೆ. ಉತ್ಪಾದಕ ಶಕ್ತಿಗಳ ಬೆಳವಣಿಗೆಯ ಸ್ವರೂಪದೊಂದಿಗೆ ಈ ಸಂಬಂಧಗಳು ಅವರಿಗೆ ಬೇಡಿಗಳಾಗಿ ಬಿಡುತ್ತವೆ. ಆಗ ಶುರುವಾಗುವುದೇ ಸಾಮಾಜಿಕ ಕ್ರಾಂತಿಯ ಯುಗ.

– ಕಾರ್ಲ್ ಮಾರ್ಕ್ಸ್

## ಸ್ಟಾಲಿನ್ ಚಿರಾಯುವಾಗಲಿ!

"ನಾಯಕರು ಮುತ್ಸದ್ದಿತನದ ಆಟದ ಕೆಸರಿನಲ್ಲಿ ಹೂತುಹೋದಾಗ, ಅವರು ತಮ್ಮ ಮಾತುಗಳನ್ನು ಕೃತಿಯಲ್ಲಿ ಇಳಿಸದೇ ಇದ್ದಾಗ, ನಾಯಕರ ಮಾತುಗಳಿಗೂ ಅವರ ಕೃತಿಗಳಿಗೂ ಸಂಬಂಧವೇ ಇಲ್ಲದಾಗ, ಕಾರ್ಮಿಕರು ನಾಯಕರ ಮೇಲೆ ವಿಶ್ವಾಸ ಇಡಲಾರರು. ಕಾಮ್ರೇಡ್ ಲೆನಿನ್‌ರವರ ಮೇಲೆ ರಷ್ಯಾದ ಕಾರ್ಮಿಕರಿಗೆ ಅಪರಿಮಿತ ಭರವಸೆ ಏಕೆ? ಅವರ ನೀತಿಗಳು ಸರಿಯಾಗಿವೆ ಎಂಬ ಕಾರಣಕ್ಕಾಗಿ ಮಾತ್ರವೇ? ಅಲ್ಲ. ಕೇವಲ ಅದಕ್ಕಾಗಿ ಮಾತ್ರವಲ್ಲದೆ, ಲೆನಿನ್‌ರವರ ಮಾತಿಗೂ, ಕೃತಿಗೂ ಯಾವುದೇ ವಿರೋಧಾಭಾಸವಿರಲಿಲ್ಲ ಎಂಬುದು ಅವರಿಗೆ ಗೊತ್ತಿರುವುದರಿಂದ, 'ಲೆನಿನ್ ನಮ್ಮನ್ನು ಮೋಸಗೊಳಿಸುವುದಿಲ್ಲ' ಎಂಬುದು ಅವರಿಗೆ ಗೊತ್ತಿರುವುದರಿಂದಲೇ. "ಮಿಕ್ಕೆಲ್ಲಾ ವಿಷಯಗಳೊಂದಿಗೆ, ಈ ವಿಷಯದ ಮೇಲೆಯೇ ಲೆನಿನ್‌ರವರ ಅಥಾರಿಟಿ ಇದ್ದದ್ದು. ಅವರು ಕಾರ್ಮಿಕರನ್ನು ತರಬೇತುಗೊಳಿಸಿದ್ದು ಹೀಗೆಯೇ, ಅವರಲ್ಲಿ ನಾಯಕರ ಬಗೆಗಿನ ವಿಶ್ವಾಸವನ್ನು ಜೀವಂತವಾಗಿಟ್ಟಿದ್ದು ಹೀಗೆಯೇ."



18/12/1878–05/03/1953

## ಕೃಷಿ ಮಾರುಕಟ್ಟೆಯ ಹೊಸ ರಾಷ್ಟ್ರೀಯ ನೀತಿಯ ರೂಪುರೇಷೆ:

# ರೈತರ ಬದುಕಿನ ಮೇಲೆ ಅದರ ಪರಿಣಾಮ ಮತ್ತು ನಮ್ಮ ಜವಾಬ್ದಾರಿ

**(ಹಿಂದಿನ ಸಂಚಿಕೆಯಲ್ಲಿ "ಕೃಷಿ ಮಾರುಕಟ್ಟೆಯ ಹೊಸ ರಾಷ್ಟ್ರೀಯ ನೀತಿಯ ರೂಪುರೇಷೆ"ಯನ್ನು ಬಂಡವಾಳಶಾಹಿ ಹಿತದೃಷ್ಟಿಯಿಂದ ಜಾರಿಗೊಳಿಸಲಾಗುತ್ತಿದೆ ಎಂಬುದನ್ನು ನಾವು ಕಂಡುಕೊಂಡೆವು. ಈ ಸಂಚಿಕೆಯಲ್ಲಿ ರೈತರ ಬದುಕಿನ ಮೇಲೆ ಅದರ ಪರಿಣಾಮ ಮತ್ತು ನಮ್ಮ ಜವಾಬ್ದಾರಿ, ಈ ಬಗ್ಗೆ ಚರ್ಚೆಯನ್ನು ಮುಂದುವರೆಸಲಾಗಿದೆ)**

ಈಗ ಈ 'ಹೊಸ ರಾಷ್ಟ್ರೀಯ ನೀತಿಯ ರೂಪುರೇಷೆ'ಯಲ್ಲಿನ ಪ್ರಸ್ತಾಪಗಳ ಪರಿಣಾಮಗಳೇನು ಎಂಬುದನ್ನು ನೋಡೋಣ

1. ವಿಶಾಲ ರೈತ ಸಮುದಾಯ ನಾಶವಾಗುತ್ತದೆ ಮತ್ತು ರೈತರು ಭೂಹೀನರಾಗುತ್ತಾರೆ.
2. ಕೋಟ್ಯಂತರ ಸಣ್ಣ ವ್ಯಾಪಾರಿಗಳನ್ನು ಮತ್ತು ಅಂಗಡಿಯವರನ್ನು ಇದು ಮಾರುಕಟ್ಟೆಯಿಂದ ಹೊರಕ್ಕೆ ಎಸೆಯುತ್ತದೆ.
3. ಆಹಾರಧಾನ್ಯ ಮತ್ತು ಅಗತ್ಯ ವಸ್ತುಗಳ ಉತ್ಪಾದನೆ, ಖರೀದಿ ಮತ್ತು ವಿತರಣೆಗಳ ಮೇಲೆ ಬಹುರಾಷ್ಟ್ರೀಯ ಸಂಸ್ಥೆಗಳು ಹಿಡಿತ ಸಾಧಿಸುತ್ತವೆ ಮತ್ತು ಇದರಿಂದಾಗಿ ನಿರಂತರ ಬೆಲೆ ಏರಿಕೆಯಾಗುತ್ತದೆ.

### ಇದು ಕಾರ್ಪೊರೇಟ್ ಒಡೆಯರಿಗೆ ಕೇಂದ್ರ ಬಿಜೆಪಿ ಸರ್ಕಾರ ಸಲ್ಲಿಸುತ್ತಿರುವ ಸೇವೆ!

ಆದರೆ ಕಾರ್ಪೊರೇಟ್ ಮನೆತನ ಮತ್ತು ಅದರ ಬಾಲಬಡುಕರ ಹೀನ ವಿನ್ಯಾಸವನ್ನು ಸೋಲಿಸಲು ವಿಶಾಲ ಜನಸ್ತೋಮದೊಡಗೂಡಿ ಕೊನೆಯವರೆಗೂ ಹೋರಾಡಲು ರೈತರು ನಿರ್ಧರಿಸಿದ್ದಾರೆ. ಅವರು ಈಗಾಗಲೇ ದೆಹಲಿ ಗಡಿಯಲ್ಲಿ ವರ್ಷವಿಡಿ ಹೋರಾಟ ನಡೆಸಿ ಒಂದು ಸಲ ತಮ್ಮ ದೃಢತೆಯನ್ನು ಸಾಬೀತುಪಡಿಸಿದ್ದಾರೆ. ಅಗತ್ಯ ಬಂದರೆ, ಅವರು ಮತ್ತೊಮ್ಮೆ ದೇಶದೆಲ್ಲೆಡೆ ಅದಕ್ಕಿಂತಲೂ ಬಲಿಷ್ಠವಾದ ರೈತ ಚಳುವಳಿಯನ್ನು ಕಟ್ಟಿ ಸಾಬೀತುಪಡಿಸಲು ಸಜ್ಜಾಗಿದ್ದಾರೆ.

### ಅವರ ಹಕ್ಕೊತ್ತಾಯಗಳು ಹೀಗಿವೆ:

1. ಬಂಡವಾಳಿಗರನ್ನು ಆಹಾರಪದಾರ್ಥ ಮತ್ತು ಅಗತ್ಯ ವಸ್ತುಗಳ ವ್ಯಾಪಾರದಿಂದ ಹೊರಹಾಕಬೇಕು.
2. ಕನಿಷ್ಠ ಬೆಂಬಲ ಬೆಲೆ ಮತ್ತು ಕೃಷಿ ಉತ್ಪನ್ನಗಳನ್ನು ಸಿ2+50% (ಉತ್ಪಾದನಾ ವೆಚ್ಚ + ಶೇ.50ರಷ್ಟು ಲಾಭ) ಸೂತ್ರದಡಿ ಸರ್ಕಾರ ಖರೀದಿ ಮಾಡುವುದನ್ನು ಕಾನೂನುಬದ್ಧಗೊಳಿಸಬೇಕು.
3. ಸರ್ಕಾರವೇ ಸಂಪೂರ್ಣ ವ್ಯಾಪಾರ (state trading)ದ ಜವಾಬ್ದಾರಿಯನ್ನು ನಿರ್ವಹಿಸಬೇಕು.

ಸರ್ಕಾರದಿಂದಲೇ ಸಂಪೂರ್ಣವಾಗಿ ಎಲ್ಲಾ ಆಹಾರ ಪದಾರ್ಥಗಳ ಹಾಗೂ ಅವಶ್ಯಕ ವಸ್ತುಗಳ ಖರೀದಿಯೆಂದರೆ ಏನರ್ಥ? ಎಂದರೆ, ಆಹಾರ ಪದಾರ್ಥಗಳ ಹಾಗೂ ಅವಶ್ಯಕ ವಸ್ತುಗಳ ಖರೀದಿಯಲ್ಲಾಗಲಿ ಅಥವಾ ವಿತರಣೆಯಲ್ಲಾಗಲಿ ಖಾಸಗಿ ವ್ಯವಹಾರವಿರುವುದಿಲ್ಲ. ಸರ್ಕಾರ ನೇರವಾಗಿ ರೈತರಿಂದ ಸರಿಯಾದ ಬೆಲೆಗೆ ಖರೀದಿ ಮಾಡುತ್ತದೆ ಮತ್ತು ಅದನ್ನು ದೇಶದ ಜನರಿಗೆ ಪಡಿತರ ವ್ಯವಸ್ಥೆಯ ಮೂಲಕ (ಪಿಡಿಎಸ್) ಕೊಳ್ಳಲು ಸಾಧ್ಯವಾಗುವ ಅಗ್ಗದ ಬೆಲೆಗೆ ಮಾರುತ್ತದೆ. ಇದಕ್ಕೆ ಅಗತ್ಯ ಬಿದ್ದರೆ ಸರ್ಕಾರ ಸಬ್ಸಿಡಿ ನೀಡಬೇಕು. ಆಹಾರ ಪದಾರ್ಥಗಳನ್ನು ಹಾಗೂ ಇನ್ನಿತರ ವಸ್ತುಗಳನ್ನು ಮಾರಾಟ ಮಾಡುವ ಖಾಸಗಿ ಅಂಗಡಿಗಳಲ್ಲಿ ಸರ್ಕಾರದ ಮಾರಾಟ ಮಳಿಗೆಗಳನ್ನು ತೆರೆಯಬೇಕು. ಒಂದು ನಾಗರಿಕ ಸರ್ಕಾರವು ಜನರಿಗೆ ಆಹಾರ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಾಗದು ಮತ್ತು ಕಾರ್ಪೊರೇಟ್ ತಿಮಿಂಗಿಲಗಳ ಹೊಟ್ಟೆ ತುಂಬಿಸಲು ಕೃಷಿಯನ್ನು ಸರಕನ್ನಾಗಿ ಮಾಡಬಾರದು. ಹಿಂದೆ ಕಾಂಗ್ರೆಸ್ ಸರ್ಕಾರ, ಸರ್ಕಾರವೇ ಸಂಪೂರ್ಣ ವ್ಯಾಪಾರದ ಜವಾಬ್ದಾರಿಯನ್ನು ನಿರ್ವಹಿಸುವುದನ್ನು ಜಾರಿಗೊಳಿಸಲು ತಿರಸ್ಕರಿಸಿತ್ತು. ಈಗ ಬಿಜೆಪಿ ಸರ್ಕಾರವು ಕೂಡ ಅದೇ ನಿಟ್ಟಿನಲ್ಲಿ ಏಕಸ್ವಾಮ್ಯ ಬಂಡವಾಳಿಗರ ಪರವಾದ ನೀತಿಯನ್ನು ಪಾಲಿಸುತ್ತಿರುವುದಷ್ಟೇ ಅಲ್ಲ, ಕೃಷಿಕ್ಷೇತ್ರವನ್ನು ಸಂಪೂರ್ಣವಾಗಿ ಕಾರ್ಪೊರೇಟೀಕರಣ ಮಾಡಲು ಹೊರಟಿರುವುದು ದುರಂತವೇ ಸರಿ!

### ಬಿಜೆಪಿ ಸರ್ಕಾರದ ಕುಟಿಲ ಪ್ರಚಾರ

ಜನರನ್ನು ಗೊಂದಲಕ್ಕೀಡು ಮಾಡಲು ಪ್ರಸ್ತುತ ಬಿಜೆಪಿ ಸರ್ಕಾರ ಹೀಗೆ ವಾದ ಮಾಡುತ್ತಿದೆ:

1. ಇಂದಿನ ಹಣಕಾಸು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕಾನೂನುಬದ್ಧ ಕನಿಷ್ಠ ಬೆಂಬಲ ಬೆಲೆಯಲ್ಲಿ ರೈತರ ಬೆಳೆಯನ್ನು ಖರೀದಿಸಲು ಬೇಕಾದ ಭಾರಿ ಮೊತ್ತದ ಹಣದ ಹೊರೆಯನ್ನು ಹೊರಲು ಸಾಧ್ಯವಿಲ್ಲ.
2. ಸರ್ಕಾರವು ಕೃಷಿ ಉತ್ಪನ್ನಗಳನ್ನು ಸಿ2+50% ಬೆಲೆಯಲ್ಲಿ ಖರೀದಿಸಿದರೆ ಅವಶ್ಯಕ ವಸ್ತುಗಳ ಬೆಲೆಗಳು ಏರಿಕೆಯಾಗುತ್ತವೆ. ಹಾಗಾಗಿ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸಬೇಕೆನ್ನುವ ಹಕ್ಕೊತ್ತಾಯವು ಜನವಿರೋಧಿ!

**ಇವೆರಡೂ ತಳಬುಡವಿಲ್ಲದ ವಾದಗಳು.** ಸಾಮಾನ್ಯವಾಗಿ ಬೆಲೆಯೇರಿಕೆಯಾಗಲು ಕಾರಣವೇನು? ಕೈಗಾರಿಕಾ ಸರಕುಗಳ ಬೆಲೆಯು ದಿನದಿನಕ್ಕೂ ಹೆಚ್ಚಾಗುತ್ತಿರುವುದೇಕೆ? ರೈತರು ಪುಡಿಗಾಸಿಗೆ ತಮ್ಮ ಉತ್ಪನ್ನಗಳನ್ನು ಮಾರುತ್ತಿರುವಾಗ, ಜನರೇಕೆ ವಿಪರೀತ ಬೆಲೆ ತೆತ್ತು ಖರೀದಿಸುವಂತಾಗಿದೆ? ಏಕೆಂದರೆ, **ಏಕಸ್ವಾಮ್ಯ ಮನೆತನಗಳು, ದೊಡ್ಡ ವ್ಯಾಪಾರಿಗಳು ಮತ್ತು ಅವರ ಬಾಲಬಡುಕರು ಬೆಲೆ ನಿಗದಿಯ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದಾರೆ ಮತ್ತು ಸರ್ಕಾರ ಮೂಕಪ್ರೇಕ್ಷಕನಂತೆ ಕುಳಿತಿದೆ.**

ಸರ್ಕಾರದ ಎರಡನೇ ವಾದವು ಹಣದ ಕೊರತೆ. ಮತ್ತೊಂದು ಕುಂಟು ನೆಪ. ಇತ್ತೀಚೆಗೆ ಬಿಜೆಪಿ ಸರ್ಕಾರವು 23 ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸಿದೆ; ಅವುಗಳನ್ನು ನೂರಕ್ಕೆ ನೂರರಷ್ಟು ಖರೀದಿಸಿದರೆ ಸುಮಾರು ರೂ. 10.78 ಲಕ್ಷ ಕೋಟಿ ಖರ್ಚು ಬರಬಹುದು ಎಂದು ಹೇಳುತ್ತಿದೆ. ಆದರೆ ವಾಸ್ತವ ಸಂಗತಿಯೆಂದರೆ, ರೈತರು 23 ಬೆಳೆಗಳನ್ನು ಸಂಪೂರ್ಣವಾಗಿ ಮಾರಾಟ ಮಾಡುವುದಿಲ್ಲ. ಏಕೆಂದರೆ, 1) ಆಹಾರ ಪದಾರ್ಥಗಳ ಒಂದು ಭಾಗವನ್ನು ಸ್ವತಃ ರೈತರೇ ಉಪಯೋಗಿಸುತ್ತಾರೆ. 2) ಒಂದು ಭಾಗವನ್ನು ಮುಂದಿನ ವರ್ಷದ ಬೆಳೆಗೆ ಬಿತ್ತನೆಯಾಗಿ ಉಳಿಸಿಕೊಳ್ಳುತ್ತಾರೆ. 3) ಒಂದು ಭಾಗವನ್ನು ಪಶು ಆಹಾರವಾಗಿ ಉಪಯೋಗಿಸುತ್ತಾರೆ.

ಅಲ್ಲದೆ ಸಕ್ಕರೆ ಕಾರ್ಖಾನೆ ಮಾಲೀಕರು ಕಬ್ಬನ್ನು ನೇರವಾಗಿ ಖರೀದಿಸುವುದರಿಂದ ಆ ಮೊತ್ತವನ್ನು ಕಳೆಯಬೇಕು. ಮತ್ತೆ, ಸರ್ಕಾರವು ಹತ್ತಿ ಮತ್ತು ಸೆಣಬನ್ನು ಸಂಪೂರ್ಣವಾಗಿ ಖರೀದಿಸಬೇಕಾಗಿಲ್ಲ. ಇದರಲ್ಲಿ ಶೇ.50 ರಷ್ಟನ್ನು ಸಿ2+50% ಬೆಲೆಯಲ್ಲಿ ಖರೀದಿಸಿದರೆ, ರೈತರು ಉಳಿದ ಭಾಗವನ್ನು ವ್ಯಾಪಾರಿಗಳಿಗೆ ಮಾರುತ್ತಾರೆ. ಸರ್ಕಾರವು ಆಹಾರ ಪದಾರ್ಥಗಳನ್ನು ಕನಿಷ್ಠ ಬೆಂಬಲ ಬೆಲೆಯಡಿ ಖರೀದಿಸಿ ಸಾಮಾನ್ಯ ಜನರಿಗೆ ರಿಯಾಯಿತಿ ದರದಲ್ಲಿ ಮಾರಿದರೆ, ಆಗ ಸರ್ಕಾರಕ್ಕೆ ದೊಡ್ಡ ಭಾಗದ ಖರ್ಚು ವಾಪಸ್ ಬರುತ್ತದೆ ಮತ್ತು ಜನರಿಗೆ ಬೆಲೆಯೇರಿಕೆಯ ಬಿಸಿ ತಟ್ಟುವುದಿಲ್ಲ. ಇದೆಲ್ಲಾ ಅಂಶಗಳನ್ನು ಒಟ್ಟಾರೆಯಾಗಿ ತೆಗೆದುಕೊಂಡರೆ, ಆಗ ಕನಿಷ್ಠ ಬೆಂಬಲ ಬೆಲೆಗೆ ಖರೀದಿಸಲು ಹೆಚ್ಚೆಂದರೆ ರೂ.2 ಲಕ್ಷ ಕೋಟಿ ಬೇಕಾಗುತ್ತದೆ. ಆದ್ದರಿಂದ ಹಣದ ಕೊರತೆಯೆನ್ನುವುದು ಮಹಾಸುಳ್ಳು!

ಸರ್ಕಾರಕ್ಕೆ ನಿಜಕ್ಕೂ ಖರ್ಚಿನ ಬಗ್ಗೆ ಅಷ್ಟೊಂದು ಕಾಳಜಿಯಿದ್ದರೆ, ಕಳೆದ ಮೂರು ವರ್ಷಗಳಲ್ಲಿ ಕಾರ್ಪೊರೇಟ್ ಕಂಪೆನಿಗಳ ರೂ.15 ಲಕ್ಷ ಕೋಟಿ ತೆರಿಗೆ ಬಾಕಿ ಮತ್ತು ಕಟ್ಟದ ಸಾಲವನ್ನು ಮನ್ನಾ ಮಾಡಿದ್ದೇಕೆ? ಹಾಗಾಗಿ ಸಮಸ್ಯೆಯಿರುವುದು ಹಣದ ಕೊರತೆಯಲ್ಲಲ್ಲ, ಬದಲಿಗೆ, ತನ್ನ ಹಿಂದಿನ ಕಾಂಗ್ರೆಸ್ ಸರ್ಕಾರದಂತೆ ದುಡಿಯುವ ಜನತೆಯನ್ನು ಬಲಿಕೊಟ್ಟು ಕಾರ್ಪೊರೇಟ್ ಮನೆತನಗಳಿಗೆ ಅನುಕೂಲ ಮಾಡಿಕೊಡುವ ಬಿಜೆಪಿ ಸರ್ಕಾರದ ಧೋರಣೆಯಲ್ಲಿ! ಇದು ಮೂಲ ವಿಷಯ.

### ಕೊನೆ ಮಾತುಗಳು

ಆದ್ದರಿಂದ, ಸರ್ಕಾರಕ್ಕೆ ಕಾನೂನುಬದ್ಧವಾದ ಕನಿಷ್ಠ ಬೆಂಬಲ ಬೆಲೆಯನ್ನು ಜಾರಿಗೊಳಿಸಲು ಇಷ್ಟವಿಲ್ಲದಿರುವುದು ಮತ್ತು ಹೊಸ ಕೃಷಿ ಮಾರುಕಟ್ಟೆಯ ರಾಷ್ಟ್ರೀಯ ನೀತಿಯ ರೂಪುರೇಷೆಯನ್ನು ಜಾರಿಗೊಳಿಸುವ ಪ್ರಯತ್ನ, ಇವುಗಳಲ್ಲಿ, ಮೂರು ಕರಾಳ ಕೃಷಿ ಕಾಯ್ದೆಗಳ ಮೂಲಸಾರವನ್ನು ಯಶಸ್ವಿಯಾಗಿ ಚಾಲ್ತಿಗೆ ತರುವ ಹುನ್ನಾರ ಅಡಗಿದೆ. ಇದು ಕೃಷಿಯನ್ನು ಆದ್ಯಂತವಾಗಿ ಕಾರ್ಪೊರೇಟೀಕರಣಕ್ಕೆ ಮುದ್ರೆಯೊತ್ತಿದಂತೆ ಮತ್ತು ರೈತರನ್ನು ದೈತ್ಯ ಕೃಷಿ ಕಂಪೆನಿಗಳ ಕೃಪಾಕಟಾಕ್ಷಕ್ಕೆ ಬಲಿಕೊಟ್ಟಂತೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ! ಈ ಪ್ರಕ್ರಿಯೆಯಲ್ಲಿ, ಜನಸಾಮಾನ್ಯರು ಮತ್ತಷ್ಟು ಹತಭಾಗ್ಯರಾಗಿ ನಿರ್ಗತಿಕರಾಗುತ್ತಾರೆ. ಆಗ ಖಂಡಿತವಾಗಿ ರೈತರು ಮತ್ತು ವಿಶಾಲ ಜನಸ್ತೋಮ ಎದ್ದು ನಿಲ್ಲುತ್ತಾರೆ ಮತ್ತು ಕೇಂದ್ರ ಬಿಜೆಪಿ ಸರ್ಕಾರದ ಹೀನ ವಿನ್ಯಾಸವನ್ನು ಸೋಲಿಸಲು ಹೋರಾಟವನ್ನು ಹರಿಬಿಡುತ್ತಾರೆ.

**ನೆನಪಿಡಿ, ಅನ್ನದಾತರು ಹೋರಾಡುತ್ತಾರೆ, ಗೆದ್ದೇ ಗೆಲ್ಲುತ್ತಾರೆ!**

# ದಾಖಲಾತಿ ಕಡಿಮೆ ಇರುವ ಸರಕಾರಿ ಪ್ರಾಥಮಿಕ ಶಾಲೆಗಳ ವಿಲೀನಕ್ಕೆ ಖಂಡನೆ:

ಪ್ರೊ. ಅಲ್ಲಮಪ್ರಭು ಬೆಟ್ಟದೂರು, ಎಐಎಸ್ಇಸಿ ರಾಜ್ಯಾಧ್ಯಕ್ಷರು

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಾಧ್ಯಕ್ಷರಾದ ಪ್ರೊ. ಅಲ್ಲಮಪ್ರಭು ಬೆಟ್ಟದೂರುರವರು ಈ ಕೆಳಗಿನ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ:

"ರಾಜ್ಯದ ಎಲ್ಲಾ ಜನಗಳ ವ್ಯಾಪಕ ವಿರೋಧದ ನಡುವೆಯೂ ರಾಜ್ಯ ಸರಕಾರವು ವಿದ್ಯಾರ್ಥಿಗಳ ದಾಖಲಾತಿ ಕಡಿಮೆ ಇರುವ ಪ್ರಾಥಮಿಕ ಶಾಲೆಗಳ ವಿಲೀನ ಮಾಡಲು ಹೊರಟಿರುವ ಮೂಲಕ ರಾಜ್ಯದ 6000ಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳನ್ನು ಮುಚ್ಚಲು ತೆರೆಮರೆಯಲ್ಲಿ ಪ್ರಯತ್ನಿಸಿರುವುದನ್ನು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ಕರ್ನಾಟಕ ರಾಜ್ಯ ಸಮಿತಿಯು ಖಂಡಿಸುತ್ತದೆ.

10ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಕೊಡಲು ಆಗುತ್ತಿಲ್ಲ ಎಂಬ ಅತಾರ್ಕಿಕ ನೆಪ ಹೇಳುತ್ತಾ ಅವನ್ನು ಸಮೀಪದ ಶಾಲೆಗಳಲ್ಲಿ ವಿಲೀನಗೊಳಿಸಿ, ಪ್ರಸ್ತುತವಿರುವ ಶಾಲೆಗಳನ್ನು ಖಾಯಂ ಆಗಿ ಮುಚ್ಚುವ ಕ್ರಮವನ್ನು ಶಾಲಾ ಸುಧಾರಣಾ ಆಯೋಗ ಹಿಂದಿನ ಸರಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಅಂದಿನಿಂದಲೇ ಈ ಪ್ರಸ್ತಾವದ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿದೆ. ಹಾಗಿದ್ದರೂ, ವಾಹನ ವ್ಯವಸ್ಥೆ ಮೂಲಕ ದೂರದ ಹಳ್ಳಿ ಮಕ್ಕಳನ್ನು ಶಾಲೆಗೆ ಕರೆತರುತ್ತೇವೆ ಎಂದು ರಾಜ್ಯ ಸರಕಾರ ಹೇಳಿದೆ. ಬಡತನ, ನಿರುದ್ಯೋಗ, ಆರ್ಥಿಕ ಸಮಸ್ಯೆಗಳಿಂದ ದಿನನಿತ್ಯ ತಮ್ಮ ಹೊಟ್ಟೆಪಾಡಿಗೆ ಪರದಾಡುತ್ತಾ, ತಮ್ಮ ಹಳ್ಳಿಗಳಲ್ಲಿಯೇ ಮಕ್ಕಳನ್ನು ಶಿಕ್ಷಣಕ್ಕೆ ಕಳುಹಿಸಲು ಯೋಚಿಸುತ್ತಿರುವ ಪೋಷಕರು ಅವರನ್ನು ದೂರದ ಊರಿಗೆ ಹೇಗೆ ಕಳುಹಿಸುತ್ತಾರೆ? ಇದು ಸರ್ಕಾರಿ ಶಾಲೆಗಳನ್ನು ಮುಚ್ಚಲು ನಡೆಸುತ್ತಿರುವ ಹುನ್ನಾರವಷ್ಟೇ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಮತ್ತು ಸರ್ಕಾರಿ ಶಾಲೆಗಳನ್ನು ಉಳಿಸುವಲ್ಲಿ ರಾಜ್ಯ ಸರ್ಕಾರ ನಿಜವಾಗಿಯೂ ಆಸಕ್ತಿ ಹೊಂದಿದ್ದರೆ ಸರಕಾರಿ ಶಾಲೆಗಳಲ್ಲಿ ಕಡಿಮೆ ದಾಖಲಾತಿಗೆ ಮುಖ್ಯ ಕಾರಣಗಳನ್ನು ಹುಡುಕಿ, ಪರಿಹರಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೆಲವು ಸರ್ಕಾರಿ ಶಾಲೆಗಳಲ್ಲಿ ಮಾದರಿ ಶಾಲೆ ಆರಂಭಿಸಿ, ಸುತ್ತಲಿನ ಶಾಲೆಗಳ ಮಕ್ಕಳನ್ನು ಅಲ್ಲಿಗೆ ಕರೆತರುವ ಮೂಲಕ ಗುಣಮಟ್ಟದ ಶಿಕ್ಷಣ ನೀಡುತ್ತೇವೆ, ತನ್ಮೂಲಕ ಆರ್ಥಿಕ ಹೊರೆ ಕಡಿಮೆಯಾಗುತ್ತದೆ, ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯುತ್ತದೆ ಎನ್ನುವ ಅಧಿಕಾರಿಗಳ ವಾದ ಯಾವ ರೀತಿಯಲ್ಲಿಯೂ ಸಮರ್ಥನೀಯವಲ್ಲ.

ಸಾರ್ವತ್ರಿಕ ಶಿಕ್ಷಣ ನೀಡುವುದು ಸರಕಾರಗಳ ಆದ್ಯ ಕರ್ತವ್ಯ. ಇಲ್ಲಿ ಲಾಭ–ನಷ್ಟದ ಲೆಕ್ಕಾಚಾರ ಮಾಡಬಾರದು. ಶಿಕ್ಷಣಕ್ಕಾಗಿ ಹಣವನ್ನು ಉಪಯೋಗಿಸುವುದು ಹೊರೆಯೆಂದು ಭಾವಿಸುತ್ತಿರುವುದು ನಿಜಕ್ಕೂ ದುರದೃಷ್ಟಕರ ಮತ್ತು ವಿಷಾದನೀಯ. ಶಿಕ್ಷಣದ ಖಾಸಗಿಕರಣಕ್ಕೆ ತೋರಿಸುತ್ತಿರುವ ಹಸಿರು ನಿಶಾನೆ ಇದಾಗಿದೆ. ಇದರಿಂದ ವಿದ್ಯಾಸಾಗರ್, ಸಾವಿತ್ರಿಬಾಯಿ ಫುಲೆ, ನೇತಾಜಿ, ಭಗತ್‌ಸಿಂಗ್‌ರವರ ಕನಸಿನ ಪ್ರಜಾತಾಂತ್ರಿಕ, ವೈಜ್ಞಾನಿಕ–ಧರ್ಮನಿರಪೇಕ್ಷಿತ ಶಿಕ್ಷಣದ ಪರಿಕಲ್ಪನೆಗೆ ಎಳ್ಳು ನೀರು ಬಿಟ್ಟಂತಾಗುತ್ತದೆ. ಅನಕ್ಷರತೆ ಹೋಗಲಾಡಿಸಲು ಸರಕಾರಿ ಶಿಕ್ಷಣ ವ್ಯವಸ್ಥೆಯು ತುಂಬಾ ಪರಿಣಾಮಕಾರಿ ಮತ್ತು ಅತ್ಯವಶ್ಯಕ. ಹಾಗಾಗಿ ಮಕ್ಕಳ ಕಡಿಮೆ ದಾಖಲಾತಿ ನೆಪವೊಡ್ಡಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚುವ ಕೆಲಸವನ್ನು ತಕ್ಷಣ ಕೈಬಿಡಬೇಕು. ಇತ್ತೀಚೆಗೆ ಬಿಡುಗಡೆಯಾದ ವರದಿ ಪ್ರಕಾರ ರಾಜ್ಯದಲ್ಲಿ ಕಡಿಮೆ ದಾಖಲಾತಿ ಇರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಆರು ಸಾವಿರಕ್ಕೆ ತಲುಪಿದೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಎಲ್ಲವೂ ವಿಲೀನವಾದರೆ, ರಾಜ್ಯದಲ್ಲಿ ಶೇ.25ರಷ್ಟು ಸರಕಾರಿ ಶಾಲೆಗಳಿಗೆ ಬೀಗ ಬೀಳಲಿದೆ. ಇದರಿಂದ 50 ಸಾವಿರಕ್ಕೂ ಅಧಿಕ ಮಕ್ಕಳ ಭವಿಷ್ಯ ಆತಂಕಕ್ಕೆ ಒಳಪಡಲಿದೆ. ಇದರಿಂದ ದೇಶದ ಪ್ರತಿಯೊಂದು ಮಗುವೂ ಶಿಕ್ಷಣ ಪಡೆಯುವುದು ಅದರ ಮೂಲಭೂತ ಹಕ್ಕು ಎಂಬ ಸಂವಿಧಾನದ ಆಶಯಕ್ಕೆ ಕೊಡಲಿಯೇಟು ನೀಡಿದಂತಾಗುತ್ತದೆ. ಆದ್ದರಿಂದ ರಾಜ್ಯದ ಎಲ್ಲಾ ಪ್ರಜ್ಞಾವಂತ ಜನತೆ ಇದನ್ನು ಒಕ್ಕೊರಲಿನಿಂದ ವಿರೋಧಿಸಬೇಕು.

ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಬೋಧನೆ–ಕಲಿಕೆಗೆ ಪ್ರಾಮುಖ್ಯತೆಯನ್ನು ನಿಡಬೇಕು. ಮತ್ತು ಅದಕ್ಕಾಗಿ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಶೇಕಡ 10ರಷ್ಟು ಮೀಸಲಿಟ್ಟು ಸರ್ಕಾರಿ ಶಾಲಾ–ಕಾಲೇಜುಗಳನ್ನು ಉಳಿಸಿ ಬೆಳೆಸಬೇಕು. ಆ ಶಾಲೆಗಳಲ್ಲಿರುವ ಅವೈಜ್ಞಾನಿಕ ವಿಧಾನವಾದ ನಲಿ–ಕಲಿ ಬೋಧನಾಕ್ರಮವನ್ನು ರದ್ದುಗೊಳಿಸಿ, ಕಾಲದ ಪರೀಕ್ಷೆಯಲ್ಲಿ ಸಾಬೀತಾದ ಬೋಧನಾಕ್ರಮವನ್ನು ಅಳವಡಿಸಿಕೊಂಡು, ಅವಶ್ಯಕ ಬೋಧಕ–ಬೋಧಕೇತರ ಹುದ್ದೆಗಳನ್ನು ತುಂಬಬೇಕು. ಶಾಲೆಗಳನ್ನು ಮುಚ್ಚಿ ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಕತ್ತಲೆಗೆ ದೂಡುವ ಬದಲು ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಮತ್ತು ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಬೇಕಾದ ಎಲ್ಲಾ ಕ್ರಮಗಳನ್ನು ಸರ್ಕಾರ ತಕ್ಷಣ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತೇವೆ."

### ಮೆಟ್ರೋ ಪ್ರಯಾಣ ದರ ಏರಿಕೆ:

# ಬೇಜವಾಬ್ದಾರಿ – ಜನವಿರೋಧಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿಲುವು ಮತ್ತೆ ಬಯಲು!

## ಜನಾಕ್ರೋಶದ ಧ್ವನಿಯಾದ ಸಮಾವೇಶ

**‘ಬೆಂಗಳೂರು ಉಳಿಸಿ ಸಮಿತಿ’** ಸಂಯೋಜಿತ ***ಬೆಂಗಳೂರು ಮೆಟ್ರೋ ಪ್ರಯಾಣಿಕರ ಸಂಘವು,*** ಮೆಟ್ರೋ ರೈಲು ಪ್ರಯಾಣ ದರ ಸುಮಾರು 45% ರಿಂದ 100% ಏರಿಕೆಯಾಗಿರುವ ವಿರುದ್ಧ 2025 ರ ಫೆಬ್ರವರಿ 23 ರಂದು ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಸಭಾಂಗಣದಲ್ಲಿ ಸಮಾವೇಶವನ್ನು ಆಯೋಜಿಸಿತ್ತು. ನಗರದ ವಿವಿಧ ಭಾಗಗಳಿಂದ ನಾಗರಿಕರು, ವಿದ್ಯಾರ್ಥಿಗಳು, ಯುವಜನರು, ಮೆಟ್ರೋ ಪ್ರಯಾಣಿಕರು ಪಾಲ್ಗೊಂಡಿದ್ದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

**ಒಂದು ಉತ್ತಮ ನಗರವೆಂದರೆ ಶೇಕಡ 80ರಷ್ಟು ಜನ ನಡಿಗೆ, ಸೈಕಲ್ ಸೇರಿದಂತೆ ಸಾರ್ವಜನಿಕ ಸಾರಿಗೆ ಬಳಸಬೇಕು – ಪ್ರೊ. ಆಶಿಶ್ ವರ್ಮಾ**

ಬೆಂಗಳೂರಿನ ಐಐಎಸ್‌ಸಿಯ ಸಾರಿಗೆ ವ್ಯವಸ್ಥೆಯ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಆಶಿಶ್ ವರ್ಮಾ ಅವರು ಮಾತನಾಡಿ, ಕೈಗೆಟಕುವ ಮತ್ತು ಸುಲಭಸಾಧ್ಯ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಸರ್ಕಾರದ ಮೂಲಭೂತ ಜವಾಬ್ದಾರಿಯಾಗಿದೆ, ಇದು ಟ್ರಾಫಿಕ್ ದಟ್ಟಣೆಯನ್ನು ಕಡಿಮೆ ಮಾಡಿ, ಪರಿಸರ ಮಾಲಿನ್ಯವನ್ನೂ ತಡೆಯುತ್ತದೆ ಎಂದರು. ಸದೃಢವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಲ್ಲಿ ಹೂಡಿಕೆ ಮಾಡುವ ಮಹತ್ವದ ಸಾಮಾಜಿಕ–ಆರ್ಥಿಕ ಪ್ರಯೋಜನಗಳನ್ನು ಅವರು ಒತ್ತಿ ಹೇಳಿದರು. ನಮ್ಮ ಮೆಟ್ರೋ ಸಾರ್ವಜನಿಕ ಸೇವೆಯ ಬದಲು ಲಾಭಕ್ಕೆ ಆದ್ಯತೆ ನೀಡುತ್ತಿದೆ ಎಂದು ಟೀಕಿಸುತ್ತಾ, ದರ ನಿಗದಿ ಕಾರ್ಯವಿಧಾನಗಳಲ್ಲಿ ಹೆಚ್ಚಿನ ಪಾರದರ್ಶಕತೆಗೆ ಕರೆ ನೀಡಿದರು.

**ಆರೋಗ್ಯ ಕ್ಷೇತ್ರದ ಬೆನ್ನಲ್ಲೇ ಸಾರ್ವಜನಿಕ ಸಾರಿಗೆ ವ್ಯವಸ್ಥೆಯೂ “ಕಾರ್ಪೊರೇಟೀಕರಣ”ದ ಹಾದಿ ಹಿಡಿದಿದೆ – ಡಾ: ಸುಧಾ ಕಾಮತ್**

ಮೆಡಿಕಲ್ ಸರ್ವಿಸ್ ಸೆಂಟರ್(ಎಂಎಸ್‌ಸಿ)ನ ಕರ್ನಾಟಕ ರಾಜ್ಯ ಅಧ್ಯಕ್ಷರಾದ ಡಾ. ಸುಧಾ ಕಾಮತ್, ಬೆಂಗಳೂರು ಒಮ್ಮೆ “ಪಿಂಚಣಿದಾರರ ಸ್ವರ್ಗ” ಆಗಿತ್ತು, ಆದರೀಗ ಟ್ರಾಫಿಕ್ ದಟ್ಟಣೆ ಮತ್ತು ಮಾಲಿನ್ಯದಿಂದಾಗಿ ಬಹುತೇಕ ನಾಗರಿಕರು ಉಸಿರಾಟದ ಕಾಯಿಲೆಗಳಿಂದ ಬಳಲುತ್ತಿದ್ದು ಈಗ “ಅನಾರೋಗ್ಯ ನಗರಿ” ಆಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. “ನಮ್ಮ ಮೆಟ್ರೋ”, ಸಾರ್ವಜನಿಕ ಸಾರಿಗೆ ವ್ಯವಸ್ಥೆ ಒದಗಿಸುವ ಮೂಲಕ, ವೇಗವಾಗಿ ಪ್ರಯಾಣಿಸಲು ಮತ್ತು ಪಾರ್ಕಿಂಗ್ ತೊಂದರೆಗಳನ್ನು ಕಡಿಮೆ ಮಾಡಲು ಸಹಾಯ ಮಾಡಿದೆ. ಆದರೆ ತೀವ್ರ ದರ ಏರಿಕೆಯಿಂದಾಗಿ ಅದು ಸಾಮಾನ್ಯರಿಗೆ ಕೈಗೆಟಕದಂತಾಗಿದೆ ಎಂದವರು ವ್ಯಥೆ ಪಟ್ಟರು. ಆರೋಗ್ಯ ಕ್ಷೇತ್ರದಂತೆಯೇ ಸಾರ್ವಜನಿಕ ಸಾರಿಗೆ ವ್ಯವಸ್ಥೆಯೂ “ಕಾರ್ಪೊರೇಟೀಕರಣ”ದ ಹಾದಿ ಹಿಡಿದಿರುವುದನ್ನು ಅವರು ಟೀಕಿಸಿದರು.

**ವಿದೇಶಿ ಹೂಡಿಕೆ ಒಪ್ಪಂದಗಳ ಷರತ್ತುಗಳು ಮತ್ತು ಕಾರ್ಯಾಚರಣಾ ವೆಚ್ಚ ಮತ್ತು ಲಾಭಗಳ ಸಿಎಜಿ ಆಡಿಟ್ ನಡೆಸಬೇಕು : ಶ್ರೀ. ವಿ.ಎನ್. ರಾಜಶೇಖರ್**

ಬೆಂಗಳೂರು ಉಳಿಸಿ ಸಮಿತಿಯ ಶ್ರೀ. ವಿ.ಎನ್. ರಾಜಶೇಖರ್ ಅವರು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ದರ ಏರಿಕೆ ಬಗ್ಗೆ ಪರಸ್ಪರ ದೋಷಾರೋಪಣೆ ಮಾಡುವ ಬದಲು, ಈ ಏರಿಕೆಯನ್ನು ಹಿಂಪಡೆಯಲು ಕಾರ್ಯೋನ್ಮುಖರಾಗಬೇಕು ಎಂದು ಒತ್ತಾಯಿಸಿದರು. ಪೆಟ್ರೋಲ್, ಡೀಸೆಲ್ ಮೇಲೆ ಮತ್ತು ಆಸ್ತಿ ನೋಂದಣಿಯಿಂದ ಸಂಗ್ರಹವಾದ ‘ಮೆಟ್ರೋ ಸೆಸ್’ ಆದಾಯ, ಈ ಕೆಲ ವರ್ಷಗಳಿಂದ ಲಾಭದಲ್ಲೇ ನಡೆಯುತ್ತಿರುವ ಬಿಎಂಆರ್‌ಸಿಎಲ್‌ನ ಆದಾಯ, ಈ ಬಗ್ಗೆ ಪ್ರಶ್ನಿಸಿದರು; ವಿದೇಶಿ ಹೂಡಿಕೆ ಒಪ್ಪಂದಗಳ ಷರತ್ತುಗಳ ಬಗ್ಗೆ ಮತ್ತು ಕಾರ್ಯಾಚರಣೆಯ ವೆಚ್ಚಗಳು ಮತ್ತು ಲಾಭಗಳನ್ನು ನಿರ್ಣಯಿಸಲು ಸಿಎಜಿ ಆಡಿಟ್ ಅನ್ನು ಒತ್ತಾಯಿಸಿದರು. ಜೊತೆಗೆ, ಅವರು ಸರ್ಕಾರದ ಪಾರದರ್ಶಕತೆ ಮತ್ತು ಸ್ಪಂದನೆಯ ಕೊರತೆಯನ್ನು ಖಂಡಿಸಿ, ಸರ್ಕಾರ ಕಾರ್ಪೊರೇಟ್ ಹಿತಾಸಕ್ತಿಗೆ ತಲೆಬಾಗುತ್ತಿದೆ ಎಂದು ಆರೋಪಿಸಿದರು.

**ಮೆಟ್ರೋ ದರ ಏರಿಕೆ ವಿಶೇಷವಾಗಿ ಮಹಿಳೆಯರು ಮತ್ತು ಅಂಗವಿಕಲರಿಗೆ ಅತಿ ಹೆಚ್ಚು ಪೆಟ್ಟು ಕೊಡುತ್ತದೆ – ಡಾ. ಮೇಘನಾ ವರ್ಮಾ**

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್‌ನ ಸಹ ಪ್ರಾಧ್ಯಾಪಕರಾದ ಡಾ. ಮೇಘನಾ ವರ್ಮಾ, ಸಾರ್ವಜನಿಕ ಸಾರಿಗೆಯು ದುಬಾರಿಯಾದಲ್ಲಿ ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ, ಅದರಲ್ಲೂ ವಿಶೇಷವಾಗಿ ಮಹಿಳೆಯರು ಮತ್ತು ಅಂಗವಿಕಲರಿಗೆ ಅತಿ ಹೆಚ್ಚು ಪೆಟ್ಟು ಬೀಳುತ್ತದೆ ಎನ್ನುತ್ತಾ, ಬೆಂಗಳೂರಿನಂತಹ ಪ್ರಗತಿಶೀಲ




ಮಾತನಾಡುತ್ತಿರುವವರು: ಪ್ರೊ. ಆಶಿಶ್ ವರ್ಮಾ. ಅವರ ಬಲಗಡೆ: ಶ್ರೀ. ಜಿ. ಹನುಮೇಶ್, ಡಾ. ಜಿ.ಎಸ್. ಕುಮಾರ್, ಶ್ರೀ, ರಾಜಶೇಖರ್. ಎಡಗಡೆ: ಡಾ.ಸುಧಾ ಕಾಮತ್, ಡಾ. ಮೇಘನಾ ವರ್ಮಾ

ನಗರಕ್ಕೆ ಕ್ರಿಯಾತ್ಮಕ ಮತ್ತು ಕೈಗೆಟಕುವ ಮೆಟ್ರೋ ವ್ಯವಸ್ಥೆಯ ಅಗತ್ಯವಿದೆ ಎಂದು ಒತ್ತಿ ಹೇಳಿದರು ಮತ್ತು ಸರ್ಕಾರವು ಜನಕೇಂದ್ರಿತ ವಿಧಾನವನ್ನು ಅಳವಡಿಸಿಕೊಳ್ಳುವಂತೆ ಒತ್ತಾಯಿಸಿದರು.

**ಆರ್ಥಿಕ ಸಂಕಷ್ಟಮಯ ಪರಿಸ್ಥಿತಿಯಲ್ಲಿ ಈ ದರ ಏರಿಕೆ ಗಾಯದ ಮೇಲೆ ಬರೆ ಎಳೆದಂತೆ!–ಪ್ರೊ: ಜಿ. ಎಸ್. ಕುಮಾರ್**

ಬೆಂಗಳೂರು ಉಳಿಸಿ ಸಮಿತಿಯ ಸದಸ್ಯರಾದ ಡಾ. ಜಿ. ಎಸ್. ಕುಮಾರ್ ಅವರು, ಈಗಾಗಲೇ, ಬಸ್ ದರ ಏರಿಕೆ, ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ಶಿಕ್ಷಣ–ಆರೋಗ್ಯ ಎಲ್ಲವೂ ದುಬಾರಿಯಾಗಿರುವಂತಹ ಸಮಾಜದ ‘ಆರ್ಥಿಕ ಸಂಕಷ್ಟಕರ’ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಮಾವೇಶದ ಮಹತ್ವವನ್ನು ಒತ್ತಿ ಹೇಳಿದರು. ಅನ್ಯಾಯಯುತವಾದ ಈ ದರ ಏರಿಕೆಯನ್ನು ಹಿಮ್ಮೆಟ್ಟಿಸಲು ಪ್ರಬಲ ಜನಚಳುವಳಿ ಕಟ್ಟಬೇಕೆಂದು ಆಶಿಸಿದರು.



**ಜನಾಕ್ರೋಶದ ಬೆನ್ನಲ್ಲಿ ಕೊಂಚ ಇಳಿಸುವ ಮೂಲಕ ಬಿಎಮ್‌ಆರ್‌ಸಿಎಲ್ ಜನರ ಮೂಗಿಗೆ ತುಪ್ಪ ಸವರಿದರು – ಎನ್ ರವಿ**

ಬೆಂಗಳೂರು ಉಳಿಸಿ ಸಮಿತಿಯ ಶ್ರೀ. ಎನ್. ರವಿ ಅವರು, ಕುಮಾರಸ್ವಾಮಿ ಲೇಔಟ್‌ನಲ್ಲಿ ಉದ್ಯಾನವನ್ನು ನಿರ್ಮಿಸುವಲ್ಲಿ, ಬೆಂಗಳೂರಿನಾದ್ಯಂತ ನೀರಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಮಿತಿಯ ಯಶಸ್ವಿ ಹೋರಾಟಗಳನ್ನು ಉಲ್ಲೇಖಿಸಿ, ಬಲವಾದ ಜನಚಳುವಳಿ ಮಾತ್ರ ಬದಲಾವಣೆಯನ್ನು ಸಾಧಿಸಲು ಸಾಧ್ಯ ಎಂದು ಘೋಷಿಸಿದರು.

ಮೆಟ್ರೋ ದರ ಹೆಚ್ಚಳದ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಲು ಸಮಾವೇಶವು ನಿರ್ಧರಿಸಿತು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ಮೆಟ್ರೋ ಪ್ರಯಾಣಿಕರ ಸಂಘ(ಬಿಎಂಸಿಎ)ದ ಪ್ರತಿನಿಧಿಯಾದ ಶ್ರೀ. ರಾಜೇಶ್ ಭಟ್ ಅವರು, ಬಿಎಂಸಿಎ ಮಹತ್ವ ಮತ್ತು ಅದಕ್ಕೆ ನಾಗರಿಕರಿಂದ ಆನ್‌ಲೈನ್‌ನಲ್ಲಿ ಮತ್ತು ಪ್ರತ್ಯಕ್ಷವಾಗಿ ಸಿಕ್ಕಿರುವ ಅಭೂತಪೂರ್ವ ಸ್ಪಂದನೆಯ ಬಗ್ಗೆ ವಿವರಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿ ಪ್ರೊ. ಮುರುಗೆಪ್ಪ, ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿಯಿಂದ ಶ್ರೀಮತಿ ದೀಪ್ತಿ ಮತ್ತು ಮೆಡಿಕಲ್ ಸರ್ವಿಸ್ ಸೆಂಟರ್‌ನಿಂದ ಡಾ. ಗಂಗಾಧರ್, ಬಿಎಂಸಿಎ ಪ್ರತಿನಿಧಿಯಾದ ಶ್ರೀ. ಜಿ. ಹನುಮೇಶ್ ಹಾಗೂ ಸಾರ್ವಜನಿಕರು ಸಂವಾದದಲ್ಲಿ ಭಾಗಿಯಾಗಿ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದರು, ಬಿಎಂಸಿಎ ಆಂದೋಳನದಲ್ಲಿ ತಾವು ಭಾಗಿಯಾಗುವ ಆಶಯ ವ್ಯಕ್ತಪಡಿಸಿದರು.

---

### 13/02/2025: ಬೆಂಗಳೂರು, ಫ್ರೀಡಂ ಪಾರ್ಕ್:

**ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ)ಗೆ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘದ** ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, 2025–26ನೇ ಸಾಲಿನ ಬಜೆಟ್‌ನಲ್ಲಿ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ನ್ಯಾಯಾಲಯದ ಆದೇಶದಂತೆ ಅಂಗನವಾಡಿ ನೌಕರರನ್ನು ‘ಸಿ’ ಮತ್ತು ‘ಡಿ’ ಗ್ರೂಪ್ ನೌಕರರೆಂದು ಪರಿಗಣಿಸಿ ಆದೇಶ ಮಾಡಬೇಕು, ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಗ್ರ್ಯಾಚ್ಯೂಟಿ ಹಣವನ್ನು ನಿವೃತ್ತಿಯಾದ ಎಲ್ಲಾ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಕೂಡಲೇ ಪಾವತಿಸಬೇಕು, 2ಲಕ್ಷ ರೂ. ನಿವೃತ್ತಿ ಪರಿಹಾರವನ್ನು ಘೋಷಿಸಬೇಕು, ಭರವಸೆ ನೀಡಿದಂತೆ 2025–26ನೇ ಸಾಲಿನ ಬಜೆಟ್‌ನಲ್ಲಿ ಕಾರ್ಯಕರ್ತೆಯರಿಗೆ 15.000 ರೂ. ಮತ್ತು ಸಹಾಯಕಿಯರಿಗೆ 10,000 ರೂ. ಮಾಸಿಕ ಗೌರವ ಧನ ಹೆಚ್ಚಿಸಬೇಕು, ಗಂಭೀರ ಕಾಯಿಲೆಗಳಿಗೆ ವೈದ್ಯಕೀಯ ಸಹಾಯಧನ ಪಾವತಿಸಬೇಕು, ಎಂಬುದು ಅವರ ಕೆಲವು ಬೇಡಿಕೆಗಳಾಗಿವೆ; ಅಲ್ಲಿಗೆ ಆಗಮಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾದ ಶ್ರೀ ರಾಘವೇಂದ್ರರವರು ಮನವಿ ಪತ್ರ ಸ್ವೀಕರಿಸಿ, ಅವರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದಾರೆ.



### ಯುದ್ಧಪಿಪಾಸು ಸಾಮ್ರಾಜ್ಯಶಾಹಿಗಳ ಹುನ್ನಾರ

# ಈಗ ‘ಹಸಿವೆ’ ಕೂಡ ಯುದ್ಧಾಸ್ತ್ರ

ತೀವ್ರ ವಿಪತ್ತಿಗೆ ಸಿಲುಕಿರುವ ಗಾಜ಼ಾದಲ್ಲಿನ ಸ್ಮಶಾನಮೌನ, ಭೀಕರ ಹತಾಶೆಯ ಪರಿಸ್ಥಿತಿ ಹಿಂದೆ ಒಂದು ವ್ಯವಸ್ಥಿತವಾದ ಸಂಚಿದೆ. ಹಲವು ವರ್ಷಗಳಿಂದ, ಈ ಯುದ್ಧಪೀಡಿತ ತುಂಡು ಭೂಮಿ ಕಠಿಣ ಶಿಕ್ಷೆಗೆ ಒಳಪಟ್ಟಿದೆ. ಹಸಿವು ಕೇವಲ ಯುದ್ಧದ ಪರಿಣಾಮ ಮಾತ್ರವಲ್ಲದೆ, ಅದೇ ಒಂದು ಲೆಕ್ಕಾಚಾರದ ಸಾಧನವೂ ಆಗಿದೆ. ಜನಸಮುದಾಯದ ಪ್ರತಿರೋಧವನ್ನು ದಮನ ಮಾಡಲು, ತಂತ್ರಗಾರಿಕೆಯಿಂದ, ಕಪಟದಿಂದ ಎಲ್ಲವನ್ನೂ ಧ್ವಂಸಮಾಡಿ ಜೊತೆಗೆ ಮನುಷ್ಯನ ಮೂಲ ಅವಶ್ಯಕತೆಯಾದ ಆಹಾರವನ್ನೂ ಗುರಿ ಮಾಡಲಾಗಿದೆ. ಪ್ಯಾಲೆಸ್ಟೀನ್‌ನ ಗಾಜ಼ಾ ಮಾತ್ರ ಇದಕ್ಕೆ ಉದಾಹರಣೆಯಲ್ಲ. ಸುಡಾನ್‌ನಿಂದ ಉಕ್ರೇನಿನವರೆಗೆ ನಡೆದ ಎಲ್ಲಾ ಯುದ್ಧಗಳಲ್ಲಿ ಲಾಭಕೋರ ಸಾಮ್ರಾಜ್ಯಶಾಹಿ ತಿಮಿಂಗಿಲಗಳು ಆಧುನಿಕ ಯುದ್ಧದ ಕ್ರೂರ ಯುದ್ಧನೀತಿಯಾಗಿ ‘ಹಸಿವೆ’ಯನ್ನೇ ಯುದ್ಧಾಸ್ತ್ರವನ್ನಾಗಿಸಿರುವುದು ಕಾಣುತ್ತಿದೆ.

ಸ್ಥಳೀಯ ಘರ್ಷಣೆಗಳಲ್ಲಿ, 2022ರವರೆಗೆ ಸುಮಾರು 3,77,000ಕ್ಕೂ ಹೆಚ್ಚು ಜೀವಹಾನಿಯಾಗಿದೆ ಎಂದು ಒಕ್ಕೂಟ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ(ಯುಎನ್‌ಡಿಪಿ) ಅಂದಾಜು ಮಾಡಿದೆ. ಅದು ಬಹುತೇಕ ಗಾಜ಼ಾ, ಸುಡಾನ್, ಉಕ್ರೇನ್ ದೇಶಗಳ ಯುದ್ಧ ವಲಯದಲ್ಲಿ ಆಗಿರುವುದಾಗಿ ವರದಿಯಾಗಿದೆ. ಇದರಲ್ಲಿ ಶೇಕಡ 60ರಷ್ಟು ಸಾವುಗಳಾಗಿರುವುದು ಯುದ್ಧದ ಕ್ರೌರ್ಯದಿಂದಲ್ಲ; ಬದಲಿಗೆ ಊಟವಿಲ್ಲದೆ, ರೋಗಗಳು ಮತ್ತು ಆರೋಗ್ಯ ಸೇವೆಯ ಕುಸಿತದಿಂದ ಎಂಬುದು ಆಘಾತಕಾರಿ. “ದಿ ಲಾನ್‌ಸೆಟ್” ಎಂಬ ಪ್ರತಿಷ್ಠಿತ ವೈದ್ಯಕೀಯ ನಿಯತಕಾಲಿಕವು ಈ ಭೀಕರ ಅಂಕಿ-ಅಂಶಗಳನ್ನು ಉಲ್ಲೇಖಿಸುತ್ತಾ, ಯಾವ ರೀತಿ ‘ತೀವ್ರ ಕೃತಕ ಅಭಾವ’ವನ್ನೇ ಶಸ್ತ್ರವನ್ನಾಗಿಸಿ ಬರೀ ಹೋರಾಟಗಾರರನ್ನಷ್ಟೇ ಅಲ್ಲದೇ ನಾಗರಿಕರನ್ನೂ ನಾಶಮಾಡಲಾಗುತ್ತಿದೆ ಎನ್ನುವುದರ ಗಂಭೀರ ಚಿತ್ರಣವನ್ನು ನೀಡಿದೆ.

### ‘ಹಸಿವಿನ ಯುದ್ಧ’ದ ಅಂಗರಚನೆ

ಯುದ್ಧಾನಂತರ ಗಾಜ಼ಾದಲ್ಲಿ ಅಳಿದುಳಿದಿರುವ ತೋಟಗಳು, ಧ್ವಂಸವಾಗಿರುವ ನೀರಾವರಿ ವ್ಯವಸ್ಥೆ, ಬತ್ತಿ ಹೋಗಿರುವ ಅಣೆಕಟ್ಟುಗಳ ಪಳಯುಳಿಕೆಗಳು ಎದ್ದು ಕಾಣುತ್ತಿವೆ. ಇವೆಲ್ಲವೂ ಬರೀ ಯುದ್ಧದ ಸಂದರ್ಭದಲ್ಲಿ ಅಕಸ್ಮಾತ್ತಾಗಿ ಆದ ಹಾನಿಯಲ್ಲ, ಬದಲಿಗೆ ಯುದ್ಧ ಪಿಪಾಸು ಅಮೆರಿಕನ್ ಸಾಮ್ರಾಜ್ಯಶಾಹಿ ಬೆಂಬಲಿತ ಇಸ್ರೇಲ್ ನಡೆಸಿರುವ ಉದ್ದೇಶಪೂರ್ವಕ ವಿನಾಶದ ಕೃತ್ಯಗಳು. ಒಮ್ಮೆ ಜೀವನಾಧಾರವಾಗಿದ್ದ ಹಣ್ಣಿನ ತೋಪುಗಳು ಬುಲ್‌ಡೋಜರ್ ಮತ್ತು ವೈಮಾನಿಕ ದಾಳಿಗಳಿಂದ ನೆಲಸಮವಾಗಿವೆ, ಕೃಷಿಭೂಮಿಯನ್ನು ಹಾಳುಗೆಡವಲಾಗಿದೆ, ಬಾವಿಗಳಿಗೆ ವಿಷ ಹಾಕಲಾಗಿದೆ – ಒಟ್ಟಾರೆ ಇಡೀ ಕೃಷಿ ಆರ್ಥಿಕತೆ ವ್ಯವಸ್ಥಿತವಾಗಿ ವಿನಾಶದತ್ತ ಹೋಗುವಂತೆ ಮಾಡುವುದೇ ಸಾಮ್ರಾಜ್ಯಶಾಹಿ ಆಕ್ರಮಣಕಾರರ ಯುದ್ಧ ನೀತಿಯ ಭಾಗವಾಗಿದೆ.

ಇದೇ ತರಹದ ವಿದ್ಯಮಾನಗಳು ಬೇರೆಡೆಗಳಲ್ಲೂ ನಡೆದಿವೆ. ಸುಡಾನ್‌ನಲ್ಲಿ ವ್ಯವಸ್ಥಿತ ದಿಗ್ಬಂಧನಗಳ ಮೂಲಕ ಜೀವನಾವಶ್ಯಕ ವಸ್ತುಗಳ ಪೂರೈಕೆಯನ್ನು ತಡೆದು ಅಲ್ಲಿನ ಜನಸಮುದಾಯಗಳು ಹಸಿವಿನಿಂದ ತತ್ತರಿಸುವಂತೆ ಮಾಡುತ್ತಾ ಹಸಿವನ್ನೂ ಕೂಡ ದಮನ ಮಾಡುವ ಅಸ್ತ್ರವನ್ನಾಗಿ ಉಪಯೋಗಿಸಲಾಗಿದೆ. ಉಕ್ರೇನಿನಲ್ಲಿ, ಧಾನ್ಯಗಳ ಉಗ್ರಾಣ ಹಾಗೂ ಮೂಲಸೌಕರ್ಯಗಳ ಮೇಲೆ ದಾಳಿ ಮಾಡುವುದರ ಮೂಲಕ ಸ್ಥಳೀಯವಾಗಿ ಮಾತ್ರವಲ್ಲದೇ, ಜಾಗತಿಕ ಆಹಾರ ಪೂರೈಕೆಯಲ್ಲಿಯೂ ಏರಿಳಿತವಾಗುವಂತೆ ಮಾಡಲಾಗಿದೆ. ಹಸಿವನ್ನೇ ಯುದ್ಧದ ಅಸ್ತ್ರವನ್ನಾಗಿಸುವ ಈ ಕುತಂತ್ರವು ಬರೀ ಜೀವಗಳನ್ನು ಬಲಿ ತೆಗೆದುಕೊಳ್ಳುವುದಷ್ಟೇ ಅಲ್ಲದೇ, ಮಾನವೀಯತೆಯನ್ನು ಬೆಸೆಯುವ ಕೊಂಡಿಗಳನ್ನು ಪುಡಿಗಟ್ಟಿ ಸಮಾಜದ ಹಂದರವನ್ನು ಧ್ವಂಸಮಾಡಿವೆ.

### ಕಾನೂನಾತ್ಮಕ ಮತ್ತು ನೈತಿಕ ಶೂನ್ಯತೆ

ಜಿನೆವಾ ಸಮಾವೇಶಗಳಲ್ಲಿ ಮೂಡಿದ ಅಂತರರಾಷ್ಟ್ರೀಯ ಮಾನವೀಯತೆಯ ಕಾನೂನು (ಇಂಟರ್‌ನ್ಯಾಷನಲ್ ಹ್ಯುಮಾನಿಟೇರಿಯನ್ ಲಾ), ನಾಗರಿಕ ಸಮಾಜವು ಹಸಿವಿನಿಂದ ಬಳಲುವುದನ್ನು ಸ್ಪಷ್ಟವಾಗಿ ನಿಷೇಧಿಸಿದೆ. ಈ ಕಾನೂನಿನ ಪ್ರಕಾರ ಜನಸಾಮಾನ್ಯರಿಗೆ ಅನ್ನ ಮತ್ತು ನೀರು, ಇವೆರಡನ್ನೂ ನಿರಾಕರಿಸುವುದು ಕಾನೂನುಬಾಹಿರವಾಗಿದೆ. ಇಷ್ಟಾದರೂ, ಈಗಿನ ಏಕಧ್ರುವ ಪ್ರಪಂಚದಲ್ಲಿ, ಒಂದೆಡೆ ಬಲಿಷ್ಠ ಸಾಮ್ರಾಜ್ಯಶಾಹಿ ಅಮೆರಿಕಾ ಮತ್ತದರ ಮಿತ್ರ ದೇಶಗಳು, ಮತ್ತೊಂದೆಡೆ ರಷ್ಯಾ, ಚೀನಾದಂತಹ ದೇಶಗಳು ಯಾವುದೇ ಎಗ್ಗು-ಸಿಗ್ಗಿಲ್ಲದೆ ಇವನ್ನು ಉಲ್ಲಂಘನೆ ಮಾಡುತ್ತಿವೆ.

ಇದಕ್ಕೆ ಸಾಕ್ಷಿಯಾಗಿ, ಸಾಮ್ರಾಜ್ಯಶಾಹಿ ಅಮೆರಿಕಾದ ಮಧ್ಯಪ್ರಾಚ್ಯದ ಕೇಂದ್ರವಾದ ಜ಼ಿಯೋನಿಸ್ಟ್ ಇಸ್ರೇಲ್‌ನ ರಕ್ಷಣಾ ಮಂತ್ರಿ ಯಾವ್ ಗಾಲೆಂಟ್‌ನ “ವಿದ್ಯುತ್‌ಶಕ್ತಿ ಇಲ್ಲ, ಊಟ ಇಲ್ಲ, ನೀರು ಇಲ್ಲ, ಇಂಧನ ಇಲ್ಲ” ಎನ್ನುವ ಮೈನಡುಕ ಹುಟ್ಟಿಸುವ ಘೋಷಣೆಯನ್ನು ಗಮನಿಸಿ. ರಾಷ್ಟ್ರೀಯ ಭದ್ರತಾ ಮಂತ್ರಿಗಳಾದ ಇಟಾಮರ್ ಬೆನ್-ಗ್ವಿರ್, ಜನ ಸಾಮಾನ್ಯರಿಗೆ ಎಲ್ಲವನ್ನೂ ವಂಚಿಸುವ ನೀತಿಯನ್ನೇ ಬಹಿರಂಗಪಡಿಸಿದ್ದಾರೆ. ಇವು ಗಾಜ಼ಾ ಜನರನ್ನು ಮೂಲಭೂತ ಅವಶ್ಯಕತೆಗಳಿಂದ ವಂಚಿಸುವ ವ್ಯವಸ್ಥಿತವಾದ ಆಕ್ರಮಣದ ಅಡಿಪಾಯಗಳೇ ಆಗಿವೆ.

ಇಂತಹ ಕುಕೃತ್ಯಗಳು ಇಂದು ಕೇವಲ ಗಾಜ಼ಾಗೆ ಮಾತ್ರ ಸೀಮಿತವಾಗಿಲ್ಲ. ಸುಡಾನ್‌ನಲ್ಲೂ ಇದೇ ಪರಿಸ್ಥಿತಿ ಇದೆ. ಉಕ್ರೇನ್‌ನಲ್ಲಿ, ರಷ್ಯನ್ ಸಾಮ್ರಾಜ್ಯಶಾಹಿಗಳು ಕೃಷಿಯ ಮೂಲ ವ್ಯವಸ್ಥೆಯನ್ನೇ ಗುರಿಮಾಡಿ ನಡೆಸಿರುವ ದಾಳಿಯಿಂದಾಗಿ ಹಿಂದೆಂದೂ ಆಗದಿರುವಂತಹ ಮಟ್ಟದ ಕ್ಷಾಮ ತಲೆದೋರಿದೆ. ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ಶಕ್ತಿಗಳ ತೋಳ್ಬಲದ ಭಾರದಡಿ, ರಾಜಕೀಯ ಜಡತ್ವದಿಂದಾಗಿ ನ್ಯಾಯ ನಲುಗಿ ಹೋಗಿ ಶೂನ್ಯ ಆವರಿಸುತ್ತಿದೆ.

### ಅಂಕಿಸಂಖ್ಯೆಗಳಾಗಿರುವ ಮನುಷ್ಯ ಜೀವಗಳು

ಅಂಕಿ-ಸಂಖ್ಯೆಯ ಪ್ರತಿ ಮಾಹಿತಿಯ ಹಿಂದೆ ಮನುಷ್ಯನೊಬ್ಬನ ಕತೆ ಇದೆ. ಆದರೆ ಅದನ್ನು ಅಂಕಿ-ಅಂಶಗಳು ಬಿಚ್ಚಿಡುವುದಿಲ್ಲ. ಗಾಜ಼ಾದಲ್ಲಿ, ಕಟ್ಟಡಗಳ ಅವಶೇಷಗಳ ನಡುವೆ ಆಹಾರದ ತುಂಡುಗಳನ್ನು ಹುಡುಕುವ ಕುಟುಂಬಗಳು, ತನ್ನ ಅಪೌಷ್ಟಿಕ ಮಗು ಸಾವಿನತ್ತ ಜಾರುತ್ತಿರುವುದರ ಅರಿವು ಇರುವ ತಂದೆಯ ಮುಖ, ಸುಡಾನ್‌ನಲ್ಲಿ ಸ್ಥಳಾಂತರಗೊಂಡವರನ್ನು ಬಾಧಿಸುತ್ತಿರುವ ಕ್ಷಾಮದ ನೋವು, ಉಕ್ರೇನ್‌ನಲ್ಲಿ ಮೂಲಭೂತ ವ್ಯವಸ್ಥೆಯ ಮೇಲಾಗಿರುವ ದಾಳಿಗಳಿಂದ, ಆಗೀಗ ಸಿಗುವ ಸಹಾಯಕ್ಕಾಗಿ ಅಂಗಾಲಾಚುವ ಜನಗಳು – ಇವೆಲ್ಲವೂ ಈ ಅಂಕಿ-ಅಂಶಗಳ ಹಿಂದಿರುವ ಕರಾಳ ಸತ್ಯವನ್ನು ಅನಾವರಣಗೊಳಿಸುತ್ತವೆ.

ಈ ಹಸಿವು ಸೃಷ್ಟಿಸಿರುವ ಮನೋರೋಗಿಗಳ ಸಂಖ್ಯೆ ಎಲ್ಲೆ ಮೀರಿದ್ದು, ಅದು ವ್ಯಕ್ತಿಗಳ ದೈಹಿಕ ಕಸುವನ್ನು ಕಸಿದುಕೊಳ್ಳುವುದಷ್ಟೇ ಅಲ್ಲದೇ, ಅವರ ಆತ್ಮಗೌರವ, ಭರವಸೆಗಳನ್ನೂ ಧ್ವಂಸ ಮಾಡಿದೆ. ಮಕ್ಕಳ ಮೇಲಾಗುವ ದೀರ್ಘ ಕಾಲದ ಪರಿಣಾಮ ವಿನಾಶಕಾರಿಯಾಗಿದೆ. ಅಪೌಷ್ಟಿಕತೆಯಿಂದಾಗಿ, ದೈಹಿಕ ಮತ್ತು ಮಾನಸಿಕ ಬೆಳವಣಿಗೆಯೂ ಕುಂಠಿತವಾಗುತ್ತವೆ; ಯುದ್ಧಾನಂತರವೂ ಬಡತನ, ಹತಾಶೆ ಜೀವನದ ಭಾಗವಾಗಿಬಿಡುತ್ತವೆ.

### ಕಾಡುವ ಇತಿಹಾಸದ ಘೋರ ನೆನಪುಗಳು

ಹಸಿವನ್ನು ಆಯುಧವಾಗಿಸುವ ಈ ತಂತ್ರಗಾರಿಕೆ ಹೊಸದೇನಲ್ಲ. 1941ರ ಸೆಪ್ಟೆಂಬರ್‌ನಲ್ಲಿ ಲೆನಿನ್‌ಗ್ರಾಡ್ ವಶಪಡಿಸಿಕೊಳ್ಳುವ ನಾಜ಼ಿಗಳ ಪ್ರಯತ್ನ, ನೈಜೀರಿಯಾದ ಆಂತರಿಕ ಯುದ್ಧದ ನಂತರದ ಬಯಾಫ್ರ ಕ್ಷಾಮ, ಯೆಮನ್ ದೇಶದ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿ ಬೆಂಬಲಿತ ಸೌದಿ-ಅರೇಬಿಯಾ ಕೂಟದ ದಿಗ್ಬಂಧನ – ಇವೆಲ್ಲ ಘಟನೆಗಳ ನೆನಪುಗಳು ಕ್ರೌರ್ಯಕ್ಕೆ ಸಾಕ್ಷಿಯಾಗಿ ಪದೇ ಪದೇ ಕಾಡುತ್ತವೆ. ಗಾಜ಼ಾ, ಸೂಡಾನ್, ಉಕ್ರೇನ್‌ನಲ್ಲಿ ವಿರೋಧಿಗಳನ್ನು ಸದೆಬಡೆಯಲು ಮತ್ತೆ ಹಸಿವನ್ನು ಅಸ್ತ್ರವನ್ನಾಗಿಸಿರುವುದು ದೊಡ್ಡ ಅಪಾಯದ ಸುಳಿವಾಗಿದೆ.

ಈ ತಂತ್ರವನ್ನು ತಡೆದು ಹಿಮ್ಮೆಟ್ಟಿಸದಿದ್ದಲ್ಲಿ ಜಗತ್ತು ತುಂಬಾ ಅಪಾಯಕಾರಿ ಪರಂಪರೆಗೆ ಸಾಕ್ಷಿಯಾಗುತ್ತದೆ. ಇದರಿಂದ, ಈಗಾಗಲೇ ಶಿಥಿಲವಾಗಿರುವ ಅಂತರರಾಷ್ಟ್ರೀಯ ಮಾನವೀಯತೆಯ ರೂಢಿಗಳನ್ನು ನಾಶಮಾಡಿ ಹಸಿವನ್ನು ನಿರ್ಭೀತಿಯಿಂದ ಒಂದು ಅಸ್ತ್ರವನ್ನಾಗಿಸಿಕೊಳ್ಳುವುದು, ವಿಶ್ವದ ಆಕ್ರಮಣಕಾರರಿಗೆ, ಅದರಲ್ಲೂ ವಿಶೇಷವಾಗಿ ಸಾಮ್ರಾಜ್ಯಶಾಹಿಗಳಿಗೆ, ಸಾಮಾನ್ಯ ಯುದ್ಧ ತಂತ್ರವಾಗುವ ಅಪಾಯವಿದೆ. ಜೊತೆಗೆ ಇದರಲ್ಲಿ ಪ್ರಪಂಚದಾದ್ಯಂತ ಜನರನ್ನು ಅಸೂಕ್ಷ್ಮಗೊಳಿಸುವ ಆತಂಕವೂ ಇದೆ. ಈ ಅಸೂಕ್ಷ್ಮತೆ ಬೆಳೆದು ಪ್ರತೀ ನಿರ್ಬಂಧ, ಪ್ರತೀ ಹೊಲದ ಧ್ವಂಸ, ಪ್ರತೀ ಖಾಲಿ ತಟ್ಟೆಯ ಹಿಂದಿರುವ ಮನುಷ್ಯನ ನೋವಿಗೆ ಪ್ರಪಂಚ ಸ್ಪಂದಿಸದೇ ಮರಗಟ್ಟಿಸುವಂತೆ ಮಾಡುತ್ತದೆ.

### ನೆರವಿನ ರಾಜಕಾರಣ

ಅಂತರರಾಷ್ಟ್ರೀಯ ಮಟ್ಟದ ಒತ್ತಡದಿಂದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಗಾಜ಼ಾಗೆ ಸೀಮಿತ ನೆರವು ನೀಡುವುದನ್ನು ಕೆಲವು ನಿಬಂಧನೆಗೊಳಪಟ್ಟು ಒಪ್ಪಿಕೊಂಡಿರುವುದು ಮಾನವೀಯವಾಗಿ ಕೊಡಬೇಕಾದ ಪರಿಹಾರದ ಹಿಂದಿರುವ ಸಿನಿಕತನದ ಲೆಕ್ಕಾಚಾರವೆಂಬಂತಿದೆ. ಅಂತರರಾಷ್ಟ್ರೀಯ ಕೂಗನ್ನು ಶಮನ ಮಾಡುವಷ್ಟು ನೆರವು ನೀಡುವ, ರಿಯಾಯಿತಿ ಕೊಡುವ ಭ್ರಮೆ ಹುಟ್ಟು ಹಾಕಿ, ಪರಿಹಾರ ನೀಡುವ ಸಂಸ್ಥೆಗಳಿಗೆ ನೆರವು ನೀಡುವ ವಿಶೇಷ ತಂಡಗಳ ಕಾರ್ಯ ವಿಳಂಬವಾಗುವಂತೆ ಮಾಡುವುದು, ನೆರವನ್ನು ಹಿಂಪಡೆಯುವುದು ಅಥವಾ ಅಸಾಧ್ಯ ಕಷ್ಟ ಸೃಷ್ಟಿಸಿ ಅವರ ಕೆಲಸಕ್ಕೆ ತಡೆಯೊಡ್ಡುವುದು ಇತ್ಯಾದಿ ಕ್ರಮಗಳ ಮೂಲಕ ಇಸ್ರೇಲ್ ತನ್ನ ದಮನಕಾರಿ ನಿಲುವನ್ನು ಉಳಿಸಿಕೊಂಡಿದೆ.

ಇದೇ ಮಾದರಿ ಸುಡಾನ್‌ನಲ್ಲೂ ಕಾಣ ಬರುತ್ತದೆ. ಅಮೆರಿಕಾ ಬೆಂಬಲಿತ ಎರಡೂ ಗುಂಪುಗಳು ಯುದ್ಧದಲ್ಲಿ ನೆರವಿನ ಹೆಸರಿನಲ್ಲಿ ಲಾಭ ಪಡೆದವು. ಉಕ್ರೇನ್‌ನಲ್ಲಿ ಸಹಾಯ ಮಾಡುವ ತಂಡಗಳನ್ನು ಛಿದ್ರಗೊಳಿಸುವುದರ ಮೂಲಕ ಲಕ್ಷಾಂತರ ಜನರನ್ನು ಸಂಕಷ್ಟಕ್ಕೆ ದೂಡಲಾಗಿದೆ. ‘ಮಾನವೀಯ ಸಹಾಯದ’ ರಾಜಕೀಕರಣವು ಪರಿಹಾರವನ್ನೂ ಆಯುಧವನ್ನಾಗಿಸಿದೆ. ಆ ಮೂಲಕ ಜನಸಮುದಾಯವನ್ನು ಅವಲಂಬನೆಯ ಬಲೆಯಲ್ಲಿ ಸಿಲುಕಿಸಿದ್ದು, ಇದು, ವಿಶ್ವ ಸಾಮ್ರಾಜ್ಯವಾದ-ಬಂಡವಾಳವಾದದ ಅಮಾನವೀಯ ಮುಖವನ್ನು ಬಯಲುಗೊಳಿಸಿದೆ.

### ಪ್ರತಿರೋಧಕ್ಕೆ ಕರೆ

ಯುದ್ಧ ಪಿಪಾಸುಗಳು ಹಸಿವೆಯನ್ನೂ ಯುದ್ಧತಂತ್ರವನ್ನಾಗಿಸುತ್ತಿರುವ ಕಟು ವಾಸ್ತವವನ್ನು ವಿಶ್ವ ಸಮುದಾಯವು ನೇರವಾಗಿ ಎದುರಿಸಬೇಕಿದೆ. ಅದಕ್ಕೆ ಸುಸಂಘಟಿತ-ಸುಸಜ್ಜಿತ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಯುತ ಚಳುವಳಿಯನ್ನು ಪ್ರಪಂಚದಾದ್ಯಂತ ಸಂಘಟಿಸಬೇಕಾಗಿದೆ. ಆಹಾರ ಸರಬರಾಜು ವ್ಯವಸ್ಥೆಯನ್ನು ನಾಶಮಾಡಿರುವುದನ್ನು ಮತ್ತು ನೆರವು ನೀಡುವುದನ್ನು ತಡೆಗಟ್ಟಿರುವ ಬಗ್ಗೆ ಸ್ವತಂತ್ರ ತನಿಖೆ ಅವಶ್ಯಕ ಮಾತ್ರವಲ್ಲ, ಜರೂರು ಸಹ. ಯುದ್ಧಾಪರಾಧಿಗಳನ್ನು ಮಟ್ಟ ಹಾಕಲು ಅವಶ್ಯಕವಾದ ಕಾನೂನು ಕ್ರಮಗಳು, ಕೇವಲ ಕಾಗದದ ಮೇಲೆ ಅಲ್ಲದೆ, ನಿರ್ದಿಷ್ಟವಾಗಿ ಜಾರಿಗೆ ಬರಬೇಕಾಗಿದೆ.

ಆದರೆ, ಹಸಿವನ್ನೇ ಅಸ್ತ್ರವನ್ನಾಗಿಸಿಕೊಂಡಿರುವವರ ವಿರುದ್ಧ ಕೇವಲ ಕಾನೂನಾತ್ಮಕ ಹೋರಾಟವಷ್ಟೇ ಸಾಕಾಗುವುದಿಲ್ಲ. ಜೊತೆಗೆ ನೈತಿಕತೆಯನ್ನೂ ಜಾಗೃತಿಗೊಳಿಸಬೇಕಾಗಿದೆ. ಗಾಜ಼ಾ, ಸೂಡಾನ್, ಉಕ್ರೇನ್‌ನಿಂದ ಕೇಳಿ ಬರುವುದು ಕೇವಲ ನೋವಿನ ಕತೆಗಳಷ್ಟೇ ಅಲ್ಲ; ಅವು, ಇಂತಹ ದೌರ್ಜನ್ಯಗಳಿಗೆ ಅನುವು ಮಾಡಿಕೊಡುತ್ತಿರುವ ವಿಶ್ವ ಸಾಮ್ರಾಜ್ಯಶಾಹಿ ವ್ಯವಸ್ಥೆ ಮೇಲಿನ ಆಪಾದನೆಗಳು ಕೂಡಾ. ಹಾಗಾಗಿ, ಈ ನೈತಿಕ ಜಾಗೃತಿಯು, ಸರಿಯಾದ ಕ್ರಾಂತಿಕಾರಿ ವಿಚಾರದ ಆಧಾರದ ಮೇಲೆ ಬಲಿಷ್ಠ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಹೊರಹೊಮ್ಮುವುದನ್ನು ಆಗ್ರಹಿಸುತ್ತದೆ.

### ನಮ್ಮ ಕಾಲದ ಪರೀಕ್ಷೆ

ಈ ಹಸಿವಿನ ಯುದ್ಧತಂತ್ರ ಬರೀ ಮಾನವೀಯತೆಯ ಬಿಕ್ಕಟ್ಟು ಮಾತ್ರವಲ್ಲ; ನಮ್ಮೆಲ್ಲರ ಸಾಮೂಹಿಕ ಆತ್ಮಸಾಕ್ಷಿಗೆ ಒಡ್ಡಿರುವ ಸವಾಲಾಗಿದೆ. ಇದನ್ನು ನಿರ್ಲಕ್ಷಿಸಿದರೆ, ಮೂಲಭೂತ ಮಾನವ ಹಕ್ಕುಗಳು ನಶಿಸಿಹೋಗುತ್ತಿರುವ ಪ್ರಪಂಚವನ್ನು ಮೂಕಪ್ರೇಕ್ಷಕರಾಗಿ ಒಪ್ಪಿಕೊಂಡಂತಾಗುತ್ತದೆ. ರಾಜಕೀಯ ದುರುಳರ ಸಂಚಿನಲ್ಲಿ ಅಶಕ್ತರು ಹಸಿವಿನಿಂದ ಬಳಲಲು ಬಿಟ್ಟಂತಾಗುತ್ತದೆ.

ಅಂಕಿ-ಅಂಶಗಳು ದಿಗ್ಭ್ರಮೆ ಹುಟ್ಟಿಸುವಂತಿವೆ, ಮನುಷ್ಯನ ಜೀವಕ್ಕೆ ಬೆಲೆ ಇಲ್ಲದಂತಾಗಿದೆ. ಪ್ರತಿ ಅಂಕಿಅಂಶದ ಹಿಂದೆ ಒಬ್ಬ ತಾಯಿ, ಒಂದು ಮಗು, ಒಂದು ಸಮುದಾಯ ನ್ಯಾಯಕ್ಕಾಗಿ ಆಗ್ರಹಿಸುತ್ತಿದ್ದಾರೆ. ಈ ಬಿಕ್ಕಟ್ಟನ್ನು ಎದುರಿಸುವುದು ಕೇವಲ ಜೀವಗಳನ್ನು ಉಳಿಸುವುದಕ್ಕಾಗಿ ಮಾತ್ರವಲ್ಲ, ಅದು ಮಾನವತೆಯನ್ನು ವ್ಯಾಖ್ಯಾನಿಸುವ ತತ್ವವನ್ನೇ ಮರುಸ್ಥಾಪಿಸುವುದಕ್ಕಾಗಿ ಕೂಡ ಅವಶ್ಯಕ. ಜಗತ್ತು ಇಂತಹ ಗಂಭೀರ ಪರಿಸ್ಥಿತಿ ಎದುರಿಸುತ್ತಿರುವಾಗ ನಿರ್ಲಿಪ್ತರಾಗಿ, ನಿಷ್ಕ್ರಿಯರಾಗಿರುವುದು ಆತ್ಮಘಾತುಕವಾದದ್ದು. ಗಾಜ಼ಾ, ಸೂಡಾನ್, ಉಕ್ರೇನ್‌ನ ಘಟನೆಗಳು ಬರೀ ಹೃದಯವಿದ್ರಾವಕ ಮಾತ್ರವಲ್ಲ, ಅವು ನಮ್ಮೆಲ್ಲರ ನ್ಯಾಯಪರತೆ ಮತ್ತು ಸಹಾನುಭೂತಿಯ ಸಾಮರ್ಥ್ಯವನ್ನು ಬಡಿದೆಬ್ಬಿಸುವ ನೆನಪಿನೋಲೆಯೂ ಕೂಡ. ಜೊತೆಗೆ ಈ ಕರಾಳ ಸಮಯದಲ್ಲಿ ಜಾಗೃತರಾಗಿ ನಮ್ಮ ಜವಾಬ್ದಾರಿಯನ್ನು ನಿರ್ವಹಿಸುವತ್ತ ಕಾರ್ಯಪ್ರವೃತ್ತರಾಗಲು ನೀಡುವ ಮನವಿಯೂ ಹೌದು.

---

### ಅಮೆರಿಕದ ಪ್ರಜಾಪ್ರಭುತ್ವದ ದುಸ್ಥಿತಿಯ ಪ್ರತೀಕ

2ನೇ ಪುಟದಿಂದ

ಸ್ಟಾರ್ಮಿ ಡೇನಿಯಲ್ಸ್ ಜೊತೆಗೆ 2006ರಲ್ಲಿ ಇದ್ದ ಲೈಂಗಿಕ ಸಂಬಂಧಕ್ಕೆ ಪರಿಹಾರವಾಗಿ ಸುಳ್ಳು ಬಿಲ್ ಮೂಲಕ 1,30,000 ಡಾಲರ್ ಮೊತ್ತ ನೀಡಿದ ಪ್ರಕರಣವೂ ಸೇರಿದೆ. ಇದು 4 ವರ್ಷಗಳ ಜೈಲು ಶಿಕ್ಷೆಯ ಪ್ರಕರಣ. ಅದೇ ರೀತಿ 2020ರ ಚುನಾವಣೆಯಲ್ಲಿ ಸೋತ ನಂತರ ಆತನ ನಡೆಯು ಮೂರು ಪ್ರಕರಣಗಳಿಗೆ ಕಾರಣವಾಯಿತು. ಸರ್ಕಾರದ ವರ್ಗೀಕೃತ ದಾಖಲೆಗಳನ್ನು ಇಟ್ಟುಕೊಂಡಿರುವುದು, ಅಮೆರಿಕಾದ ಪ್ರಜೆಗಳ ಹಕ್ಕುಗಳ ಹರಣ ಮತ್ತು ವಂಚನೆಯ ಸಂಚಿನ ಪ್ರಕರಣಗಳು, ಒಟ್ಟು ಗರಿಷ್ಠ 35 ವರ್ಷಗಳ ಜೈಲು ಮತ್ತು ದಂಡವನ್ನು ವಿಧಿಸಬಹುದಾದ ಅಪರಾಧಗಳು.

ಹೀಗೆ ಘೋರ ಪ್ರಕರಣದಲ್ಲಿ ಅಪರಾಧ ಸಾಬೀತಾದ ಅಮೆರಿಕಾದ ಮೊದಲ ಅಧ್ಯಕ್ಷ ಎಂಬ ಹೆಗ್ಗಳಿಕೆ ಟ್ರಂಪ್ ಅವರದ್ದು. ಹಿಂದೆ ಬಿಲ್ ಕ್ಲಿಂಟನ್ ಕೂಡ ಮೋನಿಕಾ ಲೆವಿನ್‌ಸ್ಕಿ ಲೈಂಗಿಕ ಹಗರಣದಲ್ಲಿ ಸಿಕ್ಕಿಬಿದ್ದರೂ, ಸೆನೆಟ್ ವಿಚಾರಣೆ ಅವರಿಗೆ ಮಾಫಿ ಮಾಡಿತ್ತು. ಆದರೆ ಇಂಥದೇ ಅಪರಾಧವನ್ನು ಅಮೆರಿಕಾದ ಸಾಮಾನ್ಯ ಪ್ರಜೆ ಮಾಡಿದಲ್ಲಿ ಆತ ಕಠಿಣ ಶಿಕ್ಷೆಗೆ ಗುರಿಯಾಗುತ್ತಾನೆ. ಟ್ರಂಪ್ ಅಧ್ಯಕ್ಷೀಯ ಸ್ಥಾನಕ್ಕೆ ಏರಲಿರುವ ಕಾರಣ ಸಡಿಲತೆ ತೋರಿಸಲಾಯಿತು ಎಂದು ಜಸ್ಟಿಸ್ ಮರ್ಕನ್ ಅವರು ಒಪ್ಪಿಕೊಳ್ಳಬೇಕಾಯಿತು. ಅಲ್ಲಿನ ಬಂಡವಾಳಶಾಹಿಯು ಏಕಸ್ವಾಮ್ಯ ಮತ್ತು ಸಾಮ್ರಾಜ್ಯಶಾಹಿಯ ಹಂತವನ್ನು ತಲುಪಿ ಸಂಪೂರ್ಣವಾಗಿ ಪ್ರತಿಗಾಮಿ ಆಗಿರುವಾಗ, ಒಬ್ಬ ಕೈಗಾರಿಕಾ ದೊರೆ, ತೆರಿಗೆ ವಂಚನೆ ಮತ್ತು ಪ್ರಶ್ನಾರ್ಹ ಚಾರಿತ್ರ್ಯವುಳ್ಳ ವ್ಯಕ್ತಿ ಈಗ ಅಮೆರಿಕಾದ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ!

### ಉದ್ಯಮಿಗಳ ಜೇಬು ತುಂಬಿಸಲು

# ಗ್ಯಾಸ್ ಚೇಂಬರ್‌ನಂತಾದ ದೆಹಲಿ!

ಚಳಿಗಾಲ ಸಮೀಪಿಸುತ್ತಿದ್ದಂತೆಯೇ ರಾಷ್ಟ್ರದ ರಾಜಧಾನಿ ದೆಹಲಿ ನಗರ, ವಿಪರೀತ ವಾಯುಮಾಲಿನ್ಯದಿಂದಾಗಿ ಗ್ಯಾಸ್ ಚೇಂಬರ್‌ನಂತಾಗುತ್ತಿದ್ದು, ಅಲ್ಲಿನ ಕೋಟ್ಯಂತರ ಜನಜೀವನದ ಮೇಲೆ ಭಾರಿ ಪರಿಣಾಮ ಬೀರುತ್ತಿದೆ. ಈ ಬಾರಿಯ ನವೆಂಬರ್ ತಿಂಗಳೂ ಇದಕ್ಕೆ ಹೊರತಾಗಿರಲಿಲ್ಲ. ಉಸಿರಾಡುವುದೇ ಕಷ್ಟಕರವಾಗಿತ್ತು. ಕೆಟ್ಟ ವಾತಾವರಣದಿಂದಾಗಿ ಕಣ್ಣುಗಳು ಉರಿಯುತ್ತಿದ್ದವು. ಗಂಟಲು ಒಣಗಿ ಹೋಗುತ್ತಿತ್ತು. ಬೆಳಿಗ್ಗಿನಿಂದಲೇ ದೆಹಲಿಯ ವಾತಾವರಣದಲ್ಲಿ ದಟ್ಟವಾದ ಹೊದಿಕೆಯಂತಹ ಹೊಂಜು ಆವರಿಸಿಕೊಂಡಿದ್ದು, ಮಧ್ಯಾಹ್ನದ ಹೊತ್ತಿನಲ್ಲಿಯೂ ಕೆಲವೇ ಮೀಟರ್ ದೂರವೂ ಕಾಣಿಸದಂತಾಗಿತ್ತು. ಇದರಿಂದಾಗಿ ಹಲವು ರೈಲುಗಳು ಮತ್ತು ವಿಮಾನಗಳ ಸೇವೆಯಲ್ಲಿ ವ್ಯತ್ಯಯವಾಗಿತ್ತು. ಈ ಅವಧಿಯಲ್ಲಿ ನವದೆಹಲಿಯಿಂದ ಆನಂದ ವಿಹಾರ್ ಮಧ್ಯೆ ಸಂಚರಿಸುತ್ತಿದ್ದ ಕನಿಷ್ಠ 28 ರೈಲುಗಳು 2ರಿಂದ 9 ಗಂಟೆ ತಡವಾಗಿ ಸಂಚರಿಸಿದ್ದವು.

#### ಮಾಲಿನ್ಯದ ಮಟ್ಟ ನಿಗದಿಗಿಂತ 17 ಪಟ್ಟು ಹೆಚ್ಚಳ

ಜರ್ಮನಿಯಲ್ಲಿ ಹಿಟ್ಲರ್, ಗೋರಿಂಗ್, ಗೊಬ್ಬೆಲ್ಸ್‌ಗಳು ಯಹೂದಿಗಳನ್ನು ಯಾತನಾ ಶಿಬಿರಗಳಲ್ಲಿನ ಗ್ಯಾಸ್ ಚೇಂಬರ್‌ಗಳಲ್ಲಿ ಬಂಧಿಸಿ ವಿಷಾನಿಲ ಬಿಡುಗಡೆ ಮಾಡಿ ಸಾಯಿಸಿದ್ದರು. ಆದರೆ, ದೆಹಲಿಯ ಗ್ಯಾಸ್ ಚೇಂಬರ್‌ಗಳ ಬಾಗಿಲ ಬಳಿ ಇವರಿಲ್ಲದಿದ್ದರೂ, ಇಲ್ಲಿನ ವಾಯುಮಾಲಿನ್ಯ ಜನರಲ್ಲಿ ಅಕ್ಷರಶಃ ಅಂತಹ ಭಾವನೆಯನ್ನೇ ತಂದಿದೆ. ವಿಷಗಾಳಿಯು ಜನರ ಶ್ವಾಸಕೋಶವನ್ನು ಹೊಕ್ಕು ಹಾಳು ಮಾಡುತ್ತದೆ. ಇದರಿಂದಾಗಿ ಜನರ ಆಯುಷ್ಯ ಕ್ಷೀಣಿಸುತ್ತದೆ. 50ರ ಒಳಗಿರಬೇಕಾದ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ), 151ರಿಂದ 200 ಇರುವುದೇ ಅನಾರೋಗ್ಯಕಾರಕ ಎಂದಿರುವಾಗ, ದೆಹಲಿಯಲ್ಲಿ 400 ರಷ್ಟಿದ್ದಿರುವುದು ಭವಿಷ್ಯದ ದಿನಗಳಲ್ಲಿ ಜನಜೀವನದ ಮೇಲೆ ತೀವ್ರ ಪರಿಣಾಮ ಮೂಡಿಸುತ್ತದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಸ್ವಿಸ್ ಏರ್ ಟೆಕ್ನಾಲಜಿ ಕಂಪನಿ ಎಕ್ಯೂಐನ ಮಾಪನಗಳ ಪ್ರಕಾರ ದೆಹಲಿಯ ವಿವಿಧೆಡೆ ಎಕ್ಯೂಐ ಮಟ್ಟವು 800ರಿಂದ 1100ರಷ್ಟಿದೆ. ಇದನ್ನು ತೀವ್ರ ಅಪಾಯಕಾರಿ ವಲಯ ಎಂದು ಪರಿಗಣಿಸಲಾಗಿದೆ. ಆನಂದ ವಿಹಾರ, ದ್ವಾರಕಾ ಸೆಕ್ಟರ್ 8, ವಸಂತ ವಿಹಾರ ಬ್ಲಾಕ್ ಸಿ ಭಾಗದಲ್ಲಿ ಕ್ರಮವಾಗಿ 1105, 1057 ಹಾಗೂ 1041 ದಾಖಲಾಗಿದ್ದು, ಇದು ಅತಿ ವಿಷಗಾಳಿ ಹೊಮ್ಮುವ ವಲಯವಾಗಿದೆ. ಚಳಿಗಾಲದ ಒಂದು ಸಂಜೆ ವಾಯು ಗುಣಮಟ್ಟ ಸೂಚ್ಯಂಕವು ಸಾರ್ವಕಾಲಿಕ ದಾಖಲೆಯಾದ 1700 ತಲುಪಿತ್ತು. ಇದು ಸಾಮಾನ್ಯ ಸ್ಥಿತಿಗಿಂತ 17 ಪಟ್ಟು ಹೆಚ್ಚಾಗಿದೆ ಎಂದು ಪರಿಸರ ತಜ್ಞರು ಅಂದಾಜು ಮಾಡಿದ್ದಾರೆ. ನವೆಂಬರ್ 18ರಂದು ದೆಹಲಿಯ ವಾಯುಮಾಲಿನ್ಯ ಎಲ್ಲ ಹಂತಗಳನ್ನೂ ದಾಟಿ ಹೋಗುವ ಮೂಲಕ ಅತ್ಯಂತ ಅಪಾಯಕಾರಿ ಕ್ಷಣಗಳನ್ನು ತಂದೊಡ್ಡಿತ್ತು.

ತೀವ್ರ ಚಳಿಗಾಲದ ದಿನಗಳಲ್ಲಿ ತಿಂಗಳುಗಟ್ಟಲೇ ಇಷ್ಟೊಂದು ಮಾಲಿನ್ಯಕರ ಮಂಜು ಕವಿದಿರುವುದರಿಂದ ಮೂರು ಕೋಟಿ ಜನಸಂಖ್ಯೆ ಹೊಂದಿರುವ ನಗರದ ಜನತೆಯಲ್ಲಿ ನರಮಂಡಲಕ್ಕೆ ಹಾನಿಯಾಗುವ, ಹೃದಯ ಸಂಬಂಧಿ ಸಮಸ್ಯೆಗಳಾಗುವ, ಶ್ವಾಸಕೋಶಕ್ಕೆ ಹಾನಿಯಾಗುವ ಅಥವಾ ಕ್ಯಾನ್ಸರ್ ತಗಲುವ ಎಲ್ಲ ಸಾಧ್ಯತೆಯೂ ಇದೆ. ಅಲ್ಲದೇ, ಈಗಾಗಲೇ ಸಾಮಾಜಿಕವಾಗಿ ಅಸಮಾನತೆ ಹೆಚ್ಚಿರುವ ಸಮಾಜದಲ್ಲಿ ಈ ಬಗೆಯ ಆರೋಗ್ಯ ಸಮಸ್ಯೆಗಳು ಇನ್ನಷ್ಟು ಸಂಕಷ್ಟವನ್ನುಂಟು ಮಾಡುತ್ತವೆ.

ನೆರೆ ರಾಜ್ಯ ಹರಿಯಾಣದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಅಲ್ಲಿ ಎಕ್ಯೂಐ ಮಟ್ಟ 631 ಇದೆ. ಅಂದರೆ ಒಂದು ದಿನಕ್ಕೆ 33.25 ಸಿಗರೇಟ್ ಸೇದಿದಾಗ ಏನು ಸಮಸ್ಯೆಯಾಗುತ್ತದೋ ಅಷ್ಟು.

ವಾಯುಮಾಲಿನ್ಯ ತಡೆಗಟ್ಟಲು ಹಿಂದಿನ ವರ್ಷಗಳಲ್ಲಿ ತೆಗೆದುಕೊಂಡ ಕ್ರಮಗಳನ್ನು ನೆನಪಿಸಿಕೊಳ್ಳುವುದಾದರೆ, 2019ರಲ್ಲಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಯು ದೆಹಲಿಯಲ್ಲಿ ವಾಯುಮಾಲಿನ್ಯ ತಡೆಯಲು ಅಗತ್ಯವಾದ ಕ್ರಮಗಳ ಬಗ್ಗೆ ನೀತಿಯೊಂದನ್ನು ರೂಪಿಸಿತ್ತು. ವಾಹನಗಳು ಉಗುಳುವ ಹೊಗೆಯನ್ನು ತಡೆಗಟ್ಟಬೇಕು ಮತ್ತು ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಹೊರಡುವ ದೂಳನ್ನು ನಿಯಂತ್ರಿಸಬೇಕು. ಇಲ್ಲದಿದ್ದರೆ ಇದಕ್ಕೆ ಸಂಬಂಧಿಸಿದ ಇಲಾಖೆಗಳನ್ನೇ ಹೊಣೆ ಮಾಡುವುದಾಗಿ ಎಚ್ಚರಿಕೆ ನೀಡಿತ್ತು. ಇಷ್ಟಾಗಿಯೂ ವಾಯುಮಾಲಿನ್ಯ ನಿಯಂತ್ರಣಕ್ಕೆ ಬರುವ ಯಾವುದೇ ಸೂಚನೆಗಳು ಕಂಡು ಬಂದಿಲ್ಲ. 2019ರಲ್ಲಿ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯವು ನವದೆಹಲಿಯು ಗ್ಯಾಸ್ ಚೇಂಬರ್‌ನಂತೆ ಆಗಿರುವುದರಿಂದ ಇಲ್ಲಿ ವಾಸಿಸುವುದು ಅಪಾಯಕಾರಿ ಎಂದು ಹೇಳಿಕೆ ನೀಡಿತ್ತು. ಆ ಸಂದರ್ಭದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡಗಳಿಗಿಂತ ವಾಯುಮಾಲಿನ್ಯವು ದೆಹಲಿಯಲ್ಲಿ 20 ಪಟ್ಟು ಅಧಿಕವಾಗಿತ್ತು.

ನ್ಯಾಯಾಲಯದ ತಪರಾಕಿಗೆ ಮಣಿದ ದೆಹಲಿ ಸರ್ಕಾರ ಕೆಲ ದಿನಗಳವರೆಗೆ ಶಾಲೆಗಳಿಗೆ ರಜೆ ಘೋಷಿಸಿತು. ನಗರದಲ್ಲಿ 10 ಹಾಗೂ 12ನೇ ತರಗತಿಗಳನ್ನು ಹೊರತುಪಡಿಸಿ ಉಳಿದ ತರಗತಿಗಳ ವಿದ್ಯಾರ್ಥಿಗಳು ಶಾಲೆಗೆ ಬರುವ ಬದಲು ಮನೆಯಲ್ಲಿಯೇ ಕುಳಿತು ಆನ್‌ಲೈನ್ ತರಗತಿಗಳಲ್ಲಿ ಭಾಗವಹಿಸುವಂತೆ ತಿಳಿಸಲಾಯಿತು. ಶೇ 50ರಷ್ಟು ಸರ್ಕಾರಿ ನೌಕರರಿಗೆ ಮನೆಯಿಂದಲೇ ಕೆಲಸ ಮಾಡುವಂತೆ ಸೂಚಿಸಲಾಯಿತು. ಎಲ್ಲ ಬಗೆಯ ಕಟ್ಟಡ ಕಾಮಗಾರಿಗಳು, ನೆಲ ಅಗೆಯುವುದು, ಉತ್ಖನನದಂತಹ ಕೆಲಸಗಳಿಗೂ ತಡೆ ನೀಡಿತು. ಸಂಚಾರದಿಂದ ಉಂಟಾಗುವ ಮಾಲಿನ್ಯವನ್ನು ತಡೆಯಲು ಡೀಸೆಲ್ ಚಾಲಿತ ಕಾರುಗಳನ್ನು ರಸ್ತೆಗಿಳಿಸುವಂತಿಲ್ಲ ಎಂದು ಆದೇಶ ಹೊರಡಿಸಿತು. ತುರ್ತು ಸಂದರ್ಭಗಳನ್ನು ಹೊರತುಪಡಿಸಿ ಉಳಿದ ವಸ್ತುಗಳನ್ನು ಹೊಂದಿದ್ದ ಲಾರಿಗಳಿಗೆ ನಗರ ಪ್ರವೇಶವನ್ನು ನಿರಾಕರಿಸಲಾಯಿತು. ಇದೀಗ ಬಹುತೇಕ ಸರ್ಕಾರಿ ಬಸ್‌ಗಳು, ಆಟೊಗಳು ಹಾಗೂ ಕಾರುಗಳು ಸಿಎನ್‌ಜಿ ಇಂಧನದ ಮೇಲೆ ನಡೆಯುತ್ತಿವೆ. ಉಳಿದ ಕಾರುಗಳು ಪೆಟ್ರೋಲ್ ಮೇಲೆ ನಡೆಯುತ್ತಿವೆ. ನಗರದ ಎಲ್ಲೆಡೆಯೂ ಮೆಟ್ರೊ ರೈಲು ಸಂಪರ್ಕವಿದೆ. ಪಟಾಕಿ ಸಿಡಿಸುವುದನ್ನೂ ಅಧಿಕೃತವಾಗಿ ನಿಷೇಧಿಸಲಾಗಿದೆ.

ಇವೆಲ್ಲದರಿಂದಲೂ ಹೇಳಿಕೊಳ್ಳುವಷ್ಟು ಸುಧಾರಣೆಯಾಗಲಿಲ್ಲ. ಆದರೆ, ದಿನಗೂಲಿ ಕೆಲಸಗಾರರು, ಅಂಗಡಿ ಮಾಲೀಕರು, ಕಚೇರಿ ಸಿಬ್ಬಂದಿ, ತುರ್ತು ಸೇವೆಗಳ ಸಿಬ್ಬಂದಿ, ಸಂಚಾರ ಠಾಣೆ ಪೊಲೀಸರು ವಾಯುಮಾಲಿನ್ಯವನ್ನು ಅನುಭವಿಸಬೇಕಾಯಿತು. ಇದನ್ನು ಬಗೆಹರಿಸಲು ದೆಹಲಿ ಸರ್ಕಾರ ವಿಫಲವಾಗಿದೆ ಎಂದು ಅಲ್ಲಿನ ನಿವಾಸಿಗಳೇ ತೀವ್ರವಾಗಿ ಟೀಕಿಸಿದರು.

ಇದರ ಮಧ್ಯೆ ಈ ಸಮಸ್ಯೆಯ ಕುರಿತು ಗಂಭೀರ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಬದಲು ಕೇಂದ್ರದ ಬಿಜೆಪಿ ಸರ್ಕಾರ ಹಾಗೂ ಅಂದಿನ ದೆಹಲಿಯ ಆಡಳಿತಾರೂಢ ಆಮ್ ಆದ್ಮಿ ಪಕ್ಷಗಳು ಪರಸ್ಪರ ದೋಷಾರೋಪದಲ್ಲಿ ನಿರತವಾದವು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ದೆಹಲಿಯಲ್ಲಿನ ಕಾನೂನು ಸುವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದು, ಅದನ್ನು ದೆಹಲಿ ಸರ್ಕಾರದ ಸುಪರ್ದಿಗೆ ಒಪ್ಪಿಸಲು ತಯಾರಿರಲಿಲ್ಲ. ಕಳೆದ ಮೂರು ಅವಧಿಯಿಂದ ದೆಹಲಿ ರಾಜ್ಯದ ಚುಕ್ಕಾಣಿ ಹಿಡಿದಿದ್ದ ಆಪ್ ಪಕ್ಷವು ಸಾರಿಗೆ ಮತ್ತು ಕೈಗಾರಿಕೆ, ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಗಳನ್ನು ತನ್ನ ಕೈಯಲ್ಲಿಟ್ಟುಕೊಂಡರೂ ಯಾವುದೇ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ, ಆಪ್ ಪಕ್ಷದ ಸರ್ಕಾರ ಸಕಾಲಕ್ಕೆ ತುರ್ತು ಕ್ರಮಗಳನ್ನು ಕೈಗೊಳ್ಳದಿರುವುದು ಸಮಸ್ಯೆಗೆ ಕಾರಣ ಎಂದರು.

ಪಂಜಾಬ್ ಮತ್ತು ಹರಿಯಾಣಗಳಲ್ಲಿ ಕಬ್ಬಿನ ಕೂಳೆ ಸುಡುವುದರಿಂದ ಅದರ ದಟ್ಟ ಹೊಗೆ ದೆಹಲಿಯಲ್ಲಿ ವಿಷಾನಿಲವಾಗುತ್ತದೆ ಎಂಬ ಆರೋಪ ಕೇಳಿ ಬಂದಿತ್ತು. ಆದರೆ, ಆ ಬಗ್ಗೆ ವರದಿಗಳು ಬಂದಾಗ ಅದೇ ಕಾರಣಕ್ಕೇ ಇಷ್ಟೊಂದು ಮಾಲಿನ್ಯ ಆಗುತ್ತಿದೆ ಎಂಬ ಮಾತನ್ನು ಯಾರೂ ಒಪ್ಪಿಕೊಳ್ಳಲು ಸಿದ್ಧರಿಲ್ಲ. ದೆಹಲಿಯ ಪ್ರಮುಖ ಪ್ರದೇಶಗಳಲ್ಲಿ ಅತಿಯಾದ ಕೈಗಾರಿಕಾ ಚಟುವಟಿಕೆಗಳು ನಿರಂತರವಾಗಿ ನಡೆಯುವುದೇ ಇದಕ್ಕೆ ಕಾರಣ ಎಂಬ ಆರೋಪ ಕೇಳಿ ಬಂತು. ಅವುಗಳ ಚಿಮಣಿಯಿಂದ ಸಾಕಷ್ಟು ಪ್ರಮಾಣದ ಹೊಗೆ ಬಂದು ವಾತಾವರಣ ಇನ್ನಷ್ಟು ಹದಗೆಟ್ಟಿದೆ. ಅದರಲ್ಲೂ ಮುಂಡಕಾ ಇಂಡಸ್ಟ್ರಿಯಲ್ ಏರಿಯಾ, ನಂಗ್ಲೊಯ್ ಮತ್ತು ದ್ವಾರಕಾದಲ್ಲಿ ಹೆಚ್ಚಿನ ಪ್ರಮಾಣದ ಕಾರ್ಖಾನೆಗಳಿವೆ. ಕೈಗಾರಿಕೆಗಳು ಉಗುಳುವ ತ್ಯಾಜ್ಯ ಹಾಗೂ ಹವಾಮಾನ ವೈಪರೀತ್ಯ ಮಾಲಿನ್ಯಕ್ಕೆ ಕಾರಣವಾಗಿವೆ. ಆದರೆ, ಸರ್ಕಾರಗಳಿಗೆ ಜನಸಾಮಾನ್ಯರ ಆರೋಗ್ಯ ಮುಖ್ಯವೋ ಅಥವಾ ಬಂಡವಾಳಶಾಹಿಗಳ ಲಾಭವನ್ನು ದುಪ್ಪಟ್ಟು ಮಾಡುವುದು ಮುಖ್ಯವೋ ಎಂಬ ಪ್ರಶ್ನೆ ಸುಚಿಂತಕರನ್ನು ಕಾಡುತ್ತಿದೆ.

**ಪರಿಹಾರೋಪಾಯಗಳು:**

1. ಕೈಗಾರಿಕಾ ಸಂಸ್ಥೆಗಳಲ್ಲಿ ಶುದ್ಧೀಕರಣ ಸಾಧನಗಳ ಅಳವಡಿಕೆ
2. ಕಲ್ಲಿದ್ದಲು ಆಧಾರಿತ ಥರ್ಮಲ್ ಕೈಗಾರಿಕೆಗಳ ಬದಲಿಗೆ ವಿದ್ಯುತ್ ಬಳಕೆ
3. ತಾಜ್ಯ ವಿಲೇವಾರಿಗೆ ವೈಜ್ಞಾನಿಕ ಕ್ರಮಗಳು.
4. ಕೂಳೆ ಸುಡಲು ನಿರ್ಬಂಧ, ಇತ್ಯಾದಿ

# ಮೈಕ್ರೋ ಫೈನಾನ್ಸ್ ಮತ್ತು ಖಾಸಗಿ ಹಣಕಾಸು ಸಂಸ್ಥೆಗಳ ಹಾವಳಿಗೆ ಕಡಿವಾಣ ಹಾಕಿ!

## ಎಸ್‌ಯುಸಿಐ(ಸಿ) ಒತ್ತಾಯ

**ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕಾ. ಕೆ. ಉಮಾ ನೀಡಿರುವ ಹೇಳಿಕೆ:**

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಮತ್ತು ಖಾಸಗಿ ಹಣಕಾಸು ಸಂಸ್ಥೆಗಳ ಹಾವಳಿ ದಿನೇ ದಿನೇ ಹೆಚ್ಚಾಗುತ್ತಿದೆ. ಈ ಸಂಸ್ಥೆಗಳ ಸಾಲ ವಸೂಲಿಗಾರರ ಕಿರುಕುಳವನ್ನು ತಾಳಲಾರದೇ ಚಾಮರಾಜನಗರ, ಮೈಸೂರು, ಹಾವೇರಿ, ಬೆಳಗಾವಿ, ಹೀಗೆ ಅನೇಕ ಜಿಲ್ಲೆಗಳ ಹತ್ತಾರು ಗ್ರಾಮಗಳ ನೂರಾರು ಮಂದಿ ಮನೆ–ಮಠ, ಜಮೀನುಗಳನ್ನು ತೊರೆದು 'ನಾಪತ್ತೆಯಾಗಿದ್ದಾರೆ'. ಅಲ್ಲದೇ, ಇತ್ತೀಚೆಗಷ್ಟೇ, ರಾಮನಗರದಲ್ಲಿ ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ ಐದಾರು ತಿಂಗಳುಗಳ ಅವಧಿಯಲ್ಲಿ ಇದೇ ರೀತಿ ಆತ್ಮಹತ್ಯೆ, ಕಿರುಕುಳದಂತಹ ಹಲವಾರು ಪ್ರಕರಣಗಳು ವರದಿಯಾಗುತ್ತಿರುವುದು ಈ ಸಮಸ್ಯೆಯ ಗಂಭೀರತೆಗೆ ಹಿಡಿದ ಕೈಗನ್ನಡಿಯಾಗಿದೆ.

ನಿರಂತರವಾಗಿ ಹೆಚ್ಚಾಗುತ್ತಿರುವ ಕೃಷಿ ಕ್ಷೇತ್ರದ ಬಿಕ್ಕಟ್ಟು, ಬೆಲೆ ಏರಿಕೆ, ನಿರುದ್ಯೋಗ, ಆರೋಗ್ಯ, ಶಿಕ್ಷಣದಂತಹ ಕ್ಷೇತ್ರಗಳ ಖಾಸಗೀಕರಣಗಳಿಂದಾಗಿ ಬಡ ಮತ್ತು ಮಧ್ಯಮ ವರ್ಗದ ಜನತೆ ಇಂದು ಸಂಕಷ್ಟಕ್ಕೀಡಾಗಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯು ಜನರಲ್ಲಿ ಕೊಳ್ಳುವ ಶಕ್ತಿಯನ್ನು ಬೆಳೆಸಲು ಅಸಾಧ್ಯವಾದ ಕಾರಣ, ಹೆಚ್ಚೆಚ್ಚು ಸಾಲ ನೀಡುವ ಮೂಲಕ ಬೇಡಿಕೆಯನ್ನು ಸೃಷ್ಟಿಸಲು ಇಂದು ಬ್ಯಾಂಕುಗಳು ಮುಂದಾಗಿವೆ. ಹಾಗಾಗಿ ಒಟ್ಟಾರೆ ಆರ್ಥಿಕತೆಯೇ ಇಂದು ಸಾಲಾಧಾರಿತವಾಗಿದೆ. ಆದರೆ, ಬ್ಯಾಂಕುಗಳ ನಿಯಮಗಳು, ಅಡಮಾನ, ಇವುಗಳ ಕಾರಣದಿಂದ ಬಡ ಜನರಿಗೆ ಸಾಲ ದೊರೆಯುವುದು ಕಷ್ಟಸಾಧ್ಯವಾದ ಕಾರಣ ಅವರು ಮೈಕ್ರೋ ಫೈನಾನ್ಸ್ ಮತ್ತು ಖಾಸಗಿ ಹಣಕಾಸು ಸಂಸ್ಥೆಗಳ ಮೊರೆ ಹೋಗುತ್ತಾರೆ. ಅವುಗಳ ದುಬಾರಿ ಬಡ್ಡಿ ಒಪ್ಪಿಕೊಂಡು ಸಾಲ ಮಾಡುತ್ತಾರೆ.

ಆದರೆ, ಸಾಲ ಪಡೆದವರು ಮರುಪಾವತಿ ಮಾಡಲಾರದೆ ವಿಫಲವಾದ ಸಂದರ್ಭದಲ್ಲಿ, ಈ ಕಂಪನಿಗಳ ಗೂಂಡಾಗಳು ಅವರ ಮನೆ ಮುಂದೆ ನಿಲ್ಲುವುದು, ಅವಾಚ್ಯವಾಗಿ ನಿಂದಿಸುವುದು, ಮನೆಗಳ ಮೇಲೆ ಬರೆಯುವುದು, ಅಳಿದುಳಿದ ಆಸ್ತಿಯನ್ನು ಮುಟ್ಟುಗೋಲು ಹಾಕುವುದು ಇತ್ಯಾದಿ ವಿಧಾನಗಳನ್ನು ಅನುಸರಿಸುತ್ತಾರೆ. ಇದರಿಂದ ಸಾಲ ಪಡೆದವರ ಮಾನ ಹರಾಜಾಗುತ್ತಿದ್ದು ತತ್ಪರಿಣಾಮವಾಗಿ ನಾಪತ್ತೆ, ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ.

ಮೈಕ್ರೋ ಫೈನಾನ್ಸ್‌ಗಳ ನಿಯಂತ್ರಣಕ್ಕೆ ಸ್ಪಷ್ಟವಾದ ಮಾರ್ಗಸೂಚಿ ಮತ್ತು ಸಮನ್ವಯದ ಕೊರತೆಯೇ ಅವುಗಳ ಲಾಭಕೋರತನ ಮತ್ತು ಹಾವಳಿ ಹೆಚ್ಚಾಗಲು ಮುಖ್ಯ ಕಾರಣವಾಗಿದೆ. ಈ ಸಂಸ್ಥೆಗಳು ಎಲ್ಲೆಂದರಲ್ಲಿ ನಾಯಿಕೊಡೆಗಳಂತೆ ತಲೆ ಎತ್ತುತ್ತಾ, ಜನತೆಯ ಸಂಕಷ್ಟದ ಪರಿಸ್ಥಿತಿಯನ್ನೇ ಬಳಸಿಕೊಂಡು ಅವರನ್ನು ಶೋಷಿಸಲು ನಿಂತಿವೆ.

ಹೀಗಾಗಿ ಈ ಕೂಡಲೇ ಸರ್ಕಾರಗಳು ಮಧ್ಯ ಪ್ರವೇಶಿಸಿ ಈ ಸಂಸ್ಥೆಗಳಿಗೆ ಮೂಗುದಾರ ಹಾಕುವ ಮೂಲಕ ಜನರನ್ನು ಇವುಗಳ ಕಿರುಕುಳದಿಂದ ರಕ್ಷಿಸಬೇಕೆಂದು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಒತ್ತಾಯಿಸುತ್ತದೆ.

#### ನಮ್ಮ ಒತ್ತಾಯಗಳು

1. ಸಾಲ ವಸೂಲಾತಿಗೆ ಮನೆಗೆ ಬಂದು ಕಿರುಕುಳ ಕೊಡುವುದನ್ನು ತಕ್ಷಣವೇ ತಡೆಗಟ್ಟಿ.
2. ದುಬಾರಿ, ಮಿತಿಮೀರಿದ ಬಡ್ಡಿ ವಿಧಿಸುವ ಕಂಪನಿಗಳನ್ನು ಪತ್ತೆಹಚ್ಚಿ ಶಿಕ್ಷೆ ನೀಡಿ.
3. ಮೈಕ್ರೋ ಫೈನಾನ್ಸ್‌ಗಳ ವ್ಯವಹಾರದ ನಿಯಂತ್ರಣಕ್ಕೆ ಸೂಕ್ತ ಕಾಯಿದೆ ರೂಪಿಸಿ.
4. ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಸಹಕಾರಿ ಸಂಸ್ಥೆಗಳಿಂದ ಬಡ–ಮಧ್ಯಮ ವರ್ಗದವರು ಸಾಲ ಪಡೆಯಲು ಸಾಧ್ಯವಾಗುವಂತೆ ನಿಯಮಗಳನ್ನು ಸರಳೀಕೃತಗೊಳಿಸಿ.
5. ಕೃಷಿ, ಆರೋಗ್ಯ, ಶಿಕ್ಷಣ, ವಸತಿ ಮುಂತಾದ ಕ್ಷೇತ್ರಗಳಿಗೆ ಹೆಚ್ಚು ಹಣವನ್ನು ಮೀಸಲಿಡಿ.
6. ಇಂದಿನ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ನರೇಗಾ ಕೂಲಿ ಹೆಚ್ಚಿಸಿ, ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿ, ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಸಿ, ಪರೋಕ್ಷ ತೆರಿಗೆ ಇಳಿಸಿ, ಜನಸಾಮಾನ್ಯರು ಬೇಕಾಬಿಟ್ಟಿ ಸಾಲಕ್ಕೆ ಮೊರೆಹೋಗದಂತಾಗಲು ತುರ್ತು ಕ್ರಮ ಕೈಗೊಳ್ಳಿ.

# ಜಾಗತಿಕ ಹೂಡಿಕೆದಾರರ ಸಮಾವೇಶ 2025 – ರಾಜ್ಯದ ಅಭಿವೃದ್ಧಿಯ ಹೆಬ್ಬಾಗಿಲು ತೆರೆದಿತೇ?

**ಪ್ರಸ್ತಾವನೆ**

ಇದೇ ಫೆಬ್ರವರಿ 12ರಿಂದ 14ರ ವರೆಗೆ ಬೆಂಗಳೂರಿನಲ್ಲಿ ಅಬ್ಬರದ ಪ್ರಚಾರದೊಂದಿಗೆ ಜಾಗತಿಕ ಹೂಡಿಕೆದಾರರ ಸಮಾವೇಶ(ಜಿಐಎಂ) ನಡೆಯಿತು. ಬಹುತೇಕ ಎಲ್ಲ ಪತ್ರಿಕೆಗಳಲ್ಲಿ ಮತ್ತು ಟಿವಿಗಳಲ್ಲಿ ಇದರ ಜಾಹೀರಾತುಗಳು ರಾರಾಜಿಸಿದವು. ದೇಶ ವಿದೇಶಗಳ ಕಾರ್ಪೊರೇಟ್ ಕುಳಗಳು, ಕೇಂದ್ರ-ರಾಜ್ಯ ಸರ್ಕಾರಗಳ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಹೂಡಿಕೆ, ಉದ್ಯೋಗ ಸೃಷ್ಟಿ, ಅಭಿವೃದ್ಧಿಗಳ ಕುರಿತು ಮುಂಖಾನುಮುಂಖಿಯಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಮುಂದಿನ 5 ವರ್ಷಗಳಿಗೆ ರಾಜ್ಯದ ಕೈಗಾರಿಕಾ ನೀತಿಯನ್ನು ಕೂಡ ಬಿಡುಗಡೆ ಮಾಡಲಾಗಿದೆ. 2 ವರ್ಷಕ್ಕೊಮ್ಮೆ ನಡೆಯುವ ಈ ಬಂಡವಾಳಶಾಹಿಗಳ ಜಾತ್ರೆಗೆ ಈ ಬಾರಿ ರೂ. 75 ಕೋಟಿ ಖರ್ಚು ಮಾಡಲಾಗಿದೆ. ಈ ಸಂದರ್ಭದಲ್ಲಿ ರೂ.10 ಲಕ್ಷ ಕೋಟಿಯಷ್ಟು ಹೂಡಿಕೆಗೆ ಪ್ರಸ್ತಾಪ ಮತ್ತು ಒಪ್ಪಂದಗಳು ಆಗಿವೆ ಎಂದು ರಾಜ್ಯದ ಕೈಗಾರಿಕಾ ಸಚಿವರಾದ ಶ್ರೀ. ಎಂ.ಬಿ. ಪಾಟೀಲರು ತಿಳಿಸಿದ್ದಾರೆ. ದಿನಪತ್ರಿಕೆಗಳನ್ನು ಗಮನಿಸಿದರೆ ಇಂತಹ ಸಮಾವೇಶಗಳು ಕರ್ನಾಟಕ, ಕೇರಳ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಅಸ್ಸಾಂ ಮೊದಲಾದ ರಾಜ್ಯಗಳಲ್ಲಿ ನಡೆದಿವೆ. ಹಲವು ರಾಜ್ಯಗಳಲ್ಲಿ ಕಳೆದ ವರ್ಷವೂ ಇಂತಹ ಜಾತ್ರೆಗಳು ನಡೆದಿವೆ.

**ಯಾತಕ್ಕಾಗಿ ಈ ಸಮಾವೇಶಗಳು?**

ಪ್ರತಿಯೊಂದು ರಾಜ್ಯವೂ ತಾನು ಅತ್ಯಂತ ಉದ್ಯಮಸ್ನೇಹಿ ಎಂದು ಶಹಬ್ಬಾಸ್ ಪಡೆಯುವ ಧಾವಂತದಿಂದ ಕಳೆದ ಒಂದೆರಡು ದಶಕಗಳಿಂದ ಇಂತಹ ಹೂಡಿಕೆ ಸಮಾವೇಶಗಳನ್ನು ಏರ್ಪಡಿಸುತ್ತಾ ಬಂದಿದೆ. ತಮ್ಮ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಿದರೆ ಎಷ್ಟು ರಿಯಾಯಿತಿ ದರದಲ್ಲಿ ಭೂಮಿ ಮಂಜೂರು ಮಾಡಲಾಗುವುದು, ಎಷ್ಟು ತೆರಿಗೆ ರಿಯಾಯಿತಿ ನೀಡಲಾಗುವುದು, ವಿದ್ಯುತ್, ನೀರು ಮುಂತಾದ ಸೌಲಭ್ಯಗಳನ್ನು ಹೇಗೆ ಒದಗಿಸಲಾಗುವುದು, ಕುಶಲ ಕಾರ್ಮಿಕರು ಅತ್ಯಂತ ಕನಿಷ್ಠ ವೇತನದಲ್ಲಿ ದೊರಕುವಂತೆ ಮಾಡಲು ಯಾವ ರೀತಿ ಸರ್ಕಾರಿ ವೆಚ್ಚದಲ್ಲೇ ತರಬೇತಿ ನೀಡಲಾಗುವುದು, ತಮ್ಮ ರಾಜ್ಯದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯಲು ಯಾವ ರೀತಿ ಅನುಮತಿ ಕೊಡಲಾಗುವುದು ಇವೇ ಮುಂತಾದ ವಿಷಯಗಳನ್ನು ಜನ ಸಾಮಾನ್ಯರಿಗೆ ಅರ್ಥವಾಗದ ಕಾರ್ಪೊರೇಟ್ ಭಾಷೆಯಲ್ಲಿ ಚರ್ಚಿಸಲು ಇಂತಹ ವೇದಿಕೆಗಳನ್ನು ಸೃಷ್ಟಿಸಲಾಗುತ್ತಿದೆ.

ಬಂಡವಾಳಶಾಹಿಗಳ ಸೇವೆಗೈಯಲು, ಅದಕ್ಕಾಗಿ ಅತಿ ಹೆಚ್ಚು ರಿಯಾಯಿತಿಗಳನ್ನು ನೀಡಿ, ಕಾರ್ಮಿಕರನ್ನು ಅತಿ ಹೆಚ್ಚು ಶೋಷಣೆ ಮಾಡಲು ಅವಕಾಶ ಕಲ್ಪಿಸುವುದಕ್ಕಾಗಿ ರಾಜ್ಯ ರಾಜ್ಯಗಳ ನಡುವೆ ಪೈಪೋಟಿ ಮೂಡಿಸುವ ತಂತ್ರದ ಭಾಗವೇ ಇದಾಗಿದೆ. ರೈತರು ಭೂಮಿ ಕೊಡದೆ ಹೋರಾಟ ಮಾಡಲು ಮುಂದಾದರೆ, ಕಾರ್ಮಿಕರು ಕಾನೂನುಬದ್ಧವಾಗಿ ತಮ್ಮ ಹಕ್ಕುಗಳನ್ನು ಕೇಳಿದರೆ, ಒಂದು ದೇಶದಿಂದ ಇನ್ನೊಂದು ದೇಶಕ್ಕೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಕಂಪನಿಯನ್ನು ಸ್ಥಳಾಂತರಿಸುವ ಬೆದರಿಕೆ ಹಾಕಲಾಗುತ್ತಿದೆ. ಮತ್ತು ಇಂತಹ ಕಾನೂನು ವಿರೋಧಿ, ಅನೈತಿಕ ಕ್ರಮಗಳಿಗೆ ಸರ್ಕಾರಗಳು ಕುಮ್ಮಕ್ಕು ನೀಡುತ್ತಿವೆ.

**ಘೋಷಣೆ – ವಾಸ್ತವ : ಅಜಗಜಾಂತರ**

ರಾಜ್ಯದಲ್ಲಿ ಈ ಬಾರಿಯ ಸಮಾವೇಶದಲ್ಲಿ ರೂ. 10 ಲಕ್ಷ ಕೋಟಿಯಷ್ಟು ಹೂಡಿಕೆಯ ವಾಗ್ದಾನಗಳು ಬಂದಿವೆ ಎಂದು ವರದಿಯಾಗಿದೆ. ಇದನ್ನು ಮಾಡಿದವರು ಯಾರು ಎಂದು ಗಮನಿಸಿದರೆ, ರೂ. 1,20,000 ಕೋಟಿಯಷ್ಟು ಹೂಡಿಕೆಯನ್ನು ಜಿಂದಾಲ್ ಸ್ಟೀಲ್ ಕಂಪೆನಿ ಮತ್ತು ಕೊಪ್ಪಳದಲ್ಲಿ ತನ್ನ ಕಾರ್ಖಾನೆಯ ವಿಸ್ತರಣೆಗಾಗಿ ಸುಮಾರು ರೂ. 54,000 ಕೋಟಿಯನ್ನು ಬಲ್ದೋಟ ಕಂಪನಿ ಘೋಷಿಸಿವೆ. ಜಿಂದಾಲ್ ಕಂಪನಿ ಸ್ಥಾಪನೆಯಾದ ನಂತರ ಬಳ್ಳಾರಿ, ಸಂಡೂರುಗಳಲ್ಲಾದ ಪರಿಸರ ನಾಶ, ಅಕ್ರಮಗಳ ಕುರಿತು ರಾಜ್ಯದ ಜನತೆಗೆ ತಿಳಿದಿದೆ. ಅದೇ ರೀತಿ ಈಗ ಬಲ್ದೋಟ ಕಂಪನಿಯ ವಿಸ್ತರಣೆಯ ವಿರುದ್ಧ, ಜನತೆ ಕೊಪ್ಪಳ ಬಂದ್ ಕೂಡ ಯಶಸ್ವಿಗೊಳಿಸಿದ್ದಾರೆ. ಈಗಾಗಲೇ ಅಸ್ತಿತ್ವದಲ್ಲಿರುವ ಕಂಪನಿಗಳು ಕೂಡ ತಮ್ಮ ಹೂಡಿಕೆ ಯೋಜನೆಗಳನ್ನು ಈ ಸಮಾವೇಶಗಳಲ್ಲಿ ಬಂದು ಘೋಷಿಸಿವೆ ಎಂಬುದನ್ನು ಗಮನಿಸಬೇಕು. ಹಾಗೆಯೇ ಅವುಗಳ ಬಗ್ಗೆ ಸ್ಥಳೀಯ ಜನರಿಗೆ ವಿರೋಧ ಇದೆ ಎಂಬುದು ಕೂಡ ಗಮನಾರ್ಹ ಅಂಶ.

ಇನ್ನು, ಇಂತಹ ಸಮಾವೇಶಗಳಲ್ಲಿ ಘೋಷಣೆಯಾಗಿರುವ ಮೊತ್ತದಲ್ಲಿ ವಾಸ್ತವದಲ್ಲಿ ಜಾರಿಯಾಗುವ ಪ್ರಮಾಣ ಎಷ್ಟು ಎಂಬುದನ್ನು ನೋಡಬೇಕು. ಶೇ. 70ರಷ್ಟು ಸಾಕಾರಗೊಳಿಸುವುದು ನಮ್ಮ ಗುರಿ ಎಂದು ಸಚಿವರು ಹೇಳಿದ್ದಾರೆ. ಆದರೆ ಹಿಂದಿನ ದಾಖಲೆಗಳನ್ನು ನೋಡಿದರೆ ಇದು ಕೇವಲ ಹಗಲುಗನಸು ಎಂಬುದು ಸ್ಪಷ್ಟ. 2022ರ ನವೆಂಬರ್ 2 ರಿಂದ 4ರ ವರೆಗೆ ನಡೆದ ಸಮಾವೇಶದಲ್ಲಿ ಅಂದಿನ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ರೂ. 9.81 ಲಕ್ಷ ಕೋಟಿಯ ಹೂಡಿಕೆ ಪ್ರಸ್ತಾಪವನ್ನು ಘೋಷಣೆ ಮಾಡಿದ್ದರು. 2024 ಫೆಬ್ರವರಿಯಲ್ಲಿ ವಿಧಾನ ಸಭೆಯಲ್ಲಿ ನೀಡಿದ ಮಾಹಿತಿ ಪ್ರಕಾರ ಇದರಲ್ಲಿ ಮಂಜೂರಾಗಿದ್ದು ಕೇವಲ ರೂ.22,000 ಕೋಟಿಯ 2 ಯೋಜನೆಗಳು ಮಾತ್ರ. 2010ರ ಮೊದಲ ಜಿಐಎಂನಲ್ಲಿ ರೂ.3.94 ಲಕ್ಷ ಕೋಟಿಯಷ್ಟು ಹೂಡಿಕೆಯ ಘೋಷಣೆಯಾಗಿತ್ತು. 2022ರ ಹೊತ್ತಿಗೆ ಇದರಲ್ಲಿ ಕೇವಲ ಶೇ. 14ರಷ್ಟು ಮಾತ್ರವೇ ಸಾಕಾರಗೊಂಡಿತ್ತು. 2013–14 ರಿಂದ 2024–25 ರ ವರೆಗೆ ರೂ.6.45 ಲಕ್ಷ ಕೋಟಿಯ 260 ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದ್ದರೂ, ಹೂಡಿಕೆ ಆಗಿದ್ದು ರೂ. 1.65 ಲಕ್ಷ ಕೋಟಿ ಮಾತ್ರ. (ಆಧಾರ–ದಿ ಇಂಡಿಯನ್ ಎಕ್ಸ್‌ಪ್ರೆಸ್ 10.02.2025)

ಪ್ರತಿ ಬಾರಿ ಇಂತಹ ಹೂಡಿಕೆ ಪ್ರಸ್ತಾಪ ಬಂದಾಗಲೂ ಲಕ್ಷಾಂತರ ಉದ್ಯೋಗ ಸೃಷ್ಟಿಯ ಆಸೆಯನ್ನು ತೋರಿಸಲಾಗುತ್ತದೆ. ಆದರೆ ಇಂದಿನ ಯಾಂತ್ರೀಕೃತ ತಂತ್ರಜ್ಞಾನ ಆಧಾರಿತ ಉತ್ಪಾದನೆಯಲ್ಲಿ ಒಂದು ಕೋಟಿ ರೂಪಾಯಿ ಹೂಡಿಕೆಗೆ ಒಂದು ಉದ್ಯೋಗವೂ ಸೃಷ್ಟಿಯಾಗುವುದಿಲ್ಲ. ಇಂದು ಕೃತಕ ಬುದ್ಧಿಮತ್ತೆ ಹೆಚ್ಚು ಬಳಕೆಗೆ ಬರುತ್ತಿದ್ದಂತೆ ಇರುವ ಕೆಲಸಗಳು ನಾಶವಾಗುತ್ತಿವೆ. ಇನ್ನು ನೀಡುವ ಉದ್ಯೋಗಗಳು ಬಹುತೇಕ ಗುತ್ತಿಗೆ ಆಧಾರದಲ್ಲಿ. ಭೂಮಿ ಕಳೆದುಕೊಂಡ ರೈತರಿಗೆ ವರ್ಷಾನುಗಟ್ಟಲೆ ಪರಿಹಾರ ಇಲ್ಲ. ಬಂದ ಕೈಗಾರಿಕೆಗಳು ಭೂಮಿ ನೀಡಿದ ರೈತರಿಗೂ ಜೀವನಯೋಗ್ಯ ಕೆಲಸ ನೀಡುತ್ತಿಲ್ಲ. ಉದ್ಯೋಗರಹಿತ ಅಭಿವೃದ್ಧಿ ಎಂಬುದು ಸಾಮಾನ್ಯವಾಗಿದೆ. ಇವುಗಳನ್ನೆಲ್ಲ ಪ್ರಶ್ನೆ ಮಾಡಿದರೆ ಬಗೆಹರಿಸುವ ಧೈರ್ಯ ಅಥವಾ ಮನಸ್ಸು ಸರ್ಕಾರಗಳಿಗೆ ಇಲ್ಲ. ಉದ್ಯಮ ಸ್ನೇಹಿ ಎಂಬ ಪಟ್ಟ ಕಳೆದುಕೊಳ್ಳುವ ಭೀತಿ!

**ಎಡರಂಗವೂ ಹಿಂದೆ ಬಿದ್ದಿಲ್ಲ**

ರಾಷ್ಟ್ರೀಯ ಮತ್ತು ಪ್ರಾದೇಶಿಕ ಬಂಡವಾಳಶಾಹಿ ಪಕ್ಷಗಳು ಆಳುತ್ತಿರುವ ಎಲ್ಲ ರಾಜ್ಯಗಳ ಸರ್ಕಾರಗಳು ನಾಮುಂದು ತಾಮುಂದು ಎಂದು ಈ ಸ್ಪರ್ಧೆಯಲ್ಲಿ ತೊಡಗಿರುವಾಗ, ಬಂಡವಾಳಶಾಹಿಗಳನ್ನು ಓಲೈಸುವ ಈ ಸ್ಪರ್ಧೆಯಲ್ಲಿ ಸಿಪಿಐಎಂ ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಅಧಿಕಾರದಲ್ಲಿರುವ ಕೇರಳವೂ ಹಿಂದೆ ಬಿದ್ದಿಲ್ಲ. ಕರ್ನಾಟಕದ ನಂತರ ಕೇರಳದಲ್ಲೂ ಇಂತಹದ್ದೇ ಸಮಾವೇಶ ನಡೆಯಿತು. ಅಲ್ಲಿನ ವಿಳಿಂಜಂ ಬಂದರು ಅಭಿವೃದ್ಧಿ ಸೇರಿದಂತೆ ವಿವಿಧ ಯೋಜನೆಗಳಿಗೆ ಅದಾನಿ ಸಮೂಹ ರೂ.30,000 ಕೋಟಿ ಹೂಡಿಕೆಯ ವಾಗ್ದಾನ ನೀಡಿದೆ. ಇದೇ ಯೋಜನೆಯ ವಿರುದ್ಧ ಸಾವಿರಾರು ಬಡ ಮೀನುಗಾರರು ಹೋರಾಡಿದಾಗ ಪಿನರಾಯ್ ವಿಜಯನ್ ಸರ್ಕಾರ ಅವರ ಮೇಲೆ ದೇಶದ್ರೋಹದ ಕೇಸ್ ಜಡಿದು, ಅದಾನಿಗೆ ಸಹಾಯ ಮಾಡಿತ್ತು. ದೇಶದ ಬೇರೆಲ್ಲಾ ರಾಜ್ಯಗಳಲ್ಲಿ ಬಂಡವಾಳಶಾಹಿ ವಿರುದ್ಧ, ಅದಾನಿಯ ವಿರುದ್ಧ ಹೋರಾಡುವ ಸಿಪಿಐಎಂ, ತಾನು ಅಧಿಕಾರ ನಡೆಸುತ್ತಿರುವ ಕೇರಳದಲ್ಲಿ ಸ್ನೇಹ ಹಸ್ತ ಚಾಚಿದೆ. ಇದಲ್ಲವೇ ಇಬ್ಬಗೆ ನೀತಿ! ಸಿಪಿಐಎಂ ತಾನು ಇತರ ಬಂಡವಾಳಶಾಹಿ ಪಕ್ಷಗಳಿಗಿಂತ ಹೇಗೆ ಭಿನ್ನ!

ಕೊನೆಯದಾಗಿ ಹೇಳುವುದೆಂದರೆ, ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ ಕೈಗಾರಿಕೆಗಳು ಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ ಬಂಡವಾಳಶಾಹಿ ವ್ಯವಸ್ಥೆಯ ಈ ಬಿಕ್ಕಟ್ಟಿನ ಕಾಲದಲ್ಲಿ ಅದು ಕಾನೂನು–ನ್ಯಾಯಬದ್ಧ ಮಾರ್ಗದಲ್ಲಿ ವ್ಯವಹಾರ ನಡೆಸುವ ಬದಲು ಆಳುವ ಪಕ್ಷಗಳೊಂದಿಗೆ ಆಪ್ತತೆ(ಕ್ರೋನಿ) ಬೆಳೆಸಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುತ್ತಿದೆ. ಶೋಷಣೆ, ಲೂಟಿ, ಪರಿಸರ ನಾಶ, ಅಸಮಾನತೆ ಸರ್ವವ್ಯಾಪಿಯಾಗಿವೆ. ಇದೇ ವ್ಯವಸ್ಥೆಯೊಳಗೆ ಈ ಸಮಸ್ಯೆಗಳಿಗೆ ಪರಿಹಾರ ಬಯಸುವುದು ಮರೀಚಿಕೆಯ ಬೆನ್ನಟ್ಟಿದಂತಾದೀತು ಅಷ್ಟೇ.

## ಸರ್ಕಾರಿ ನೇಮಕಾತಿಯಲ್ಲಿ ಅಕ್ರಮ: ಎಐಡಿವೈಓ ಖಂಡನೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ 24 ಹುದ್ದೆಗಳ ನೇಮಕಾತಿಯಲ್ಲಿ 10 ಅಭ್ಯರ್ಥಿಗಳು ನಡೆಸಿರುವ ಭಾರೀ ಅಕ್ರಮವನ್ನು ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ.

ಈ 24 ಹುದ್ದೆಗಳ ನೇಮಕಾತಿಯಾಗಿ 2023 ಜುಲೈ 1 ಮತ್ತು 2ರಂದು ಪರೀಕ್ಷೆ ನಡೆಸಿ ಸೆಪ್ಟೆಂಬರ್ ತಿಂಗಳಲ್ಲಿ ಫಲಿತಾಂಶವನ್ನು ಪ್ರಕಟಿಸಲಾಗಿತ್ತು. ಈ ಬಗ್ಗೆ ಅನೇಕ ದೂರುಗಳು ಬಂದಿದ್ದ ಕಾರಣ ಕೆಪಿಎಸ್‌ಸಿ ನೇಮಕ ಮಾಡಿದ ತನಿಖಾ ಸಮಿತಿಯು ಈ ಪ್ರಕರಣವನ್ನು ಬಯಲಿಗೆಳೆದಿದೆ. ನೇಮಕಾತಿಗಾಗಿ ನಿಷ್ಪಕ್ಷಪಾತ, ನ್ಯಾಯಸಮ್ಮತ, ಪಾರದರ್ಶಕ ಪರೀಕ್ಷೆಗಳನ್ನು ನಡೆಸಲು ನಮ್ಮ ಯುವಜನ ಸಂಘಟನೆ ಎಐಡಿವೈಓ ಹಲವಾರು ಬಾರಿ ಧ್ವನಿಯೆತ್ತಿದೆ. ಆದರೂ ಕೂಡ ಇಂತಹ ಅಕ್ರಮಗಳಿಗೆ ಕಡಿವಾಣವಿಲ್ಲದಂತಾಗಿದೆ. ಇದು ನ್ಯಾಯಸಮ್ಮತವಾಗಿ ಪರೀಕ್ಷೆ ಬರೆದ ಅಭ್ಯರ್ಥಿಗಳಲ್ಲಿ ದಿಗ್ಭ್ರಮೆ ಹಾಗೂ ಆಘಾತವನ್ನು ಉಂಟುಮಾಡಿದೆ.

ಯಾವುದೇ ಪ್ರಲೋಭನಗಳಿಗೆ ಒಳಗಾಗದೆ ತನಿಖಾ ಸಮಿತಿಯು ಈ ಅಕ್ರಮವನ್ನು ಬಯಲಿಗೆಳೆದಿರುವುದನ್ನು ಪ್ರಶಂಸಿಸುತ್ತಲೇ, ತನಿಖಾ ಸಮಿತಿಯು ನೀಡಿದ ಎಲ್ಲ ಶಿಫಾರಸುಗಳನ್ನು ರಾಜ್ಯ ಸರ್ಕಾರವು ಕೂಡಲೇ ಜಾರಿಗೆ ತರಬೇಕು; ಈ ಅಕ್ರಮದಲ್ಲಿ ಭಾಗಿಯಾದ 10 ಅಭ್ಯರ್ಥಿಗಳು ಹಾಗೂ ಅವರಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರನ್ನೂ ಬಯಲಿಗೆಳೆದು ಅವರಿಗೆ ಉಗ್ರ, ನಿದರ್ಶನೀಯ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕೆಂದು ಎಐಡಿವೈಓ ಈ ಮೂಲಕ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.




ಎಚ್.ಎಲ್.ಸಿ. ಕಾಲುವೆಗೆ ಕನಿಷ್ಠ 20 ದಿನ ನೀರು ಹರಿಸಲು ಆಗ್ರಹಿಸಿ, ಎಐಕೆಕೆಎಂಎಸ್ ರೈತ ಸಂಘಟನೆ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.




ಹಾಸನ ವಿಶ್ವವಿದ್ಯಾಲಯ ಉಳಿಸಲು ಹಾಗೂ ವಿಶ್ವವಿದ್ಯಾಲಯಕ್ಕೆ ಅವಶ್ಯಕ ಅನುದಾನ, ಮೂಲಸೌಕರ್ಯಗಳನ್ನು ಒದಗಿಸಲು ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ!

### ಮಹಾ ಕುಂಭಮೇಳವನ್ನು ಮಹಾನ್ ದುರಂತವಾಗಿಸಿದ

# ಬಿಜೆಪಿ–ಆರ್‌ಎಸ್‌ಎಸ್‌ನ ಚುನಾವಣಾ ಹಿಂದುತ್ವ!

ಪ್ರಯಾಗ್‌ರಾಜ್‌ದಲ್ಲಿ ನಡೆದ ಮಹಾ ಕುಂಭಮೇಳಕ್ಕೆ ಆಗಮಿಸಿದ್ದ ಯಾತ್ರಾರ್ಥಿಗಳು ನಿದ್ರಿಸುತ್ತಿದ್ದರು. ಜನವರಿ 29ರ ನಸುಕಿನಲ್ಲಿ ದೊಡ್ಡ ಧ್ವನಿಯಲ್ಲಿ ಈ ರೀತಿ ಘೋಷಣೆ ಮಾಡಲಾಯಿತು. "144 ವರ್ಷಗಳ ನಂತರ ಮಂಗಳಕರವಾದ ಸಮಯ ಸನ್ನಿಹಿತವಾಗುತ್ತಿದೆ, ನಿಮಗೆ ಅಮೃತದಲ್ಲಿ ಸ್ನಾನ ಮಾಡಬೇಕಿದ್ದಲ್ಲಿ ಎದ್ದೇಳಿ, ಪವಿತ್ರ ಸಂಗಮದ ಕಡೆಗೆ ಹೊರಡಿರಿ" ಎಂದು. ಇದಾದ ನಂತರ ಪವಿತ್ರವಾದ ಸ್ಥಳವನ್ನು ಬೇಗ ತಲುಪುವಂತೆ ಪೊಲೀಸ್ ಹಾಗೂ ಭದ್ರತಾ ಸಿಬ್ಬಂದಿ ಯಾತ್ರಾರ್ಥಿಗಳನ್ನು ಅಕ್ಷರಶಃ ಓಡಿಸಿಕೊಂಡು ಹೋಗಿದ್ದಾರೆ. ಹಿರಿಯ ನಾಗರಿಕರನ್ನು, ದುರ್ಬಲರನ್ನು ಸಹ ಒಳಗೊಂಡಿರುವ ಭಕ್ತ ಸಮೂಹ ಗಂಗಾ ನದಿಯ ಕಡೆಗೆ ನುಗ್ಗಿದೆ. ಮತ್ತೊಂದು ಕಡೆಯಿಂದ ಸ್ನಾನ ಮುಗಿಸಿಕೊಂಡು ದೊಡ್ಡ ಸಂಖ್ಯೆಯ ಭಕ್ತರು ವಾಪಸ್ಸು ಬರುತ್ತಿದ್ದರು. ವಿಐಪಿಗಳಿಗಾಗಿ ಬ್ಯಾರಿಕೇಡುಗಳನ್ನು ಹಾಕಿ, ಮಾರ್ಗವನ್ನು ಕಿರಿದಾಗಿ ಕೊಳವೆಯಂತೆ ಮಾಡಿದ್ದರಿಂದ, ವಿರುದ್ಧ ದಿಕ್ಕುಗಳಲ್ಲಿ ಜನಪ್ರವಾಹ ಉಂಟಾಯಿತು. ಅಸಂಖ್ಯಾತ ಜನ ಇಕ್ಕಟ್ಟಾದ ಪ್ರದೇಶದಲ್ಲಿ ಸಿಲುಕಿದರು; ಕೆಲವೇ ನಿಮಿಷಗಳಲ್ಲಿ ಜನರ ಕಾಲ್ತುಳಿತಕ್ಕೆ ನೂರಾರು ಜನ ಬಲಿಯಾದರು. ಬದುಕುಳಿದವರಿಗೆ, ಗಾಯಗೊಂಡ ಸಾವಿರಾರು ಜನರಿಗೆ ಈ ದುರ್ಘಟನೆ ದುಃಸ್ವಪ್ನವೇ ಆಗಿದೆ. ಧಾರ್ಮಿಕ ಗುರುಗಳ, ಸಂಘ ಪರಿವಾರದ ನಾಯಕರ ಘೋಷಣೆಯಂತೆ, ಈ 'ಮೌನಿ ಅಮಾವಾಸ್ಯೆ'ಯ ಸ್ನಾನವು ಮಂಗಳಕರವಾಗಲಿಲ್ಲ. ಬದಲಿಗೆ ಅದು ಜನಸಾಮಾನ್ಯರಿಗೆ ಘೋರ ದುರಂತವಾಗಿ ಪರಿಣಮಿಸಿತು. ಬಹಳಷ್ಟು ಜನ ನಾಪತ್ತೆಯಾಗಿರುವ ವರದಿಗಳಿವೆ. ಪೊಲೀಸರಾಗಲಿ, ಅಧಿಕಾರಿಗಳಾಗಲಿ ಅಲ್ಲಿ ಇರಲಿಲ್ಲ. ಎಳೆಯರು ತಮ್ಮ ತಂದೆ ತಾಯಿಯರನ್ನು ಕಳೆದುಕೊಂಡರು. ಹಿರಿಯರು ನರಕವನ್ನು ನೋಡಿದರು. ಗಾಯಾಳುಗಳ ಹಾಗೂ ತಮ್ಮವರನ್ನು ಕಳೆದುಕೊಂಡವರ ಆಕ್ರಂದನ, ದೇವಸ್ಥಾನದ ಗಂಟೆಗಳ ಶಬ್ದವನ್ನು ಮೀರಿಸಿಬಿಟ್ಟಿತು. ಈ ಮಂಗಳಕರ ಸಂದರ್ಭದಲ್ಲಿ, ಅಂಬುಲೆನ್ಸ್‌ನ ಸೈರನ್ ಶಬ್ದ, ಮಂತ್ರಗಳ ಶಬ್ದವನ್ನು ಕೇಳಲಾರದಂತೆ ಮಾಡಿತ್ತು! ಜಗತ್ತಿನಲ್ಲಿ ನಡೆದ ಹಲವಾರು ಅತಿ ದೊಡ್ಡ ಧಾರ್ಮಿಕ ಸಭೆಗಳ ಪೈಕಿ ಈ ಮೇಳವು ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸಿದೆ. ಇದರ ಜೊತೆಯಲ್ಲಿ ಕಿನ್ನಾರ್ ಅಖಾರ ಶಿಬಿರದ ಬಳಿ ಹಾಗೂ ಇತರ 15 ಶಿಬಿರಗಳಲ್ಲಿ ಬೆಂಕಿ ಹತ್ತಿ ಉರಿದು, ಅವು ಬೆಂಕಿಗೆ ಆಹುತಿಯಾದವು. ಕಾಲ್ತುಳಿತ ಉಂಟಾದ ಒಂದು ದಿನದ ನಂತರ ನಾಗೇಶ್ವರ ಘಾಟ್ ಬಳಿಯ ಶಿಬಿರದಲ್ಲಿ ಬೆಂಕಿ ಹತ್ತಿಕೊಂಡಿತು. ಫೆಬ್ರವರಿ 7ರಂದು ಮಹಾ ಕುಂಭದ ವಿಭಾಗ 18ರಲ್ಲಿ ಮತ್ತೊಂದು ಬೆಂಕಿ ಹತ್ತಿಕೊಂಡಿತು. ಆದರೆ ರಾಜ್ಯ ಸರ್ಕಾರ ಸಾವಿನ ಸಂಖ್ಯೆಯನ್ನು ಮರೆಮಾಚಲು ಮರಣ ಪ್ರಮಾಣ ಪತ್ರ ನೀಡಲಿಲ್ಲ!

#### ಇದು ದೈವ ಲೀಲೆಯೋ ಅಥವಾ ಮನುಷ್ಯ ನಿರ್ಮಿತವೋ

ಈ ಕಾಲ್ತುಳಿತದ ಘಟನೆ ದೈವ ಲೀಲೆಯೇ ಎಂಬುದನ್ನು ಹಿಂದುತ್ವವಾದಿಗಳೇ ಉತ್ತರಿಸಬೇಕು. ಆದರೆ, ನಾವು ಕಂಡಂತೆ, ಈ ಒಂದು ದುರಂತ ಆಕಸ್ಮಿಕವಲ್ಲ. ಬದಲಿಗೆ ವ್ಯವಸ್ಥೆಯ ವೈಫಲ್ಯದಿಂದ ಉಂಟಾದ, ತಪ್ಪಿಸಬಹುದಾದ ದುರ್ಘಟನೆ. ಜನರನ್ನು ಕಡೆಗಣಿಸಿ, ಉಳ್ಳವರಿಗೆ ಸವಲತ್ತುಗಳನ್ನು ನೀಡುವ ಸಂಸ್ಕೃತಿ ಈ ಘಟನೆಯ ಹಿಂದೆ ಅಡಕವಾಗಿದೆ. ಕುಂಭಮೇಳ 2025ರ ಯೋಜನೆ, ಉತ್ತರ ಪ್ರದೇಶದ ಸರ್ಕಾರದಿಂದ 2022 ರಲ್ಲಿ ರೂಪಿತವಾಗಿತ್ತು. ಇದಕ್ಕಾಗಿ ರೂ.5010 ಕೋಟಿ ಬಜೆಟ್ ನಿಗದಿಯಾಗಿತ್ತು, ಅದರಲ್ಲಿ ಕೇಂದ್ರ ಸರ್ಕಾರ ರೂ.2010 ಕೋಟಿಯಷ್ಟು ಹಣ ನೀಡಿದೆ. ಇದು ಅಧಿಕೃತವಾಗಿ ನೀಡಿರುವ ಅಂಕಿ ಅಂಶಗಳಾಗಿವೆ. ಇನ್ನು ಅನಧಿಕೃತವಾಗಿ ಇನ್ನೆಷ್ಟು ಖರ್ಚುಗಳಾಗಿರಬಹುದು ಎಂಬುದನ್ನು ಯಾರಾದರೂ ಊಹೆ ಮಾಡಬಹುದು. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಈ ವರ್ಷದ ಕುಂಭಮೇಳ ಕೇವಲ ಒಂದು ಧಾರ್ಮಿಕ ಕಾರ್ಯಕ್ರಮವಲ್ಲ, ಬದಲಿಗೆ ಜಾಗತಿಕ ವೈಭವದ ಕಾರ್ಯಕ್ರಮವಾಗಿದೆ. ಹೆಚ್ಚಿಸಿರುವ ಬಜೆಟ್ ಭಕ್ತರಿಗೆ ನೀಡುವ ವಿಶ್ವ ದರ್ಜೆಯ ಮೂಲಸೌಕರ್ಯಗಳ ಪ್ರತೀಕವಾಗಿದೆ, ಎಂದಿದ್ದಾರೆ.

ಉತ್ತರ ಪ್ರದೇಶದ ಸಚಿವರೊಬ್ಬರು, ವಿಶ್ವ ದರ್ಜೆ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಮಾತನಾಡಿದ್ದಾರೆ. ಇದು ನಿಜವೇ? ಅತ್ಯಂತ ಕಳಪೆ ಮಟ್ಟದ ಜನಸಮೂಹದ ನಿಯಂತ್ರಣ, ಅಗತ್ಯಕ್ಕೆ ತಕ್ಕಂತಿರದ ತುರ್ತು ಕ್ರಮಗಳು ಹಾಗೂ ಕುಖ್ಯಾತವಾದ ವಿಐಪಿ ಸಂಸ್ಕೃತಿ, ಇಂಥ ದುರ್ಘಟನೆಗೆ ಎಡೆ ಮಾಡಿಕೊಟ್ಟಿದ್ದಲ್ಲವೇ? ಸಾಮಾನ್ಯ ಭಕ್ತರನ್ನು ನಿಭಾಯಿಸಬೇಕಾದ ಭದ್ರತಾ ಸಿಬ್ಬಂದಿಯನ್ನು ಮಂತ್ರಿಗಳು, ಉನ್ನತ ಅಧಿಕಾರಿಗಳು, ಕೆಲವು ಹಿಂದೂ ಸಂತರಿಗೆ ದಾರಿ ಮಾಡಿಕೊಡಲು ನಿಯೋಜಿಸಲಾಗಿತ್ತು. ಮತ್ತೊಂದೆಡೆ ಲಕ್ಷಾಂತರ ಭಕ್ತರನ್ನು ಕಿರಿದಾದ ಉಸಿರುಗಟ್ಟಿಸುವ ಜಾಗಗಳಲ್ಲಿ ಓಡಾಡುವಂತೆ ಕ್ರಮ ಕೈಗೊಳ್ಳಲಾಗಿತ್ತು. ಹೆಚ್ಚಿದ ಜನಜಂಗುಳಿಯಿಂದ ಈ ಕಾಲ್ತುಳಿತ ಉಂಟಾಯಿತೇ ಹೊರತು, ವಿಫಲಗೊಂಡ ಜನರ ನಿಯಂತ್ರಣ ಹಾಗೂ ಮೂಲಸೌಕರ್ಯಗಳ ಕೊರತೆಯಿಂದ ಅಲ್ಲ ಎಂದು ಸರ್ಕಾರಗಳು ಚಿತ್ರಣ ನೀಡುತ್ತಿವೆ. ಮೂಲಸೌಕರ್ಯಗಳ ಕೊರತೆ, ಸಂವಹನದ ಕೊರತೆ, ವಿವಿಐಪಿ ಹಿನ್ನೆಲೆಯಲ್ಲಿ ಉಂಟಾದ ಅವ್ಯವಸ್ಥೆ, ಇವೇ ನಿಜವಾದ ಅಪರಾಧಿ ಅಂಶಗಳು. ಅಲ್ಲಿ ಘಟಿಸಿರುವ ಅನೇಕ ಬೆಂಕಿ ಅನಾಹುತಗಳು ಸುರಕ್ಷತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಕೇಳುವಂತೆ ಮಾಡುತ್ತಿವೆ. ಇದು ಕೇವಲ ಆಡಳಿತಾತ್ಮಕ ದೋಷವಷ್ಟೇ ಅಲ್ಲ; ರಾಜ್ಯ ಸರ್ಕಾರವು ಕಣ್ಣು ಕೋರೈಸುವ ವೈಭವಕ್ಕೆ ನೀಡಿರುವ ಮಹತ್ವವನ್ನು ಜನರ ಜೀವಕ್ಕೆ ನೀಡಲಿಲ್ಲ. ಜೊತೆಗೆ, ಗಂಗಾ ಮತ್ತು ಯಮುನಾ ನದಿಗಳ ನೀರು ಅತ್ಯಂತ ಕಲುಷಿತವಾಗಿದೆ ಎಂಬ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಬೋರ್ಡ್‌ನ ವರದಿಯನ್ನೂ ಸರ್ಕಾರ ತಳ್ಳಿ ಹಾಕಿ ಜನಾರೋಗ್ಯವನ್ನು ಅಪಾಯಕ್ಕೆ ದೂಡಿತು.

#### ಗ್ರಹಗಳ ಸಾಲುಗೂಡುವಿಕೆಯ ಹಿಂದಿರುವ ವಿಜ್ಞಾನ

ಸೂರ್ಯನ ಸುತ್ತಾ ಗುರುಗ್ರಹವು ಪ್ರದಕ್ಷಿಣೆ ಹಾಕಲು 12 ವರ್ಷ ತೆಗೆದುಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಬೇರೆ ಗ್ರಹಗಳ ಜೊತೆ ಸಾಲುಗೂಡುವ ಅತ್ಯಂತ ವಿರಳವಾದ ವಿದ್ಯಮಾನವು ನಡೆಯುತ್ತದೆ. ಪ್ರತಿ 144 ವರ್ಷಕ್ಕೊಮ್ಮೆ ಸೂರ್ಯನ ಒಂದು ಬದಿಯಲ್ಲಿ ಶುಕ್ರ, ಗುರು, ಶನಿ, ಯುರೇನೆಸ್ ಹಾಗೂ ನೆಪ್ಚೂನ್ ಗ್ರಹಗಳು ಒಂದೇ ಸಾಲಲ್ಲಿ ಬರುತ್ತವೆ. ಇದಕ್ಕೆ ಜೊತೆಯಾಗಿ ಕುಂಭಮೇಳ ಬರುವುದೊಂದು ಅಪರೂಪದ ಘಟನೆ. ಹಿಂದೆ, ಈ ವಿದ್ಯಮಾನದ ಹಿಂದಿರುವ ಕಾರಣಗಳನ್ನು ತಿಳಿಯದ ಹಿಂದೂ ಆಧ್ಯಾತ್ಮವಾದಿಗಳು, ಈ ಮಂಗಳಕರ ಸಂದರ್ಭದಲ್ಲಿ ತ್ರಿವೇಣಿ ಸಂಗಮದ ನೀರು ಅಮೃತವಾಗುತ್ತದೆ, ಅದರಲ್ಲಿ ಸ್ನಾನ ಮಾಡುವುದರಿಂದ ಮೋಕ್ಷ ದೊರೆಯುತ್ತದೆ ಎಂದು ನಂಬಿದ್ದರು. ಆದರೆ ಇಂದು ವಿಜ್ಞಾನ ಬಿಚ್ಚಿಟ್ಟಿರುವ ಸತ್ಯವನ್ನು ಗಾಳಿಗೆ ತೂರುವುದೆಂದರೆ, ಅಂಧಶ್ರದ್ಧೆಯನ್ನು, ಗತಕಾಲದ ಧಾರ್ಮಿಕ ಸಿದ್ಧಾಂತಗಳನ್ನೇ 'ವೇದವಾಕ್ಯ' ಎಂದು ಅಥವಾ ಸರ್ವಕಾಲಿಕ ಸತ್ಯ ಎಂದು ಬಿಂಬಿಸುವುದಾಗಿದೆ. ಈ ಮೂಲಕ ಮೂಢನಂಬಿಕೆಗಳಿಗೆ ಮತ್ತಷ್ಟು ಪುಷ್ಟಿ ನೀಡಿದಂತಾಗುತ್ತದೆ.

#### ಮೂಡಿದ ಮಾನವೀಯತೆಯ ಮಿಂಚು

ಅಲ್ಪಸಂಖ್ಯಾತರ, ಅದರಲ್ಲೂ ಮುಸಲ್ಮಾನರ ಮೇಲಿನ ದ್ವೇಷ ಹಾಗೂ ಹಿಂದುತ್ವದ ಮೇಲಿನ ಅಂಧಾಭಿಮಾನ, ಇದೇ ಸಿದ್ಧಾಂತದ ಮೇಲೆ ಆರ್‌ಎಸ್‌ಎಸ್–ಬಿಜೆಪಿ ನಿಂತಿರುವುದು ಎಂಬುದು ಎಲ್ಲರಿಗೂ ಗೊತ್ತಿರುವಂತದ್ದೇ. ಮಹಾಕುಂಭಮೇಳದ ಸಂದರ್ಭದಲ್ಲೂ ಇದು ಪ್ರತಿಫಲನವಾಯಿತು. ಹಿಂದೂ ಧಾರ್ಮಿಕ ಮೆರವಣಿಗೆ ಹೋಗುವ ದಾರಿಗಳಲ್ಲಿ, ತಮ್ಮ ಹೊಟ್ಟೆಪಾಡಿಗಾಗಿ ಸಣ್ಣಪುಟ್ಟ ಹೊಟೇಲುಗಳನ್ನು ನಡೆಸುತ್ತಿದ್ದ ಮುಸಲ್ಮಾನರ ಮೇಲೆ ದಾಳಿ ಮಾಡಿ, ಅವರ ಅಂಗಡಿಗಳನ್ನು ಬಲವಂತವಾಗಿ ಮುಚ್ಚಿಸಲಾಯಿತು. ಯಾತ್ರಾರ್ಥಿಗಳು ಮುಸಲ್ಮಾನರ ಹೊಟೇಲುಗಳಿಂದ ಊಟ ಖರೀದಿಸಬಾರದೆಂಬ ಉದ್ದೇಶದಿಂದ, ಅಂಗಡಿಗಳ ಮುಂದೆ, ಮಾಲೀಕರ ಹಾಗೂ ಕೆಲಸಗಾರರ ಹೆಸರುಗಳುಳ್ಳ ಫಲಕಗಳನ್ನು ಹಾಕಬೇಕೆಂದು ಬಿಜೆಪಿ ನೇತೃತ್ವದ ಉತ್ತರಪ್ರದೇಶದ ಸರ್ಕಾರ ನಿರ್ದೇಶನ ನೀಡಿತು. ಇದರ ಪರಿಣಾಮವಾಗಿ ಬಹಳಷ್ಟು ಮುಸಲ್ಮಾನ ಮಾಲೀಕರು ತಮ್ಮ ಹೊಟೇಲುಗಳನ್ನು ಬಂದ್ ಮಾಡಬೇಕಾಯಿತು. ಹಿಂದೂ ಮಾಲೀಕರು ನಡೆಸುವ ಹೊಟೇಲುಗಳಲ್ಲಿ ಕೆಲಸ ಮಾಡುವ ಮುಸಲ್ಮಾನ ಕೆಲಸಗಾರರನ್ನು ಕಿತ್ತು ಹಾಕುವಂತೆ ಸೂಚಿಸಲಾಯಿತು. ಪ್ರಯಾಗ್‌ರಾಜ್‌ನಲ್ಲಿ ಕುಂಭಮೇಳಗಳ ಸಂದರ್ಭದಲ್ಲಿ, ಮುಸಲ್ಮಾನ ಸಮುದಾಯ ಐತಿಹಾಸಿಕವಾಗಿ ಅತ್ಯಂತ ಸಕ್ರಿಯ ಪಾತ್ರ ನಿರ್ವಹಿಸಿದೆ. ಇದರಿಂದ ಹಿಂದೂ ಹಾಗೂ ಮುಸಲ್ಮಾನ ಈ ಎರಡೂ ಸಮುದಾಯಗಳಿಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಾಕಷ್ಟು ಉಪಯೋಗವಾಗಿದೆ. ಆದರೆ ಈ ಬಾರಿ ಮುಸಲ್ಮಾನರನ್ನು ಬಹಿಷ್ಕಾರ ಹಾಕುವಂತೆ ಕೆಲವು ಧಾರ್ಮಿಕ ಮುಖಂಡರು ನೀಡಿರುವ ಕರೆಯಿಂದಾಗಿ, ವ್ಯಾಪಾರ ಹಾಗೂ ಸೇವೆಗಳಿಂದ ಅವರನ್ನು ಹೊರಹಾಕಲಾಯಿತು.

ಇಷ್ಟೆಲ್ಲಾ ಆದರೂ, ಕೋಮುವಾದ–ಮೂಲಭೂತವಾದಕ್ಕೆ ಮಾನವೀಯತೆಯ ಹೊಳೆಯನ್ನು ತಡೆಯಲು ಮಾತ್ರ ಸಾಧ್ಯವಾಗಲಿಲ್ಲ. ಬಹಿಷ್ಕಾರ ಹಾಕಿದ್ದರೂ, ಸ್ಥಳೀಯ ಮುಸಲ್ಮಾನರು, ಕಾಲ್ತುಳಿತದ ಹೊಡೆತಕ್ಕೆ ಸಿಕ್ಕ ಸಂತ್ರಸ್ತರಿಗೆ, ಆಹಾರ, ವಸತಿ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ನೀಡಿದರು. ಮಾನವೀಯ ಮೌಲ್ಯಗಳ ಬಗ್ಗೆ ಅವರಿಗಿರುವ ಬದ್ಧತೆಯನ್ನು ಇದು ಸಾರಿತು. ಈ ಸಮುದಾಯವು 'ಭಂಡಾರ'ಗಳ ಮೂಲಕ ಉಚಿತ ಊಟದ ವ್ಯವಸ್ಥೆಯನ್ನು ಮಾಡಿ, ಧರ್ಮದ ಭೇದ–ಭಾವವಿಲ್ಲದೆ ಸಾವಿರಾರು ಭಕ್ತರಿಗೆ ಊಟ ನೀಡಿತು. ಈ ಬಗ್ಗೆ ವೀಡಿಯೋಗಳು, ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚಾರಗೊಂಡವು. ಜನರನ್ನು ಒಡೆಯುವ ಸರ್ಕಾರದ ಎಲ್ಲಾ ಕುಟಿಲ ಯತ್ನಗಳಿಗೆ, ಈ ವಿದ್ಯಮಾನ ತಕ್ಕ ಉತ್ತರ ನೀಡಿತು!

#### ಈ ಮಹಾ ಕುಂಭಮೇಳ ಯಾತಕ್ಕಾಗಿ?

ಸಾವಿರಾರು ಕೋಟಿ ಜನರ ತೆರಿಗೆ ಹಣವನ್ನು ಬಳಸಿ, ಇಷು ಅಬ್ಬರದಿಂದ ಈ ಮಹಾ ಕುಂಭಮೇಳವನ್ನು ಆಯೋಜಿಸುವ ಉದ್ದೇಶವಾದರೂ ಏನು? ಕಳೆದ 11 ವರ್ಷಗಳಿಂದ ಬಿಜೆಪಿ, ಈ ಮೊದಲು 50–60 ವರ್ಷ ಕಾಂಗ್ರೆಸ್, ಇವರ್‍ಯಾರೇ ಆಳ್ವಿಕೆ ನಡೆಸಿದರೂ, ಜನ ಸಾಮಾನ್ಯರ ಕಷ್ಟಗಳು ಮಾತ್ರ ನೀಗಿಲ್ಲ. ಹಸಿವು, ಬಡತನ, ಬೆಲೆ ಏರಿಕೆ, ನಿರುದ್ಯೋಗ, ದುಬಾರಿಯಾದ ಶಿಕ್ಷಣ–ಆರೋಗ್ಯ, ರೈತ–ಕಾರ್ಮಿಕರ ಸಂಕಷ್ಟಗಳು ಮುಂತಾದ ಅನೇಕ ಸಮಸ್ಯೆಗಳು ಜನ ಜೀವನವನ್ನು ಹಿಂಡಿಹಿಪ್ಪೆ ಮಾಡಿವೆ. ಮತ್ತೊಂದೆಡೆ ಬೆರಳೆಣಿಕೆಯ ಕಾರ್ಪೋರೇಟ್ ಮಾಲೀಕರು ಅಗಾಧವಾದ ಲಾಭ ಮಾಡಿಕೊಳ್ಳುತ್ತಿದ್ದಾರೆ. ಜನತೆಯಲ್ಲಿ ದಿನೇ ದಿನೇ ಈ ವ್ಯವಸ್ಥೆಯ ವಿರುದ್ಧ ಆಕ್ರೋಶ ಹೆಚ್ಚುತ್ತಲೇ ಇದೆ. ಇಂತಹ ಸಂದರ್ಭದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಹಿತ ಕಾಪಾಡಲು, ಆಳುವ ಸರ್ಕಾರಗಳು ಧರ್ಮದ ಹೆಸರಲ್ಲಿ ಜನರ ಒಗ್ಗಟ್ಟು ಮುರಿಯುತ್ತಾ, ಕೋಮು ವೈಷಮ್ಯ ಬಿತ್ತಲು ಕುತಂತ್ರಗಳನ್ನು ಹೂಡುತ್ತಿವೆ. ಜನರಲ್ಲಿರುವ ಧಾರ್ಮಿಕ ನಂಬಿಕೆಗಳನ್ನು ಬಳಸಿಕೊಂಡು, ನಿಜವಾದ ಸಮಸ್ಯೆಗಳಿಂದ ಅವರನ್ನು ದಿಕ್ಕು ತಪ್ಪಿಸಲಾಗುತ್ತಿದೆ.

ಅಯೋಧ್ಯೆಯ ರಾಮಮಂದಿರ ವಿಷಯವು ಸಂಘ ಪರಿವಾರದ ಅಜೆಂಡಾಗೆ ನಿರೀಕ್ಷಿತ ವೇಗ ನೀಡಲಿಲ್ಲ. ಹಾಗಾಗಿ ತಮ್ಮ ರಾಜಕೀಯ, ಚುನಾವಣಾ ಹಾಗೂ ಆರ್ಥಿಕ ಹಿತಾಸಕ್ತಿಗಾಗಿ ಬಿಜೆಪಿ ನಾಯಕತ್ವ ಕುಂಭಮೇಳದ ಹಿಂದೆ ಬಿದ್ದಿದೆ. ಆದರೆ, ಮಹಾನ್ ಹಿಂದೂ ಸಂತರಾದ ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ ಮುಂತಾದವರು ಎತ್ತಿ ಹಿಡಿದ ಕೋಮು ಸಾಮರಸ್ಯ, ಬಡ ಜನರು ಹಾಗೂ ನೊಂದ ಜನರ ಬಗೆಗಿನ ಕಾಳಜಿ, ಇಂತಹ ಮೌಲ್ಯಗಳು ಈ ನಾಯಕರುಗಳಲ್ಲಿ ಇವೆಯೇ? ಇದಲ್ಲದೆ ಮಹಾ ಕುಂಭಮೇಳದ ಹಿಂದೆ ಆರ್ಥಿಕ ಆಯಾಮವೂ ಇದೆ. ಕೋಟ್ಯಂತರ ಭಕ್ತರು ಆಗಮಿಸುವುದರಿಂದ, ಬಂಡವಾಳಶಾಹಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿ ಲಾಭವನ್ನು ಕೂಡ ಈ ಮಹಾ ಕುಂಭಮೇಳ ತಂದು ಕೊಟ್ಟಿದೆ. ಹಾಗಾಗಿ ಮಹಾಕುಂಭಮೇಳವನ್ನು ಕೇವಲ ಭಾರತದ ಆಧ್ಯಾತ್ಮಿಕತೆಗೆ ಇನ್ನಷ್ಟು ಮೆರುಗು ನೀಡುವುದಕ್ಕೆ ಆಯೋಜಿಸಿದ್ದಲ್ಲ, ಬದಲಿಗೆ ಆಡಳಿತದಲ್ಲಿರುವ ಬಿಜೆಪಿಯ ಚುನಾವಣಾ ಉದ್ದೇಶಗಳಿಗೆ ಹಾಗೂ ಬಂಡವಾಳಶಾಹಿಗಳ ದುರಾಡಳಿತದ ವಿರುದ್ಧ ಬಂಡೇಳುವ ಶೋಷಿತ ಜನರನ್ನು ಧರ್ಮದ ಹೆಸರಿನಲ್ಲಿ ವಿಭಜಿಸುವ ಹುನ್ನಾರದ ಭಾಗವಾಗಿ ಆಯೋಜಿಸಿದ್ದು ಎಂದರೆ ತಪ್ಪಾಗಲಾರದು.

---

### ಮಹಾಕುಂಭ ಕಾಲ್ತುಳಿತ ಸಾವು:

## ಕೇಂದ್ರ ಮತ್ತು ಉತ್ತರ ಪ್ರದೇಶ ರಾಜ್ಯ ಸರ್ಕಾರಗಳ ಕ್ರಿಮಿನಲ್ ನಿರ್ಲಕ್ಷ್ಯ

– ಎಸ್‌ಯುಸಿಐ (ಸಿ) ಆರೋಪ

**ಎಸ್‌ಯುಸಿಐ (ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ಹೇಳಿಕೆ:**

"ಅಧಿಕೃತ ವರದಿಯ ಪ್ರಕಾರ, ಜನವರಿ 29 ರ ಮುಂಜಾನೆ ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ ಸಂಭವಿಸಿದ ವಿನಾಶಕಾರಿ ಕಾಲ್ತುಳಿತದಲ್ಲಿ ಕನಿಷ್ಠ 30 ಜನರು ಸಾವನ್ನಪ್ಪಿದ್ದಾರೆ ಮತ್ತು 60 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಮತ್ತು ಇನ್ನೂ ಅನೇಕರು ನಾಪತ್ತೆಯಾಗಿದ್ದಾರೆ ಎಂಬ ವರದಿಗಳು ದೇಶವನ್ನು ಬೆಚ್ಚಿಬೀಳಿಸಿವೆ. ಮಾಧ್ಯಮ ವರದಿಗಳ ಪ್ರಕಾರ, ಅಸಹಾಯಕ ಯಾತ್ರಿಕರು ಸಹಾಯಕ್ಕಾಗಿ ಮೊರೆಯಿಟ್ಟರೂ ಕೂಡ ಅವರ ಪಕ್ಕದಲ್ಲಿ ಯಾರೂ ಇರಲಿಲ್ಲ. ಕೆಲವು ದಿನಗಳ ಹಿಂದೆ, ಕುಂಭಮೇಳದ ಸ್ಥಳದಲ್ಲಿ ಸಂಭವಿಸಿದ ಬೆಂಕಿಯು ಹಲವಾರು ಗುಡಾರಗಳನ್ನು ಸುಟ್ಟುಹಾಕಿತು ಮತ್ತು ಅನೇಕರಿಗೆ ಗಾಯಗಳನ್ನು ಉಂಟುಮಾಡಿತು ಎಂಬುದನ್ನು ಸಹ ಗಮನಿಸಬೇಕು. ಆಘಾತಕಾರಿ ಸಂಗತಿಯೆಂದರೆ, ಉ.ಪ್ರ.ರಾಜ್ಯದ ಮುಖ್ಯಮಂತ್ರಿಗಳು ಈ ಘಟನೆಯನ್ನು ಅವಮಾನಕರ ರೀತಿಯಲ್ಲಿ ಕಡೆಗಣಿಸಲು ಮುಂದಾದರು ಮತ್ತು ಪ್ರಮುಖ ಸಂಗತಿಗಳನ್ನು ಮುಚ್ಚಿಹಾಕಿದರು.

ಇದು ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾತಕಿ ನಿರ್ಲಕ್ಷ್ಯವಲ್ಲದೆ ಬೇರೇನೂ ಅಲ್ಲ. ಇಂತಹ ಅನಿಯಂತ್ರಿತ ಬೃಹತ್ ಧಾರ್ಮಿಕ ಮೇಳವನ್ನು ಆಯೋಜಿಸುವುದರ ಹಿಂದಿರುವ ಸಂಕುಚಿತ ಪಂಥೀಯ ರಾಜಕೀಯ ಲಾಭ ಪಡೆಯುವ ಉದ್ದೇಶವು ಭಕ್ತಿಯ ಮೂಲಕ ದೇವರನ್ನು ಪಡೆಯಬಹುದು ಎಂಬ ಪ್ರವಚನದ ಹಿಂದೆ ಮರೆಮಾಚಲ್ಪಟ್ಟಿದೆ. ಯಾವುದೇ ಪರಿಹಾರದ ಮೊತ್ತವು ಕೂಡ ಅನೇಕ ಅಮಾಯಕ ಜೀವಗಳ ನಷ್ಟವನ್ನು ಸರಿದೂಗಿಸಲು ಸಾಧ್ಯವಿಲ್ಲ ಎಂದು ನಾವು ದೃಢವಾಗಿ ಹೇಳಲು ಬಯಸುತ್ತೇವೆ.

ಈ ದುರಂತದ ಬಗ್ಗೆ ಉನ್ನತ ಮಟ್ಟದ ನ್ಯಾಯಾಂಗ ತನಿಖೆ ನಡೆಸಬೇಕು ಮತ್ತು ಅದಕ್ಕೆ ಕಾರಣರಾದ ಎಲ್ಲರಿಗೂ ಕಠಿಣ ಶಿಕ್ಷೆ ವಿಧಿಸಬೇಕೆಂದು ನಾವು ಬಲವಾಗಿ ಒತ್ತಾಯಿಸುತ್ತೇವೆ."

# ಮಣಿಪುರ ಛಿದ್ರ ಛಿದ್ರ: ಒಡೆದ ಮನಗಳು:

## ಬಂಡವಾಳಶಾಹಿ ಆಳ್ವಿಕರು ಪ್ರಾಯೋಜಿಸಿದ ನರಮೇಧ!

ಪ್ರಶಾಂತ ಸೌಂದರ್ಯದ ಗುಡ್ಡಗಾಡು ಈಶಾನ್ಯ ರಾಜ್ಯ ಮಣಿಪುರವು ರಣಭೂಮಿಯಾಗಿದೆ. ಮಣಿಪುರದ ಮೈತಿ ಮತ್ತು ಕುಕಿ ಎಂಬ ಎರಡು ಪ್ರಮುಖ ಸಮುದಾಯಗಳು ಭ್ರಾತೃಹಂತಕ ಯಾದವೀ ಕಲಹದಲ್ಲಿ ತೊಡಗಿದ್ದರಿಂದ ಇಡೀ ರಾಜ್ಯವು ರಕ್ತಪಾತದಲ್ಲಿ ಮುಳುಗಿದೆ. 250ಕ್ಕೂ ಹೆಚ್ಚು ಅಮೂಲ್ಯ ಜೀವಗಳು ಬಲಿಯಾಗಿವೆ ಎಂದು ಅಧಿಕೃತ ವರದಿ ಇದೆ. ಆದರೆ, ಆ ಸಂಖ್ಯೆ ಇನ್ನೂ ಹೆಚ್ಚಾಗಿರುವ ಸಾಧ್ಯತೆಯಿದೆ. ಪರಸ್ಪರರ ನಡುವೆ ಯಾವ ಪರಿ ದ್ವೇಷವಿದೆ ಎಂದರೆ, ಎದುರಾಳಿ ಸಮುದಾಯದವರು ಕೈಗೆ ಸಿಕ್ಕರೆ ಸಜೀವ ದಹನವಾಗುತ್ತಾರೆ. ಮೃತದೇಹಗಳನ್ನು ನದಿಯಲ್ಲಿ ಬಿಸಾಡಲಾಗುತ್ತದೆ. ಈ ದ್ವೇಷದ ಬೆಂಕಿ ಪುಟ್ಟ ಕಂದಮ್ಮಗಳನ್ನೂ ಬಿಟ್ಟಿಲ್ಲ. ಪರಿಸ್ಥಿತಿ ಭಯಾನಕವಾಗಿದೆ. ಇಡಿಇಡಿಯಾಗಿ ಹಳ್ಳಿಗಳು ಸುಟ್ಟು ಕರಕಲಾಗಿವೆ. 60 ಸಾವಿರಕ್ಕೂ ಹೆಚ್ಚು ಜನರು ತಮ್ಮದೇ ನೆಲದಲ್ಲಿ ನಿರಾಶ್ರಿತರಾಗಿದ್ದಾರೆ. ಎರಡೂ ಸಮುದಾಯಗಳ ಹತಾಶ ಜನರು, ಸುರಕ್ಷಿತ ನೆಲೆಯ ಹುಡುಕಾಟದಲ್ಲಿದ್ದಾರೆ. "ಮಹಿಳೆಯರು ತೀವ್ರತಮ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ, ಸ್ತನ್ಯಪಾನಕ್ಕೆ ಕೂಡ ಹಾಲನ್ನು ಉತ್ಪಾದಿಸಲು ಆಗದ ಮಟ್ಟದಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ, ನೈರ್ಮಲ್ಯ ಮತ್ತು ಖಾಸಗೀತನದಿಂದ ವಂಚಿತರಾಗಿದ್ದಾರೆ, ಹಿರಿಯ ಮಹಿಳೆಯರಲ್ಲಿ ಮುಟ್ಟಿನ ಸಮಸ್ಯೆಗಳು, ಸರಿಯಾದ ಆಹಾರದ ಕೊರತೆ, ಒತ್ತಡದ ಕಾರಣದಿಂದುಂಟಾದ ನಿದ್ರಾಹೀನತೆ – ಹೀಗೆ ಹತ್ತು ಹಲವಾರು ಸಮಸ್ಯೆಗಳಿಂದ ಅವರು ಯಾತನೆ ಅನುಭವಿಸುತ್ತಿದ್ದಾರೆ' ಎಂದು 'ಅಸ್ಸಾಂ ಟ್ರಿಬ್ಯೂನ್' ವರದಿ ಮಾಡಿತ್ತು. ಎರಡೂ ಸಮುದಾಯಗಳಲ್ಲಿ ಅಪಾರ ಸಾವು–ನೋವುಗಳು ಸಂಭವಿಸಿವೆ.

### ಜನಾಂಗೀಯ ರಕ್ತಪಾತದ ಹಿನ್ನೆಲೆ

ಈ ಘೋರ ರಕ್ತಪಾತವು ತನ್ನಿಂದತಾನೆ ಹುಟ್ಟಿದ್ದೋ ಅಥವಾ ಪೂರ್ವಯೋಜಿತವೋ ಎಂಬುದನ್ನು ಅರಿಯಲು ಹಿನ್ನೆಲೆ ಹಾಗೂ ಐತಿಹಾಸಿಕ ಸಂದರ್ಭಗಳು ಮುಖ್ಯವಾಗುತ್ತವೆ. ಭಾರತ–ಮ್ಯಾನ್ಮಾರ್ ಗಡಿಯಲ್ಲಿರುವ ಮಣಿಪುರ ರಾಜ್ಯವು ಬಹಳ ಪ್ರಾಚೀನ ಇತಿಹಾಸವನ್ನು ಹೊಂದಿದೆ. 1824ರಿಂದ ಮಣಿಪುರವು ಒಂದು ಬ್ರಿಟಿಷ್ ಸಂರಕ್ಷಿತ ರಾಜಪ್ರಭುತ್ವವಾಗಿದ್ದದ್ದು, ನಂತರ, 1891ರಲ್ಲಿ ಬ್ರಿಟಿಷರ ಭಾರತಕ್ಕೆ ರಾಜಪ್ರಭುತ್ವದ ರಾಜ್ಯವಾಗಿ ಅದು ವಿಲೀನವಾಯಿತು. ಈ ಬೆಳವಣಿಗೆಯ ಬಗ್ಗೆ ಮಣಿಪುರಿಗಳ ಮನದಲ್ಲಿ ತೀವ್ರ ಅಸಮಾಧಾನವು ಹೊಗೆಯಾಡುತ್ತಿತ್ತು. ಆ ಸಂದರ್ಭದಲ್ಲಿ, ನಮ್ಮ ಸ್ವಾತಂತ್ರ್ಯ ಚಳುವಳಿಯ ನಾಯಕತ್ವವನ್ನು, ಹಿಂಜರಿಕೆ ಮತ್ತು ರಾಜಿ ಮನೋಭಾವವನ್ನು ತಮ್ಮ ಆಂತರಿಕ ದೌರ್ಬಲ್ಯವಾಗಿ ಹೊಂದಿದ್ದ ಭಾರತೀಯ ರಾಷ್ಟ್ರೀಯ ಬಂಡವಾಳಗಾರರು ಕಬಳಿಸಿದ್ದರು. ದೇಶದ ಶೋಷಿತ ಜನರನ್ನು ಸಮಗ್ರವಾಗಿ ಒಗ್ಗೂಡಿಸಿ ಅವರಲ್ಲಿ ದೃಢವಾದ ಏಕತೆ ಮತ್ತು ಭ್ರಾತೃತ್ವವನ್ನು ಬೆಳೆಸಿ, ಭಾರತೀಯತೆಯ ಭಾವವನ್ನು ಗಟ್ಟಿಯಾಗಿ ಮೂಡಿಸಿ ಸ್ವಾತಂತ್ರ್ಯ ಹೋರಾಟವನ್ನು ರಾಜಿರಹಿತವಾಗಿ ಬೆಳೆಸುವ ಉದ್ದೇಶವನ್ನು ಅವರು ಹೊಂದಿರಲಿಲ್ಲ. ಅಂದು ಅವಿಭಜಿತ ಅಸ್ಸಾಂನಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯ ಚಳುವಳಿಯ ಪ್ರಭಾವ ಕಂಡುಬಂದಿತ್ತಾದರೂ, ದೇಶದ ಪೂರ್ವಭಾಗದ ಮೂಲೆಯಲ್ಲಿ ದೂರದಲ್ಲಿರುವ ಮಣಿಪುರವು ಸ್ವಾತಂತ್ರ್ಯ ಚಳುವಳಿಯ ಮುಖ್ಯವಾಹಿನಿಯಿಂದ ದೂರವೇ ಉಳಿಯಿತು. ರಾಷ್ಟ್ರೀಯ ಚಿಂತನೆಗಳ ಯಾವ ಪ್ರಭಾವವೂ ಇಲ್ಲಿ ಆಗದೆ ಇದ್ದುದರಿಂದ ಪ್ರಾದೇಶಿಕತಾವಾದ, ಕೋಮುವಾದ, ಅನ್ಯೆಕ್ಯತೆಯ ಪ್ರವೃತ್ತಿ ಇತ್ಯಾದಿಗಳನ್ನು ಪ್ರಭಾವಶಾಲಿಯಾಗಿ ಹಿಮ್ಮೆಟ್ಟಿಸಲಾಗಲಿಲ್ಲ. ಹಾಗಾಗಿಯೇ, ಈ ನೆಲದಲ್ಲಿ ಒಡಕು, ಅಪನಂಬಿಕೆ ಪ್ರವೃತ್ತಿಗಳು ಇಂದಿಗೂ ಭದ್ರವಾಗಿ ಬೇರೂರಿವೆ.

ಬ್ರಿಟಿಷ್‌ಪೂರ್ವ ಭಾರತವು ರಾಜಕೀಯವಾಗಿ ಎಂದಿಗೂ ಒಂದು ಸಮಗ್ರ ಘಟಕವಾಗಿರಲಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿ ಅವಿಭಜಿತ ಭಾರತೀಯ ಭೂಪ್ರದೇಶದಾದ್ಯಂತ ಜನರು ಉತ್ಪಾದಿಸುವ ವಿವಿಧ ಸರಕುಗಳ ವ್ಯಾಪಾರ ಮತ್ತು ವಾಣಿಜ್ಯದ ವಹಿವಾಟಿಗೆ ರಾಷ್ಟ್ರೀಯ ಮಾರುಕಟ್ಟೆಯು ನಿರ್ಮಾಣವಾಗಿ, ಪ್ರಬಲವಾದ ಸಂವಹನ ಜಾಲವು ಅಭಿವೃದ್ಧಿಗೊಂಡ ನಂತರ 'ಭಾರತೀಯ ರಾಷ್ಟ್ರೀಯತೆ' ಎಂಬ ಪ್ರಜ್ಞೆಯು ಜನರಲ್ಲಿ ಬೇರೂರಲು ಸಾಧ್ಯವಾಯಿತು. ಆಧುನಿಕ ರಾಷ್ಟ್ರಗಳ ಹುಟ್ಟು ಮತ್ತು ಬೆಳವಣಿಗೆಯ ಪರಿಕಲ್ಪನೆಯಲ್ಲಿ ಅಡಕವಾಗಿರುವ ರಾಜಿರಹಿತ ಮನೋಭಾವದಿಂದ ನಮ್ಮ ಸ್ವಾತಂತ್ರ್ಯ ಹೋರಾಟವೂ ಸಹ ಹೊರಹೊಮ್ಮಲು ಸಾಧ್ಯವಾಗಿದ್ದಿದ್ದರೆ ರಾಷ್ಟ್ರೀಯತೆಯ ಭಾವವು ಭಾರತೀಯರಲ್ಲಿ ಅಂತರ್ಗತ ಭಾವನೆಯಾಗಿ ಅರಳುತ್ತಿತ್ತು. ಆದರೆ, ಭಾರತವು ಒಂದು ರಾಷ್ಟ್ರವಾಗಿ ರಚನೆಯಾಗುವ ಪ್ರಕ್ರಿಯೆಯು ಆರಂಭವಾದ 19ನೇ ಶತಮಾನದ ಉತ್ತರಾರ್ಧದ ಕಾಲಕ್ಕೆ, ಬಂಡವಾಳವಾದವು ವಿಶ್ವದಾದ್ಯಂತ ತನ್ನ ಕ್ರಾಂತಿಕಾರಿ ಗುಣವನ್ನು ಕಳೆದುಕೊಂಡು ಪ್ರತಿಕ್ರಾಂತಿ ಗುಣವನ್ನು ಮೈಗೂಡಿಸಿಕೊಂಡಿತ್ತು. ಭಾರತೀಯ ಬಂಡವಾಳವಾದವು, ಒಂದೆಡೆ ವಿದೇಶಿ ಹಣಕಾಸು ಬಂಡವಾಳದ ಪ್ರಾಬಲ್ಯದ ನೆರಳಿನಲ್ಲಿತ್ತು. ಅದರ ಜೊತೆಯಲ್ಲಿಯೇ, ಅದು ತನ್ನ ಸುತ್ತ ಹರಡಿಕೊಂಡಿದ್ದ ಹಳತಾದ ಊಳಿಗಮಾನ್ಯ ಸಂಬಂಧಗಳ ಪ್ರಭಾವದಡಿಯಲ್ಲಿಯೂ ಇತ್ತು. ಅವರೆಡರ ವಿರುದ್ಧ ಭಾರತೀಯ ಬಂಡವಾಳವಾದವು ರಾಜಿರಹಿತವಾಗಿ ಹೋರಾಡಲಿಲ್ಲ. ತತ್ಪರಿಣಾಮವಾಗಿ, ಇಲ್ಲಿ ಬಂಡವಾಳವಾದದ ಬೆಳವಣಿಗೆಯು ವಿರೂಪಗೊಂಡು ಕುಬ್ಜವಾಗಿತ್ತು. ಭಾರತೀಯ ಬೂರ್ಜ್ವಾ(ಬಂಡವಾಳಶಾಹಿ) ವರ್ಗದ ರಾಷ್ಟ್ರೀಯತಾವಾದಿ ಬಣವು ಸ್ವಾಭಾವಿಕವಾಗಿಯೇ ಸಾಮ್ರಾಜ್ಯಶಾಹಿಯ ವಿರುದ್ಧ ಚಳುವಳಿಗೆ ಪ್ರಚೋದಿಸಲ್ಪಟ್ಟಿತು; ಏಕೆಂದರೆ, ಸಾಮ್ರಾಜ್ಯಶಾಹಿ ಆಡಳಿತವು ನಮ್ಮ ದೇಶದಲ್ಲಿ ತನ್ನ ವರ್ಗದ ಆಳ್ವಿಕೆಯನ್ನು ಸ್ಥಾಪಿಸುವ ಮತ್ತು ಭಾರತೀಯರನ್ನು ಮುಕ್ತವಾಗಿ ಶೋಷಿಸುವ ಹಾದಿಯಲ್ಲಿ ಅದಕ್ಕೊಂದು ದುಸ್ತರ ಅಡಚಣೆಯಾಗಿ ನಿಂತಿತ್ತು. ಆದರೆ, ಈ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವು ರಾಜಿರಹಿತವಾಗಿ, ಕ್ರಾಂತಿಕಾರಿ ಪಂಥದಲ್ಲಿ ಮುನ್ನಡೆದರೆ, ಅದು ಬ್ರಿಟಿಷರನ್ನು ಮಾತ್ರವಲ್ಲದೆ, ದೇಶದ ಬಂಡವಾಳಶಾಹಿಗಳ ವಿರುದ್ಧವೂ ಹೋಗುವ ಮಾರಣಾಂತಿಕ ಆತಂಕವನ್ನೂ ಅದು ಹೊಂದಿತ್ತು.

ಹಾಗಾಗಿ, ಭಾರತೀಯ ಬಂಡವಾಳವಾದವು, ಒಂದೆಡೆ ಸಾಮ್ರಾಜ್ಯವಾದದೊಂದಿಗೆ ಮತ್ತು ಇನ್ನೊಂದೆಡೆ ಊಳಿಗಮಾನ್ಯ ಪದ್ಧತಿಯೊಂದಿಗೆ ಇಬ್ಬಗೆಯ ಹೊಂದಾಣಿಕೆಗಳ ಮಾಡಿಕೊಂಡು, ಆ ಮೂಲಕ ಅಭಿವೃದ್ಧಿ ಹೊಂದಲು ಪ್ರಯತ್ನಿಸಿತು. ಊಳಿಗಮಾನ್ಯ ಪದ್ಧತಿಯೊಂದಿಗಿನ ಹೊಂದಾಣಿಕೆಯಿಂದಾಗಿ ರಾಷ್ಟ್ರೀಯತಾ ಭಾವನೆಗಳಾದ ಜನತಾಂತ್ರಿಕ ಮೌಲ್ಯಗಳು, ಸಮಾನತೆ, ಧರ್ಮನಿರಪೇಕ್ಷತೆ ಇತ್ಯಾದಿ ಅಂಶಗಳು ಬಹು ಭಾಷೆಯ, ಬಹು ಧರ್ಮದ ಮತ್ತು ಬಹು ಜಾತಿಯ ಜನರಿರುವ ಈ ಸಮಾಜದ ಮನೋಭೂಮಿಕೆಯಲ್ಲಿ ಒಡಮೂಡಲಿಲ್ಲ. ಆದ್ದರಿಂದ, ನಮ್ಮ ಸ್ವಾತಂತ್ರ್ಯ ಹೋರಾಟವು ಅರೆಬೆಂದ ಮತ್ತು ಮೊಟಕಾದ ರೀತಿಯಲ್ಲಿ ಪರ್ಯಾವಸಾನವಾಯಿತು. ಸಾಮಾಜಿಕ–ಸಾಂಸ್ಕೃತಿಕ ವಿಭಜನೆ ನಿರ್ಮೂಲನೆಯಾಗದೆ ಉಳಿದವು. ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಯ ಈ ವಿಶಿಷ್ಟವಾದ ಸ್ವರೂಪವನ್ನು ವಿವರಿಸುತ್ತಾ, ನಮ್ಮ ಪಕ್ಷ ಎಸ್‌ಯುಸಿಐ(ಕಮ್ಯೂನಿಸ್ಟ್)ನ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಮತ್ತು ಈ ಯುಗದ ಮಹೋನ್ನತ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್, "ಸಾಮ್ರಾಜ್ಯವಾದದ ವಿರುದ್ಧದ ರಾಜಕೀಯ ಚಳುವಳಿಯ ಸಂದರ್ಭದಲ್ಲಿ, ವಿವಿಧ ಧರ್ಮ, ಭಾಷೆಗಳ ಜನರು ರಾಜಕೀಯವಾಗಿ ಒಂದು ದೇಶವಾಗಿದ್ದರು. ಆದರೆ, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಧರ್ಮ, ಜಾತಿ, ಭಾಷೆ, ಜನಾಂಗ ಇತ್ಯಾದಿ ಅಂಶಗಳಿಂದ ಹರಿದು ಹಂಚಿಹೋಗಿದ್ದರು" ಎಂದು ವಿವರಿಸಿದರು. ಒಮ್ಮೆ ಅಧಿಕಾರಕ್ಕೆ ಬಂದ ನಂತರ, ದೇಶದಲ್ಲಿ ಚಾಲ್ತಿಯಲ್ಲಿರುವ ಸಾಮಾಜಿಕ–ಸಾಂಸ್ಕೃತಿಕ–ಧಾರ್ಮಿಕ ಒಡಕಿನ ಲಾಭವನ್ನು ಪಡೆದುಕೊಂಡು ಆಡಳಿತಾರೂಢ ರಾಷ್ಟ್ರೀಯ ಬೂರ್ಜ್ವಾಜಿಗಳು ಶೋಷಿತ ಜನರನ್ನು ಇನ್ನಷ್ಟು ವಿಭಜಿಸಿ ಅವರ ನಡುವಿನ ಕಂದರಗಳು ಇನ್ನೂ ಆಳವಾಗುವಂತೆ ಮಾಡಿದರು.

### ಎಡ–ಜನತಾಂತ್ರಿಕ ಚಳುವಳಿಗಳ ಅನುಪಸ್ಥಿತಿ

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ, ಬಂಡವಾಳಶಾಹಿ ವರ್ಗ ಮತ್ತು ಅದರ ಬಾಲಬಡುಕರ ವಿರುದ್ಧ ಎಡ–ಜನತಾಂತ್ರಿಕ ಚಳುವಳಿಯು ನಿರಂತರವಾಗಿ ಮತ್ತು ಗಟ್ಟಿಯಾಗಿ ನಡೆದಿದ್ದೇ ಆಗಿದ್ದರೆ, ಜನರ ನಡುವಿನ ಒಡಕನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸಬಹುದಾಗಿತ್ತು. ಆದರೆ, ನಕಲಿ ಮಾರ್ಕ್ಸ್‌ವಾದಿಗಳಾದ ಸಿಪಿಐ, ಸಿಪಿಐ(ಎಂ)ಗಳು ಈ ದಿಕ್ಕಿನಲ್ಲಿ ಯಾವುದೇ ಪ್ರಯತ್ನವನ್ನು ದೃಢವಾಗಿ ಮಾಡದೆ ಇದ್ದುದರಿಂದ, ಇಂತಹ ಅಗತ್ಯವನ್ನು ಪೂರೈಸಲು ಇಡೀ ದೇಶದಲ್ಲಿ ಆಗಲಿಲ್ಲ ಹಾಗೂ ವಿಶೇಷವಾಗಿ ಇದು ದೇಶದ ಈಶಾನ್ಯ ಭಾಗದಲ್ಲಿ ನಡೆಯಲೇ ಇಲ್ಲ. ಬದಲಿಗೆ, ಆ ಪಕ್ಷಗಳು ಆಳುವ ಬೂರ್ಜ್ವಾಜಿಯನ್ನು ನಿಷ್ಠುರವಾಗಿ ವಿರೋಧಿಸದೇ, ಅದರ ವಿಶ್ವಾಸಾರ್ಹ ಪ್ರತಿನಿಧಿಯಾದ ಕಾಂಗ್ರೆಸ್ ಸರ್ಕಾರಗಳು ಜಾರಿಗೆ ತಂದ ಅನೇಕ ಬಂಡವಾಳಶಾಹಿ ನೀತಿಗಳು ಮತ್ತು ಜನವಿರೋಧಿ ಕ್ರಮಗಳಿಗೆ ಬೆಂಬಲವನ್ನು ನೀಡಿದವು. ಈಗಂತೂ ಈ ಹುಸಿ ಮಾರ್ಕ್ಸ್‌ವಾದಿಗಳು ಜನರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅತ್ಯಗತ್ಯವಾಗಿರುವ ಪ್ರಬಲ ಜನತಾಂತ್ರಿಕ ಹೋರಾಟಗಳನ್ನು ಸಂಘಟಿಸುವ ಎಡಪಂಥೀಯ ಮಾರ್ಗವನ್ನು ಬದಿಗಿಟ್ಟು, ಚುನಾವಣಾ ರಾಜಕಾರಣದ ಬೆನ್ನುಬಿದ್ದಿದ್ದಾರೆ.

### ಭಾರತಕ್ಕೆ ಮಣಿಪುರದ ಸೇರ್ಪಡೆ

1947ರಲ್ಲಿ ಭಾರತವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಾಗ, ಅವಿಭಜಿತ ಬ್ರಿಟಿಷ್ ಭಾರತದಲ್ಲಿ ವಿವಿಧ ಗಾತ್ರದ ಸುಮಾರು 600 ರಾಜಪ್ರಭುತ್ವಗಳು ಅಸ್ತಿತ್ವದಲ್ಲಿದ್ದವು. ಆಗ, ಬ್ರಿಟಿಷರು ಮೂರು ಆಯ್ಕೆಗಳನ್ನು ಆ ರಾಜಪ್ರಭುತ್ವಗಳ ಮುಂದಿಟ್ಟರು: 1) ಭಾರತದೊಂದಿಗೆ ವಿಲೀನವಾಗುವುದು, 2) ಪಾಕಿಸ್ತಾನದೊಂದಿಗೆ ವಿಲೀನವಾಗುವುದು ಅಥವಾ 3) ಸ್ವತಂತ್ರವಾಗಿ ಉಳಿಯುವುದು. ಅನೇಕ ಪ್ರಭುತ್ವಗಳು ಭಾರತ ಮತ್ತು ಪಾಕಿಸ್ತಾನಗಳಿಗೆ ಸೇರಿದವು. ಮಣಿಪುರದಂತಹ ಕೆಲವು ಇತರ ರಾಜ್ಯಗಳು ಸ್ವತಂತ್ರ ರಾಜ್ಯಗಳಾಗಿ ಮುಂದುವರಿಯಲು ಬಯಸಿದವು. ಆದರೆ, ನಂತರ ಕೆಲವು ರಾಜ್ಯಗಳಂತೆ ಮಣಿಪುರವನ್ನು ಬಲಪ್ರಯೋಗದ ಮೂಲಕ ಭಾರತ ಒಕ್ಕೂಟಕ್ಕೆ ವಿಲೀನಗೊಳಿಸಿಕೊಳ್ಳಲಾಯಿತು. ಈ ಬಲವಂತದ ಸೇರ್ಪಡೆಯು ಅಲ್ಲಿನ ಜನರ ತೀವ್ರ ಅಸಮಾಧಾನಕ್ಕೆ ಕಾರಣವಾಗಿತ್ತು. ಅದು ಮುಂದೆ, ಸಶಸ್ತ್ರ ಪ್ರತಿರೋಧದ ರೂಪವನ್ನೂ ಪಡೆಯಿತು. ಈ ಪ್ರತಿರೋಧವನ್ನು ಭಾರತ ಸರ್ಕಾರವು ಸೇನಾ ನಿಯೋಜನೆಯ ಮೂಲಕ ಹತ್ತಿಕ್ಕಿತು. ಒತ್ತಡದಡಿಯಲ್ಲಿ ಮಣಿಪುರವು 1949ರಲ್ಲಿ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

### ಮಣಿಪುರ ವಿವಿಧ ಸಮುದಾಯಗಳ ನೆಲೆ

ಶೇ.53ರಷ್ಟಿರುವ ಮೈತಿ ಸಮುದಾಯವು ಮಣಿಪುರದಲ್ಲಿ ಪ್ರಬಲ ಜನಾಂಗವಾಗಿದೆ. ನಾಗಾ, ಕುಕಿ ಮತ್ತು ಇತರ ಬುಡಕಟ್ಟುಗಳು ವಾಸಿಸುವ ಬೆಟ್ಟಗುಡ್ಡಗಳಿಂದ ಸುತ್ತುವರೆದಿರುವ ಇಂಫಾಲ್ ಕಣಿವೆ ಪ್ರದೇಶದಲ್ಲಿ ಈ ಸಮುದಾಯವು ನೆಲೆಸಿದೆ. ಸ್ವಾತಂತ್ರ್ಯಪೂರ್ವದ ದಿನಗಳಿಂದಲೂ ಜನಾಂಗೀಯ ಸಂಘರ್ಷಗಳು ಇಲ್ಲಿ ಸರ್ವೇಸಾಮಾನ್ಯವಾಗಿವೆ. ಸ್ವಾತಂತ್ರ್ಯಾನಂತರವೂ ಆಳುವ ವರ್ಗಕ್ಕೆ ಮತ್ತು ಅದರ ಪಕ್ಷಗಳಿಗೆ ಸೇರಿದ ಪ್ರತಿಗಾಮಿಗಳ ಪ್ರಚೋದನೆಗೆ ಒಳಗಾಗಿ ಮೈತಿ, ನಾಗಾ ಮತ್ತು ಕುಕಿ ಜನಾಂಗಗಳ ನಡುವೆ ರಕ್ತಸಿಕ್ತ ಸಂಘರ್ಷಗಳು ನಡೆದು ಸಾವಿರಾರು ಜನರು ಬಲಿಯಾಗಿದ್ದಾರೆ. ಇಲ್ಲಿನ ರಾಜಕೀಯ ಪಕ್ಷಗಳು ಬಂಡವಾಳಗಾರರ ಹಿತಾಸಕ್ತಿಯನ್ನು ಕಾಯಲು ಜಾತಿ, ಜನಾಂಗ, ಬುಡಕಟ್ಟುಗಳ ನಡುವಿನ ವಿರಸದ ಬೆಂಕಿಗೆ ತುಪ್ಪ ಸುರಿದಿವೆ ಮತ್ತು ಈಗಲೂ ಸುರಿಯುತ್ತಿವೆ. ರಾಜ್ಯವನ್ನು ಹಿಂದೆ ಆಳಿದ್ದ ಕಾಂಗ್ರೆಸ್ ಸರ್ಕಾರಗಳು ಮತ್ತು ಈಗ ಗದ್ದುಗೆಯಲ್ಲಿ ಕುಳಿತಿರುವ ಬಿಜೆಪಿಯ ಬೆಂಬಲವನ್ನು ಹೊಂದಿರುವ ಪ್ರಬಲ ಮೈತಿ ಜನಾಂಗೀಯವಾದಿಗಳು ವಿವಿಧ ಸಮುದಾಯಗಳು, ಬುಡಕಟ್ಟುಗಳು ಮತ್ತು ಬುಡಕಟ್ಟು ಜನಾಂಗದವರ ನಡುವಿನ ಐಕ್ಯತೆಗೆ ಬಹುದೊಡ್ಡ ಅಪಾಯವನ್ನುಂಟು ಮಾಡುತ್ತಿದ್ದಾರೆ. 'ವಾಸ್ತವವಾಗಿ ಕುಕಿಗಳು ಮಣಿಪುರದ ಮೂಲ ನಿವಾಸಿಗಳಲ್ಲ, ಅವರು ಮ್ಯಾನ್ಮಾರ್‌ನಿಂದ ಕಣ್ತಪ್ಪಿಸಿ ಬಂದಿರುವ ನುಸುಳುಕೋರರು' ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಜೊತೆಗೆ, ಮುಂದೊಂದು ದಿನ ಮೈತಿಗಳೇ ಅಲ್ಪಸಂಖ್ಯಾತರಾಗಿ ಬಿಡುತ್ತಾರೆ ಎಂದೂ ಸಹ ಊಹಾಪೋಹಗಳನ್ನು ನಿರಂತರವಾಗಿ ಹರಡಲಾಗುತ್ತಿದೆ.

### ಅಸ್ಸಾಂನ ಭಯಾನಕ ಉದಾಹರಣೆಯ ಪುನರಾವರ್ತನೆ

ಈಶಾನ್ಯ ಭಾರತದ ಮತ್ತೊಂದು ರಾಜ್ಯವಾದ ಅಸ್ಸಾಂನಲ್ಲಿಯೂ ಕೋಮುವಾದಿ–ಜನಾಂಗೀಯವಾದಿ ಶಕ್ತಿಗಳು 'ಅಸ್ಸಾಮಿಗಳು ಶೀಘ್ರದಲ್ಲೇ ಭಾರತೀಯರಲ್ಲದ ಮುಸಲ್ಮಾನ ನುಸುಳುಕೋರ ವಲಸಿಗರಿಂದ ನಿರ್ನಾಮವಾಗುತ್ತಾರೆ' ಎಂದು ಈ ಹಿಂದೆ ಹುಯಿಲೆಬ್ಬಿಸಿದವು. ಕಾಂಗ್ರೆಸ್, ಬಿಜೆಪಿ ಮತ್ತು ಪ್ರಾದೇಶಿಕ ಜನಾಂಗೀಯವಾದಿ ಪಕ್ಷಗಳ ಬೆಂಬಲಿತ ಶಕ್ತಿಗಳು ಅಸ್ಸಾಮಿ ಭಾಷೆಯ ಜನರ ಮತಬ್ಯಾಂಕ್‌ನ್ನು ಗಟ್ಟಿಗೊಳಿಸಿಕೊಳ್ಳಲು, ಅವರನ್ನು, ಬಂಗಾಳಿ ಭಾಷೆಯ ಮುಸಲ್ಮಾನರ ವಿರುದ್ಧ ಎತ್ತಿಕಟ್ಟಿದವು. ಆಗ ಮತ್ತೆಮತ್ತೆ ನಡೆದ ಜನಾಂಗೀಯ ಕಲಹದಲ್ಲಿ ಕೋಮುವಾದಿ ಮತಾಂಧರು ಅಸ್ಸಾಂನ ಚಹ ತೋಟಗಳಲ್ಲಿ ದುಡಿಯಲು ಅಕ್ಕಪಕ್ಕದ ರಾಜ್ಯಗಳಿಂದ ಬಂದು ತಲೆತಲಾಂತರಗಳಿಂದ ನೆಲೆಸಿ, ಆ ನೆಲದವರೇ ಆಗಿಹೋಗಿದ್ದ, ಸಾವಿರಾರು ಅಮಾಯಕ ಮುಸಲ್ಮಾನರನ್ನು ಹತ್ಯೆಗೈದರು, ಅವರ ಆಸ್ತಿಪಾಸ್ತಿಗಳನ್ನು ಧ್ವಂಸ ಮಾಡಿದರು. ಮೀಸಲಾತಿಗೆ ಸಂಬಂಧಿಸಿದಂತೆ ಸೃಷ್ಟಿಯಾದ ವಿವಾದದಿಂದ ಇಂದು ಅಂತಹುದೇ ದಾವಾಗ್ನಿಯಲ್ಲಿ ಮಣಿಪುರವು ಬೇಯುತ್ತಿದೆ. ಇಡೀ ಕುಕಿ ಸಮುದಾಯಕ್ಕೆ 'ಅವರು ಅತಿಕ್ರಮಣಕಾರರು' ಎಂದು ಹಣೆಪಟ್ಟಿಯನ್ನು ಕಟ್ಟಿದ್ದಾರೆ. ಮೈತಿ ಮತ್ತು ಕುಕಿ ಸಮುದಾಯಗಳು ಈ ಕುತ್ಸಿತ ರಾಜಕಾರಣಕ್ಕೆ ಬಲಿಯಾಗಿವೆ.

ಆರ್ಥಿಕ ಸಂಕಷ್ಟಗಳ ವಿರುದ್ಧ ಮಣಿಪುರದ ಎಲ್ಲಾ ಸಮುದಾಯಗಳಲ್ಲಿ ತೀವ್ರ ಅಸಮಾಧಾನವು ಇಂದು ಮಡುಗಟ್ಟಿದೆ. ಅಲ್ಲಿ, ಸ್ಥಳೀಯವಾಗಿ ಲಭ್ಯವಿರುವ ಕಚ್ಚಾವಸ್ತು, ಖನಿಜ ಸಂಪತ್ತನ್ನು ಬಳಸಿಕೊಂಡು ಸಣ್ಣ, ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ರಾಜ್ಯದ ಆರ್ಥಿಕತೆಯನ್ನು ಮೇಲಕ್ಕೆತ್ತಲು ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಆಳಿದ ಯಾವುದೇ ಬೂರ್ಜ್ವಾ ಸರ್ಕಾರಗಳು ಕೈಗೊಂಡಿಲ್ಲ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮನಸ್ಸು ಮಾಡಿದರೆ, ಅತ್ಯಂತ ಸುಲಭವಾಗಿ ಈ ರಕ್ತಪಾತವನ್ನು ತಡೆಗಟ್ಟಬಹುದು. ವಾಸ್ತವವೇನೆಂದರೆ, ರಾಜ್ಯ ಬಿಜೆಪಿ ಸರ್ಕಾರವು ಮೈತಿ ಸಮುದಾಯದ ಪ್ರಾಬಲ್ಯವಿರುವ ಪ್ರದೇಶಗಳ ಜನಾಂಗೀಯವಾದಿ ಮತ್ತು ಪುಂಡು ಪಡೆಗಳ ಜೊತೆಯಲ್ಲಿ ಶಾಮೀಲಾಗಿದೆ. ಕುಕಿ ನಿಯಂತ್ರಿತ ಪ್ರದೇಶಗಳಲ್ಲಿರುವ ಜನಾಂಗೀಯವಾದಿ ಶಕ್ತಿಗಳು ಹಾಗೂ ಪ್ರತ್ಯೇಕತಾವಾದಿಗಳು ಇತರ ಬೂರ್ಜ್ವಾ ಪಕ್ಷಗಳಿಂದ ಬೆಂಬಲವನ್ನು ಪಡೆದಿವೆ. ಆದರೆ, ಎರಡೂ ಸಮುದಾಯಗಳಿಗೆ ಸೇರಿರುವ ಸಾಮಾನ್ಯ ಮಣಿಪುರಿಗಳು ಮತ್ತು ಇಡೀ ದೇಶದ ಜನತೆ ಈ ಭ್ರಾತೃಹಂತಕ ನರಮೇಧವು 11ನೇ ಪುಟಕ್ಕೆ

## ಕೇಂದ್ರ ಬಜೆಟ್–2025:

# ಮತ್ತೊಮ್ಮೆ ಜನರಿಗೆ ವಂಚನೆ!

ಇತ್ತೀಚೆಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್–2025 ಜನರ ಆಶೋತ್ತರಗಳನ್ನು ಈಡೇರಿಸುವ, ಆರ್ಥಿಕ ಒಳನೋಟವನ್ನು ಒಳಗೊಂಡಿದೆಯೇ ಎಂದು ತಡಕಾಡಿದರೆ ನಿರಾಸೆ ಕಟ್ಟಿಟ್ಟ ಬುತ್ತಿ. ಪ್ರತಿ ವರ್ಷವೂ ಹೇಳಿದ ಮಾತುಗಳನ್ನೇ ವಿಭಿನ್ನವಾಗಿ ಹೇಳುವ ಕಲೆಯನ್ನು ಹಣಕಾಸು ಸಚಿವರು ಕರತಲಾಮಲಕ ಮಾಡಿಕೊಂಡಿದ್ದಾರೆ.

ಬೆಲೆ ಏರಿಕೆಯ ಮಾಫಿಯಾವನ್ನು ನಿಗ್ರಹಿಸುವ ಮೂಲಕ ಜನತೆಗೆ ಬೆಲೆ ಏರಿಕೆಯಿಂದ ನಿರಾಳವನ್ನು ಕೊಡುವ ಯಾವುದಾದರೂ ಅಂಶಗಳಿವೆಯೇ? ದಿನೇದಿನೇ ಬೃಹದಾಕಾರವಾಗಿ ಬೆಳೆಯುತ್ತಿರುವ ನಿರುದ್ಯೋಗವನ್ನು ತಡೆಯುವ ಸ್ಪಷ್ಟ ಕಾರ್ಯಸೂಚಿಗಳಿವೆಯೇ? ಬಹುತೇಕ ಉಚಿತವಾಗಿ ಅಥವಾ ಜನರ ಕೈಗೆಟಕುವ ಬೆಲೆಯಲ್ಲಿ ಆರೋಗ್ಯ ಸೇವೆ ಹಾಗೂ ಶಿಕ್ಷಣವನ್ನು ನೀಡುವ ಕ್ರಮಗಳನ್ನು ಘೋಷಿಸಲಾಗಿದೆಯೇ? ರೈತರು ಬೆಳೆದ ಉತ್ಪನ್ನಗಳಿಗೆ ಸ್ವಾಮಿನಾಥನ್ ಆಯೋಗವು ಶಿಫಾರಸು ಮಾಡಿದಂತೆ ಬೆಲೆ ನಿಗದಿ ಮಾಡುವ ಘೋಷಣೆಗಳಿವೆಯೇ? – ಉಹ್ಞೂಂ! ಇಲ್ಲ!

2006ರಲ್ಲಿ ಎಂ.ಎಸ್.ಸ್ವಾಮಿನಾಥನ್ ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಬೆಂಬಲ ಬೆಲೆ ನಿಗದಿ ಮಾಡುವ ಅಗತ್ಯವಿದೆ ಎಂದು ಮಾಡಿದ್ದ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರುವುದಾಗಿ 2014ರಲ್ಲಿ ಮೋದಿ ಸರ್ಕಾರ ಘೋಷಣೆ ಹೊರಡಿಸಿತ್ತು. ಇದೇ ಬೇಡಿಕೆಯನ್ನು ಮುಂದಿಟ್ಟುಕೊಂಡು ದೇಶದ ವಿವಿಧೆಡೆಗಳಿಂದ ಬಂದಿದ್ದ ಲಕ್ಷಾಂತರ ರೈತರು ಒಂದು ವರ್ಷ ಕಾಲ ದೆಹಲಿಯ ಗಡಿಗಳಲ್ಲಿ ದೊಡ್ಡ ಹರತಾಳ ನಡೆಸಿದ್ದರು. ಅದನ್ನು ಈಡೇರಿಸುವುದಾಗಿ ಒಪ್ಪಿಕೊಂಡಿದ್ದ ಸರ್ಕಾರ ಇದುವರೆಗೂ ಆ ಬಗ್ಗೆ ಚಕಾರ ಎತ್ತಿಲ್ಲ. ಕನಿಷ್ಠ ಬೆಂಬಲ ಬೆಲೆ ಬಿಡಿ, ಜಿಡಿಪಿ ದರ ಭಾರಿ ಏರಿಕೆಯನ್ನು ಕಂಡಿದೆ ಎಂಬ ಮಾತನ್ನು ಆಲಿಸಿ, ಸಂಭ್ರಮಿಸುತ್ತಾ ಸಂಸತ್ತಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಮೇಜು ಕುಟ್ಟಿ ಖುಷಿಪಡುತ್ತಿದ್ದುದೂ ಈ ಬಾರಿ ಇಲ್ಲವಾಗಿದೆ. ಸುಭದ್ರ ಮೋದಿ ಸರ್ಕಾರವು ಮುನ್ನಡೆಸುತ್ತಿರುವ 'ವಿಕಸಿತ ಭಾರತದ ಕಲ್ಪನೆಯ' ಆಯಾಮಗಳೆಂದು ಸರ್ಕಾರವು ಬಣ್ಣಿಸುವುದೇನೆಂದರೆ, 1) ಬಡತನದ ನಿರ್ಮೂಲನೆ, 2) ಮಕ್ಕಳಿಗೆ ಶೇ.100ರಷ್ಟು ಗುಣಮಟ್ಟದ ಶಾಲಾ ಶಿಕ್ಷಣ, 3) ಅತ್ಯುತ್ತಮ ಗುಣಮಟ್ಟದ, ಕೈಗೆಟಕುವ ಹಾಗೂ ಸಮಗ್ರ ಆರೋಗ್ಯ ಸೇವೆ, 4) ನಿಗದಿತ ಹುದ್ದೆಗಳಿಗೆ ಶೇ.100ರಷ್ಟು ಕೌಶಲ್ಯಯುತ ಕಾರ್ಮಿಕರ ನೇಮಕ, 5) ಆರ್ಥಿಕ ಚಟುವಟಿಕೆಗಳಲ್ಲಿ ಶೇ.70ರಷ್ಟು ಮಹಿಳಾ ಸಹಭಾಗಿತ್ವ, 6) ಭಾರತವನ್ನು ವಿಶ್ವದ ಆಹಾರದ ಬಟ್ಟಲನ್ನಾಗಿ ಮಾಡುವ ಸಂತೃಪ್ತ ರೈತ ಸಮುದಾಯ – ಇವೆಲ್ಲಾ ಕಿವಿಯ ಮೇಲೆ ಬಿದ್ದಾಗ ಎಷ್ಟೊಂದು ಇಂಪು ಎನಿಸುತ್ತದೆಯಲ್ಲವೇ! ಆದರೆ, ಬಜೆಟ್ ಭಾಷಣದ ಈ ಮಾತುಗಳು ಪುಸ್ತಕವೊಂದರ ಹೊರಪುಟವಷ್ಟೇ. ಪುಸ್ತಕವನ್ನು ತಿರುವಿ ಒಳಪುಟಗಳನ್ನು ತೆರೆದು ನೋಡಿದಾಗ ಎಲ್ಲವೂ ಖಾಲಿಖಾಲಿ ಎನ್ನುವ ಕಠೋರ ವಾಸ್ತವ ಕಣ್ಣಿಗೆ ರಾಚುತ್ತದೆ.

### ಹೆಚ್ಚುತ್ತಿರುವ ಸಾಲ, ಕಾರ್ಪೊರೇಟ್ ಸಂಸ್ಥೆಗಳ ಭಾರಿ ಲಾಭ, ಹಣದುಬ್ಬರದ ಏರಿಕೆ

ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದ ದಿನದಿಂದಲೂ ತಂತ್ರವೊಂದನ್ನು ಬಳಸಿ ಯಶಸ್ವಿಯಾಗಿದೆ. ಅದರ ಭಾಗವಾಗಿ, ಜನಕಲ್ಯಾಣಕ್ಕೆ ಬೇಕಾಗುವ ವೆಚ್ಚವನ್ನು ತಗ್ಗಿಸುವುದು, ಸರ್ಕಾರದ ಸಾಲವನ್ನು ಏರಿಸುವುದು, ಕಾರ್ಪೊರೇಟ್ ಲಾಭಗಳಿಕೆಗೆ ಇಂಬು ನೀಡುವುದು – ಇವು ನಿರಂತರವಾಗಿ ನಡೆಯುತ್ತಿವೆ. ತತ್ಪರಿಣಾಮವಾಗಿ, ಹಣದುಬ್ಬರವು ಏರುತ್ತಲೇ ಸಾಗಿದೆ. ತಂತ್ರದ ಇನ್ನೊಂದು ಭಾಗವಾಗಿ, ಸರ್ಕಾರವು ಬಜೆಟ್ ಭಾಷಣದಲ್ಲಿ ಯಾವುದೇ ಅಂಕಿ ಅಂಶಗಳನ್ನು ನೀಡದೇ ಸತ್ಯವನ್ನು ಮರೆಮಾಚುತ್ತದೆ. ಸಾಮಾನ್ಯ ಜನರ ಕೈಗೆ ಸಿಗದಂತಹ ಅನುಬಂಧಗಳಲ್ಲಿ ಅಂಕಿ ಅಂಶಗಳನ್ನು ಅದು ಹುದುಗಿಸಿಡುತ್ತಿದೆ. ದೋಷಪೂರಿತವಾದ, ಹಾದಿ ತಪ್ಪಿಸುವಂತಹ ಅಂಕಿ ಅಂಶಗಳು, ಲೆಕ್ಕ ಹಾಕಲು ಬಾರದಂತೆ ಅಂಕಿ ಸಂಖ್ಯೆಗಳನ್ನು ಒದಗಿಸುತ್ತಿದೆ. ಈ ಸರ್ಕಾರದ ಪಾರದರ್ಶಕ ಬಜೆಟ್ ಮಂಡನೆಯ ಪರಿ ಇದು!

ಪ್ರಸಕ್ತ ಬಜೆಟ್‌ನಲ್ಲಿ ಸರ್ಕಾರದ ವೆಚ್ಚವನ್ನು ರೂ.1,04,025 ಕೋಟಿಯಷ್ಟು ಕಡಿತ ಮಾಡಲಾಗಿದೆ. ಅದರ ಪೈಕಿ ಬಂಡವಾಳ ವೆಚ್ಚವು ರೂ.92,682 ಕೋಟಿ ಕಡಿಮೆಯಾಗಿದೆ. ಮೂಲಸೌಕರ್ಯ ಅಭಿವೃದ್ಧಿಗಾಗಿ ರೂ.11.21 ಲಕ್ಷ ಹಂಚಿಕೆಯಾಗಿದ್ದರೂ ಆ ಪೈಕಿ ರೂ.10.18 ಲಕ್ಷ ಕೋಟಿ ಮಾತ್ರ ವಾಸ್ತವವಾಗಿ ಸಿಗಬಹುದು ಎಂದು ಸ್ವತಃ ಹಣಕಾಸು ಸಚಿವರು ಒಪ್ಪಿಕೊಂಡಿದ್ದಾರೆ. ಪ್ರತಿ ವರ್ಷ ವಿತ್ತೀಯ ಕೊರತೆ ನೀಗಿಸಲು ಸರ್ಕಾರವು ಭಾರಿ ಪ್ರಮಾಣದ ಸಾಲವನ್ನು ಪಡೆಯುತ್ತಿದೆ. ಹೊಸ ಕರೆನ್ಸಿ ನೋಟುಗಳನ್ನು ರಹಸ್ಯವಾಗಿ ಮುದ್ರಿಸುವ ಮೂಲಕವೂ ಕೊರತೆಯನ್ನು ನೀಗಿಸಿಕೊಳ್ಳುತ್ತಿದೆ. ಈ ಬಾರಿ ಹಣಕಾಸು ಸಚಿವರು ಹೇಳಿದಂತೆ ರೂ.14.82 ಲಕ್ಷ ಕೋಟಿ ಮೊತ್ತವನ್ನು ಸಾಲದ ರೂಪದಲ್ಲಿ ಪಡೆಯಲಾಗುತ್ತಿದೆ. ಕಳೆದ 10 ವರ್ಷಗಳಲ್ಲಿ ಭಾರತ ಸರ್ಕಾರವು ಪ್ರತಿ ಸೆಕೆಂಡಿಗೆ ರೂ. 4ಲಕ್ಷದಂತೆ ಸಾಲ ಪಡೆದಿದೆ. 2024ರ ಸೆಪ್ಟೆಂಬರ್‌ವರೆಗೆ ಭಾರತದ ಒಟ್ಟು ಸಾಲ ರೂ.1,86,58,020 ಕೋಟಿ. ಇದು ಸಾರ್ವಕಾಲಿಕ ಗರಿಷ್ಠ ಸಾಲದ ಮೊತ್ತವಾಗಿರುವುದರಿಂದಲೇ, ಸರ್ಕಾರದ ಒಟ್ಟು ವೆಚ್ಚದ ಶೇ.25ರಷ್ಟು ಮತ್ತು ಆದಾಯದ ಶೇ.40ರಷ್ಟು ಮೊತ್ತವು ಸಾಲದ ಬಡ್ಡಿ ಪಾವತಿಯ ಬಾಬತ್ತಿಗೆ ಸಂದಾಯವಾಗುತ್ತದೆ.

ಹಾಗಿದ್ದರೆ ಹೆಚ್ಚುತ್ತಿರುವ ಹಣದುಬ್ಬರ ತಗ್ಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಪ್ರಶ್ನೆ ಎದುರಾಗಬಹುದು. ಆದರೆ, ಈ ಪ್ರಶ್ನೆಯ ಬಗ್ಗೆ ಸರ್ಕಾರವು ತಲೆ ಕೆಡೆಸಿಕೊಳ್ಳದೆ ಅದನ್ನು ವಿತ್ತ ನೀತಿಯನ್ನು ರೂಪಿಸುವ 'ಬುದ್ಧಿವಂತರಿಗೆ' ಬಿಟ್ಟುಕೊಟ್ಟು ಅವರು ಚಿಲ್ಲರೆ ಬೆಲೆ ಸೂಚ್ಯಂಕವು ಎಷ್ಟು ದಶಮಾಂಶ ಕೆಳಗೆ ಇಳಿದಿದೆ ಎಂದು 'ಅನ್ವೇಷಿಸಿದಾಗ' ಕಾರ್ಪೋರೇಟ್ ಸಂಸ್ಥೆಗಳಿಗೆ ನೀಡುವ ಸಾಲದ ಬಡ್ಡಿದರವನ್ನು ಎಷ್ಟು ಪ್ರಮಾಣ ಇಳಿಸಬಹುದೆಂದು ಮಾತ್ರ ಆಲೋಚಿಸುತ್ತದೆ. ದೊಡ್ಡದೊಡ್ಡ ಕಾರ್ಪೊರೇಟ್ ಕುಳಗಳಿಗೆ ನೀಡಿದ ಸಾಲವನ್ನು ಮರುವಸೂಲಿ ಮಾಡುವ ಮೂಲಕ ಆರ್ಥಿಕ ಶಿಸ್ತು ಕಾಯ್ದುಕೊಳ್ಳಬೇಕಿದ್ದ ಸರ್ಕಾರವು ಶ್ರೀಮಂತ ಉದ್ಯಮಿಗಳು ಮಾಡಿದ ಲಕ್ಷಾಂತರ ಕೋಟಿ ಸಾಲವನ್ನು ಮನ್ನಾ ಮಾಡುತ್ತಿದೆ. ಸಾಲ ಮರುಪಾವತಿ ಮಾಡುವ ಸಾಮರ್ಥ್ಯವಿದ್ದ ಉದ್ಯಮಿಗಳೂ ಸಹ ಉದ್ದೇಶಪೂರ್ವಕವಾಗಿ ಸುಸ್ತಿದಾರರಾಗುತ್ತಿದ್ದಾರೆ. 2014–15ರಿಂದ ಇದುವರೆಗೆ ರೂ.14.56 ಲಕ್ಷ ಕೋಟಿ ಸಾಲವನ್ನು 'ಅನುತ್ಪಾದಕ ಆಸ್ತಿ' ಎಂದು ಪರಿಗಣಿಸಿ ಮನ್ನಾ ಮಾಡಲಾಗಿದೆ. ಆ ಮೂಲಕ ಉದ್ಯಮಿಗಳಿಗೆ ಹೊಸದಾಗಿ ಸಾಲ ಪಡೆಯಲು ಅವಕಾಶ ನೀಡಲು ಕೇಂದ್ರವು ಮುಂದಾಗಿದೆ.

### ಹೆಚ್ಚುತ್ತಿರುವ ನಿರುದ್ಯೋಗ

ದೇಶದಲ್ಲಿ ನಿರುದ್ಯೋಗ ಪ್ರಮಾಣ ತೀವ್ರವಾಗಿ ಏರಿದೆ. 20ರಿಂದ 24ರ ವಯೋಮಾನದವರಲ್ಲಿ ಶೇ.44.49 ನಿರುದ್ಯೋಗಿಗಳಿದ್ದಾರೆ. ಒಟ್ಟಾರೆ 32.06 ಕೋಟಿ ಜನರಿಗೆ ದೇಶದಲ್ಲಿ ಉದ್ಯೋಗವೇ ಲಭ್ಯ ಇಲ್ಲ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಓ) ಹಾಗೂ ಮಾನವ ಅಭಿವೃದ್ಧಿ ಸಂಸ್ಥೆಗಳು ಜಂಟಿಯಾಗಿ ನಡೆಸಿದ ಅಧ್ಯಯನವು, ನಿರುದ್ಯೋಗಿಗಳಲ್ಲಿ ಶಿಕ್ಷಿತರ ಪ್ರಮಾಣವು 2000ರಲ್ಲಿ ಶೇ.54ರಷ್ಟು ಇದ್ದದ್ದು, 2022ರ ವೇಳೆಗೆ ಶೇ.66ಕ್ಕೆ ಹೆಚ್ಚಳವಾಗಿದೆ ಎಂಬ ಭಾರಿ ಆಘಾತಕಾರಿ ವಿಷಯವನ್ನು ಬಯಲಿಗೆಳೆದಿದೆ.

ಇಷ್ಟಾಗಿಯೂ, ಹುದ್ದೆಗಳ ಸೃಷ್ಟಿಗೆ ಯಾವುದೇ ನಿರ್ದಿಷ್ಟ ಕಾರ್ಯತಂತ್ರಗಳನ್ನು ಬಜೆಟ್‌ನಲ್ಲಿ ರೂಪಿಸಿಲ್ಲ. 2023ರ ಮಾರ್ಚ್‌ವರೆಗೆ ಕೇಂದ್ರ ಸರ್ಕಾರದಲ್ಲಿ 9.7 ಲಕ್ಷ ಹುದ್ದೆಗಳು ಖಾಲಿ ಉಳಿದಿದ್ದವು. ಅಂದರೆ, ಒಟ್ಟಾರೆ ಮಂಜೂರಾದ ಹುದ್ದೆಗಳ ಪೈಕಿ ಶೇ.24ರಷ್ಟು ಹುದ್ದೆಗಳು ಖಾಲಿ ಉಳಿದಂತೆ. ರೈಲ್ವೆ ಇಲಾಖೆಯೊಂದರಲ್ಲೇ 3.5ಲಕ್ಷ ಹುದ್ದೆಗಳು ಖಾಲಿ ಬಿದ್ದಿವೆ. ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಹಣಕಾಸು ಸಚಿವರು ಬಜೆಟ್‌ನಲ್ಲಿ ಚಕಾರವೆತ್ತಿಲ್ಲ. ಈ ಹುದ್ದೆಗಳಿಗೆ ಬದಲಾಗಿ ಕಡಿಮೆ ವೇತನದಲ್ಲಿ ಗುತ್ತಿಗೆ ಆಧಾರದಲ್ಲಿ ಜನರನ್ನು ದುಡಿಸಿಕೊಳ್ಳಲಾಗುತ್ತಿದೆ. ಹುದ್ದೆ ಭರ್ತಿಗೆ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವ ಬದಲು ಕೌಶಲ್ಯ ತರಬೇತಿ ನೀಡುವ ಬಗ್ಗೆ ಪುಂಖಾನುಪುಂಖವಾಗಿ ವಿತ್ತ ಸಚಿವೆ ಮಾತನಾಡಿದ್ದಾರೆ.

### ಶಿಕ್ಷಣ ಹಾಗೂ ಆರೋಗ್ಯಕ್ಕೆ ಖೋತಾ

ಯುವಜನರ ಬದುಕಿಗೆ ಸೂಕ್ತ ದಿಕ್ಕು ತೋರಿಸಬಲ್ಲ ಉನ್ನತ ಶಿಕ್ಷಣಕ್ಕೆ ಭಾರಿ ಪ್ರಮಾಣದ ಅನುದಾನವನ್ನು ಬಜೆಟ್‌ನಲ್ಲಿ ಕಡಿತ ಮಾಡಲಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ರೂ.1,28,650 ಕೋಟಿಯನ್ನು ಹಂಚಿಕೆ ಮಾಡಿದ್ದು, ಇದು ಒಟ್ಟಾರೆ ಬಜೆಟ್‌ನ ಶೇ2.54ರಷ್ಟು ಮಾತ್ರ. ವಿಶ್ವವಿದ್ಯಾಲಯ ಧನಸಹಾಯ ಆಯೋಗ ಹಾಗೂ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಗೆ ಹಂಚಿಕೆ ಮಾಡುತ್ತಿದ್ದ ಅನುದಾನದಲ್ಲಿ ಕ್ರಮವಾಗಿ ಶೇ.47ರಿಂದ ಶೇ.50ರಷ್ಟು ಕಡಿತ ಮಾಡಲಾಗಿದೆ. ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಆಹಾರದಲ್ಲಿ ಪೌಷ್ಟಿಕಾಂಶವನ್ನು ಹೆಚ್ಚಿಸಬೇಕು ಎಂದು ಅಬ್ಬರದ ಮಾತುಗಳನ್ನು ಉಲ್ಲೇಖಿಸಿರುವ ಬಜೆಟ್‌ನಲ್ಲಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಕ್ಕಾಗಲಿ ಅಥವಾ ಪಿಎಂ–ಪೋಷನ್ ಯೋಜನೆಗಾಗಲಿ ಹೆಚ್ಚು ಹಣವನ್ನು ಒದಗಿಸಿಲ್ಲ ಮಾತ್ರವಲ್ಲ, ಹಿಂದಿನ ವರ್ಷದ ಅನುದಾನಕ್ಕಿಂತ ಕಡಿಮೆ ಮಾಡಲಾಗಿದೆ. ಹಾಗೆಯೇ, ಆರೋಗ್ಯ ಕ್ಷೇತ್ರಕ್ಕೆ ನೀಡಿರುವ ಮೊತ್ತದಲ್ಲೂ ಕಳೆದ ವರ್ಷದ ಹೋಲಿಕೆಯಲ್ಲಿ ಶೇ.2.29ರಷ್ಟು ಕಡಿತವಾಗುವ ಸಾಧ್ಯತೆ ಇದೆ.

ಇನ್ನು ಕೊನೆಯಲ್ಲಿ, ವೈಯಕ್ತಿಕ ಆದಾಯ ತೆರಿಗೆಯ ಪ್ರಮಾಣವನ್ನು ಕಡಿಮೆ ಮಾಡಿರುವ ಘೋಷಣೆಗೆ ಕಿವಿಗಡಚಿಕ್ಕುವ ಪ್ರಚಾರವನ್ನು ನೀಡಿ ಸರ್ಕಾರವು ಜನರ ಮೂಗಿಗೆ ತುಪ್ಪ ಸವರಿದೆ. 140 ಕೋಟಿ ಜನರ ಈ ದೇಶದಲ್ಲಿ 3.2ಕೋಟಿ ಜನರು ಅಂದರೆ, ಶೇ.2.5ರಷ್ಟು ಜನರು ಮಾತ್ರ ವೈಯಕ್ತಿಕ ಆದಾಯ ತೆರಿಗೆದಾರರಾಗಿದ್ದಾರೆ. ಒಟ್ಟಾರೆಯಾಗಿ, ಈ ಬಾರಿಯ ಬಜೆಟ್ ಅತ್ಯಂತ ಜನವಿರೋಧಿಯಾಗಿದ್ದು, ಕಾರ್ಪೊರೇಟ್ ಶಕ್ತಿಗಳನ್ನು ಬಲಪಡಿಸುವ ಉದ್ದೇಶವನ್ನು ಸ್ಪಷ್ಟವಾಗಿ ಬಿಂಬಿಸಿದೆ. ಜನರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿ, ಮೋದಿ 3.0 ಸರ್ಕಾರದ ಮೊದಲ ಪೂರ್ಣ ಪ್ರಮಾಣದ ಬಜೆಟ್ ಅತ್ಯಂತ ನಿರಾಶಾದಾಯಕ ಹಾಗೂ ಜನರನ್ನು ವಂಚಿಸುವ ಪದಪುಂಜಗಳಿಂದ ತುಂಬಿದೆ.

# ಮಣಿಪುರ ಛಿದ್ರ ಛಿದ್ರ: ಒಡೆದ ಮನಗಳು

10ನೇ ಪುಟದಿಂದ ಕೊನೆಯಾಗಬೇಕೆಂದು ಬಯಸುತ್ತಿದ್ದಾರೆ. ಕೇಂದ್ರ ಸರ್ಕಾರವು ಮುಗುಮ್ಮಾಗಿ ಕುಳಿತು ನೋಡುತ್ತಾ, ರಾಜಕೀಯ ಲೆಕ್ಕಾಚಾರವನ್ನು ಹಾಕುತ್ತಾ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲು ಅವಕಾಶ ಮಾಡಿಕೊಟ್ಟಿದೆ.

ಇಂತಹ ಭೀಕರ ಪರಿಸ್ಥಿತಿಯಲ್ಲಿ, ಕೋಮುವಾದಿ–ಜನಾಂಗೀಯವಾದಿ ಹಿಂಸಾಚಾರವನ್ನು ಬಲವಾಗಿ ಹತ್ತಿಕ್ಕಲು, ರಾಜ್ಯವು ಸಹಜ ಸ್ಥಿತಿಗೆ ಮರಳಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಒಗ್ಗಟ್ಟಿನ, ಸಂಘಟಿತ ಜನಾಂದೋಲನವನ್ನು ಕಟ್ಟುವುದು ಅತ್ಯಗತ್ಯವಾಗಿದೆ. ಅದಕ್ಕಾಗಿ, ಎಲ್ಲಾ ಎಡ–ಜನತಾಂತ್ರಿಕ ಶಕ್ತಿಗಳು ಮುಂದೆ ಬಂದು ಬಲಿಷ್ಠವಾದ ಚಳುವಳಿಯು ಆರಂಭವಾಗಬೇಕು.

## 11/02/2025: ಬೆಂಗಳೂರು, ಫ್ರೀಡಂ ಪಾರ್ಕ್:

ರಾಜ್ಯದ ಶಿಕ್ಷಣ ಇಲಾಖೆಯ ಅಕ್ಷರ ದಾಸೋಹ ಯೋಜನೆ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಡುಗೆಯವರು ಮತ್ತು ಅಡುಗೆ ಸಹಾಯಕರನ್ನು ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡಿಸಿ ಎಲ್ಲಾ ಶಾಸನಬದ್ಧ ಸೌಲಭ್ಯಗಳನ್ನು ನೀಡಬೇಕು, ಈ ಹಿಂದೆ ಭರವಸೆ ನೀಡಿರುವಂತೆ ಈ ಬಜೆಟ್‌ನಲ್ಲಿ ಗೌರವ ಧನವನ್ನು ಮಾಸಿಕ ರೂ.6000ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿ ಫ್ರೀಡಂ ಪಾರ್ಕಿನಲ್ಲಿ **ಎಐಯುಟಿಯುಸಿಗೆ ಸಂಯೋಜಿತ ಕರ್ನಾಟಕ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘಟನೆ**ಯಿಂದ ಪ್ರತಿಭಟನೆ ನಡೆಸಲಾಯಿತು. ಇದರ ನೇತೃತ್ವವನ್ನು ಸಂಘಟನೆಯ ನಾಯಕರಾದ ಕಾ. ಪಿ.ಸಂಧ್ಯಾ, ಕಾ. ಶಾಂತಾ ಎ., ಮತ್ತು ಎಐಯುಟಿಯುಸಿ ನಾಯಕರಾದ ಕಾ. ಸೋಮಶೇಖರ್ ಯಾದಗಿರಿ, ಕಾ. ಕೆ.ವಿ ಭಟ್ ಮತ್ತು ಕಾ. ಡಿ.ನಾಗಲಕ್ಷ್ಮಿ ವಹಿಸಿದ್ದರು.

ಅವರ ಇನ್ನಿತರ ಬೇಡಿಕೆಗಳೆಂದರೆ: ಇಪಿಎಫ್, ಇಎಸ್‌ಐ ಸೌಲಭ್ಯಗಳನ್ನು ನೀಡಬೇಕು, ನಿವೃತ್ತಿ ಪರಿಹಾರವಾಗಿ ಕನಿಷ್ಠ ರೂ.2 ಲಕ್ಷ ಇಡುಗಂಟನ್ನು ನೀಡಬೇಕು, ಸಮವಸ್ತ್ರ, ಕೈಗವಸು, ಸ್ಕಾರ್ಫ್ ಏಪ್ರಾನ್‌ಗಳನ್ನು ನೀಡಬೇಕು, 2024ರಲ್ಲಿ ಬರಗಾಲ ಎಂದು ಘೋಷಿಸಿ ಏಪ್ರಿಲ್– ಮೇನಲ್ಲಿ ಕೆಲಸಮಾಡಿಸಿಕೊಂಡಿದ್ದರಿಂದ, ಆ ಎರಡು ತಿಂಗಳುಗಳ ಸಂಬಳ ನೀಡಬೇಕು. ಪಿ.ಎಮ್ ಪೋಷಣ್ ನಿರ್ದೇಶಕರಾದ ಶ್ರೀ. ಸದಾಶಿವ ಪ್ರಭು, ಶಾಲಾ ಶಿಕ್ಷಣ ಇಲಾಖೆಯ ಬಿಸಿಯೂಟದ ಜಂಟಿ ನಿರ್ದೇಶಕರಾದ ಶ್ರೀ. ಹಸನ್ ಮೋಹಿದ್ದೀನ್ ಮತ್ತು ಸಹಾಯಕ ನಿರ್ದೇಶಕರಾದ ಎನ್. ಮಂಜುನಾಥ್, ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿ ಪತ್ರ ಸ್ವೀಕರಿಸಿದರು, ಈ ಬಗ್ಗೆ ಚರ್ಚಿಸುವುದಾಗಿ ಹೇಳಿದರು.



Registered Newspaper

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ವಿದ್ಯಾರ್ಥಿ ವೇತನ ಈ ಕೂಡಲೇ ಬಿಡುಗಡೆ ಮಾಡಿ!

## ಎಐಡಿಎಸ್‌ಓ ನೇತೃತ್ವದಲ್ಲಿ ರಾಜ್ಯದ ವಿದ್ಯಾರ್ಥಿ ಸಮುದಾಯದ ಒಕ್ಕೊರಲ ಆಗ್ರಹ!!

## ಜನರಿಗೆ ಆರೋಗ್ಯ-ಶಿಕ್ಷಣ ನೀಡುವುದು ಸರ್ಕಾರದ ಮುಖ್ಯ ಜವಾಬ್ದಾರಿ: ನ್ಯಾಯಮೂರ್ತಿ ಸಂತೋಷ್ ಹೆಗ್ಡೆ



ವಿದ್ಯಾರ್ಥಿ ಪ್ರತಿಭಟನೆಯ ಜೊತೆಗೆ ನಿಂತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮತ್ತು ಶ್ರೀ. ಉಗ್ರ ನರಸಿಂಹೇಗೌಡ

ಎಲ್ಲ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಒದಗಿಸಲು ಆಗ್ರಹಿಸಿ ಹಾಗೂ ಸರ್ಕಾರಿ ಶಾಲೆಗಳನ್ನು ಮುಚ್ಚುವುದನ್ನು ವಿರೋಧಿಸಿ ಪ್ರತಿಭಟನಾ ಸಮಾವೇಶವೊಂದನ್ನು ಮಾರ್ಚ್ 1 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನಾ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ, ನ್ಯಾಯಮೂರ್ತಿ ಸಂತೋಷ್ ಹೆಗಡೆಯವರು, ವಿದ್ಯಾರ್ಥಿ ವೇತನವನ್ನು ಸರ್ಕಾರ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸುತ್ತಾ, ಆರೋಗ್ಯ ಹಾಗೂ ಶಿಕ್ಷಣ ಸರ್ಕಾರ ಜನಗಳಿಗೆ ನೀಡಬೇಕಾದ ಮುಖ್ಯ ಜವಾಬ್ದಾರಿ. ಸರಕಾರಿ ಶಾಲೆಗಳನ್ನು ಮುಚ್ಚುತ್ತಿರುವುದಕ್ಕೆ ಕಾರಣ ಖಂಡಿತ ದಾಖಲಾತಿ ಕಡಿಮೆ ಇರುವುದಲ್ಲ, ಬದಲಿಗೆ, ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸದೇ ಇರುವುದು. ಈ ಹೋರಾಟ ನಿಮ್ಮ ಭವಿಷ್ಯಕ್ಕಾಗಿ, ನಿಮ್ಮ ಕುಟುಂಬಕ್ಕಾಗಿ ಈ ಹೋರಾಟವನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬೇಡಿ, ಸದಾ ನಾನು ನಿಮ್ಮೊಂದಿಗಿರುತ್ತೇನೆ ಎಂದು ಎಲ್ಲಾ ವಿದ್ಯಾರ್ಥಿಗಳಿಗೂ ಭರವಸೆ ನೀಡಿದರು.



ವೇದಿಕೆಯ ಮೇಲೆ: ನ್ಯಾಯಮೂರ್ತಿ ಸಂತೋಷ್ ಹೆಗ್ಡೆ. ಅವರ ಬಲಗಡೆ: ಕಾ. ಸುಭಾಷ್ ಎಡದಿಂದ: ಶ್ರೀ. ಉಗ್ರ ನರಸಿಂಹೇಗೌಡ, ಕಾ.ಕೆ.ಎಸ್. ಅಶ್ವಿನಿ, ಕಾ. ಹರೀಶ್, ಕಾ.ಅಜಯ್ ಕಾಮತ್, ಮತ್ತಿತರ ರಾಜ್ಯ ನಾಯಕರು

ಸಾಮಾಜಿಕ ಹೋರಾಟಗಾರರಾದ ಶ್ರೀ. ಉಗ್ರ ನರಸಿಂಹೇಗೌಡರು ಮಾತನಾಡಿ, ಸಂಪೂರ್ಣವಾಗಿ ವಿದ್ಯಾರ್ಥಿ ವೇತನದ ಮೇಲೆ ಅವಲಂಬಿತವಾಗಿರುವ ವಿದ್ಯಾರ್ಥಿಗಳ ಬಗೆಗೆ ನಿರ್ಲಕ್ಷ್ಯ ಧೋರಣೆ ತೋರಿರುವ ಸರ್ಕಾರವನ್ನು ಖಂಡಿಸುತ್ತಾ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಯನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

ಎಐಡಿಎಸ್‌ಓದ ರಾಜ್ಯ ಉಪಾಧ್ಯಕ್ಷೆ ಕಾ. ಅಭಯಾ ದಿವಾಕರ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಾಧ್ಯಕ್ಷೆ ಕಾ. ಅಶ್ವಿನಿ ಕೆ. ಎಸ್, ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್, ಕಛೇರಿ ಕಾರ್ಯದರ್ಶಿ ಕಾ. ಮಹಾಂತೇಶ ಬೀಳೂರು, ಖಜಾಂಚಿ ಕಾ. ಸುಭಾಷ್ ಬೆಟ್ಟದಕೊಪ್ಪ, ಮತ್ತಿತರ ರಾಜ್ಯ ನಾಯಕರು ಹಾಗೂ ಆಂಧ್ರಪ್ರದೇಶದ ರಾಜ್ಯಾಧ್ಯಕ್ಷರಾದ ಕಾ. ಹರೀಶ್ ಉಪಸ್ಥಿತರಿದ್ದರು. ರಾಜ್ಯದ ಹಲವು ಜಿಲ್ಲೆಗಳಿಂದ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳ ಈ ಪ್ರತಿಭಟನಾ ಸಮಾವೇಶದಲ್ಲಿ 6000 ಕ್ಕೂ ಹೆಚ್ಚು ಸರಕಾರಿ ಶಾಲೆಗಳನ್ನು ಮುಚ್ಚುವುದರ ವಿರುದ್ಧ ಹಾಗೂ ರಾಜ್ಯದ ಒಂಬತ್ತು ವಿ. ವಿ ಗಳನ್ನು ಮುಚ್ಚುವುದರ ವಿರುದ್ಧ ಗೊತ್ತುವಳಿಗಳನ್ನು ಮಂಡಿಸಲಾಯಿತು.



'ಸಾರ್ವಜನಿಕ ಶಿಕ್ಷಣ ಉಳಿಸಿ-ಸರ್ಕಾರಿ ಶಾಲೆಗಳನ್ನು ರಕ್ಷಿಸಿ': ಎಐಡಿಎಸ್‌ಓ ಸಂಘಟಿತ ಪ್ರತಿಭಟನಾ ಸಮಾವೇಶದ ನೇತೃತ್ವದಲ್ಲಿ, ಕಾ.ಸೌರವ್ ಘೋಷ್, ಎಐಡಿಎಸ್‌ಓ ರಾಷ್ಟ್ರಾಧ್ಯಕ್ಷರು, ಕಾ. ಶಿಬಾಶಿಶ್ ಪ್ರಹರಾಜ್, ಎಐಡಿಎಸ್‌ಓ ಪ್ರಧಾನ ಕಾರ್ಯದರ್ಶಿಗಳು, ಮತ್ತಿತರ ರಾಜ್ಯ ನಾಯಕರು

**25/02/2025:**
**ಹೊಸಪೇಟೆ, ವಿಜಯನಗರ:**



"ಮಹಿಳೆಯ ಘನತೆ ಮತ್ತು ಮಾನವ ಮೌಲ್ಯ ಉಳಿಸಿ-ಯುವಜನ ಸಂಕಲ್ಪ ಸಮಾವೇಶ"ದಲ್ಲಿ ಮಾತನಾಡುತ್ತಿರುವವರು, ಹಿರಿಯ ಲೇಖಕ ಡಾ. ಅಮರೇಶ ನುಗಡೋಣಿ. ವೇದಿಕೆಯಲ್ಲಿ, ಎಡದಿಂದ: ಎಐಡಿವೈಓ ರಾಜ್ಯಾಧ್ಯಕ್ಷರಾದ ಕಾ. ಶರಣಪ್ಪ ಉದ್ಬಾಳ್, ಎಐಡಿವೈಓ ಜಿಲ್ಲಾಧ್ಯಕ್ಷರಾದ ಕಾ.ಪ್ರಶಾಂತ್, ಸಾಮಾಜಿಕ ಹೋರಾಟಗಾರರಾದ ಡಾ. ಎನ್. ಪ್ರಮೋದ್, ಎಐಡಿವೈಓ ರಾಜ್ಯ ಉಪಾಧ್ಯಕ್ಷರಾದ ಕಾ. ಚನ್ನಬಸವ ಜಾನೇಕಲ್, ಎಐಡಿವೈಓ ಜಿಲ್ಲಾ ಕಾರ್ಯದರ್ಶಿಗಳಾದ ಕಾ.ಪಂಪಾಪತಿ

Statement about ownership and other particulars about newspaper **KARMIKA DRUSHTIKONA** to be printed in the first issue after last day of February

**FORM IV (See Rule 8)**

| | |
|---|---|
| Place of Publication | : No. 31, 3rd Cross, Malleswaram, Bengaluru-03 |
| Periodicity of its Publication | : Monthly |
| Printer's Name | : K.Radhakrishna |
| Nationality | : Indian |
| Address | : No. 31, 3rd Cross, Malleswaram, Bengaluru-03 |
| Publisher's Name | : K.Radhakrishna |
| Nationality | : Indian |
| Address | : No. 31, 3rd Cross, Malleswaram, Bengaluru-03 |
| Editor's Name | : K.Radhakrishna |
| Nationality | : Indian |
| Address | : No. 31, 3rd Cross, Malleswaram, Bengaluru-03 |

Name and address of the individuals : **Karanataka State Committee,**
Who own the newspapers and **SOCIALIST UNITY CENTRE OF INDIA (COMMUNIST)**
Printers or Shareholders holding
More than one percent of the
total capital

I, K.Radhakrishna hereby declare that the particulars given above are true to the best of my knowledge and belief.

Date: 01-03-2025

Sd/-
K.Radhakrishna
Signature of Publisher

Published by: K.Radhakrishna on behalf of **SOCIALIST UNITY CENTRE OF INDIA-COMMUNIST**, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120. Website: www.sucicommunist.org **EDITOR: K.RADHAKRISHNA**